BUDGET ESTIMATES FOR 1964-65—DEMANDS FOR GRANTS Nos. 14, 16, 24, 28 & 44.

Sri K. MALLAPPA (Minister for Industries).—Sir, on the recomendation of the Governor of Mysore, I beg to move ;

DEMAND No. 14.

"That a sum not exceeding Rs. 33,57,000 be granted to the Government to defray the charges which will come in course of payment during the financial year for the period ending 31st day of March 1965 in respect of 'Supplies and Disposals.''

DEMAND No. 16.

" That a sum not exceeding Rs. 16,97,000 be granted to the Government to defray the charges which will come in course of payment during the financial year for the period ending 31st day of March 1965 in respect of 'Scientific Departments.''

DEMAND No. 24

"That a sum not exceeding Rs. 10,89,10,200 be granted to the Government to defray the charges which will come in course of payment during the financial year for the period ending 31st day of March 1965, in respect of 'Industries'."

DEMAND No. 28

"That a sum not exceeding Rs. 25,000 be granted to the Government to defray the charges which will come in course of payment during the financial year for the period ending 31st day of March 1965, in respect of 'Capital Outlay on Industrial Development'."

DEMAND No. 44

"That a sum not exceeding Rs. 3,22,47,000 be granted to the Government to defray the charges which will come in course of payment during the financial year for the period ending 31st day of March 1965, in respect of 'Capital Outlay on Industrial Development'."

Mr. SPEAKER.—Motion moved :

"That a sum not exceeding Rs. 33,57,000 be granted to the Government to defray the charges which will come in course of payment during the financial year for the period ending 31st day of March 1965 in respect of 'Supplies and Disposals'."

(MR. SPEAKER)

"That a sum not exceeding Rs. 16,97,000 be granted to the Government to defray the charges which will come in course of payment during the financial year for the period ending 31st day of March 1965 in respect of 'Scientific Departments'."

"That a sum not exceeding Rs. 10,89,10,200 be granted to the Government to defray the charges which will come in course of payment during the financial year for the period ending 31st day of March 1965 in respect of 'Industries'."

"That a sum not exceeding Rs. 25,000 be granted to the Government to defray the charges which will come in course of payment during the financial year for the period ending 31st day of March 1965 in respect of 'Capital outlay on Industrial Development'."

"That a sum not exceeding Rs. 3,22,47,000 be granted to the Government to defray the charges which will come in course of payment during the financial year for the period ending 31st day of March 1965 in respect of 'Capital Outlay on Industrial Development'."

All the demands and all the cut motions are before the House for discussion.

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸಿಪುರ).—ಸ್ವಾಮಿ, ಇದರಲ್ಲಿ ವೀವರ್ಸ್ ಕೋ-ಆಪರೇಟಿವ್ ಸೊಸೈಟಿಗಳನ್ನು ಕೂಡ ಸೇರಿಸಿದ್ದೀರಿ. ಇದು ಈ ಮಂತ್ರಿಗಳಿಗೆ ಸೇರುವುದಿಲ್ಲ. ಇದಕ್ಕೆ ಯಾರು ಉತ್ತರ ಕೊಡುತ್ತಾರೆಂದು ನಮಗೆ ಬೇಕಾಗಿತ್ತು.

Mr. SPEAKER.—The member may mark it and send it on to the Secretary's Table. He will deal with it. What time would the Minister require for reply ?

Sri K. MALLAPPA.—I require at least 45 minutes Sir. That depends upon how the debate develops.

Sri C. J. MUCKANNAPPA.—Let the whole day be devoted for discussion Sir.

Mr. SPEAKER.—Time allotted is four hours. Let us see how it develops.

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಅಧ್ಯಕ್ಷರೇ, ಈ ದಿವಸ ಕೈಗಾರಿಕೆ ಮತ್ತು ಇನ್ನಿತರ ಬಾಬುಗಳಿಗೆ ಸಂಬಂಧಪಟ್ಟ ಹಾಗೆ ಕೈಗಾರಿಕಾ ಮಂತ್ರಿಗಳು ಸುಮಾರು 14 ಕೋಟಿ ರೂಪಾಯಿಗಳ ಬೇಡಿಕೆಯನ್ನು ನಮ್ಮ ಈ ಸಭೆಯ ಮುಂದೆ ಇಟ್ಟಿದ್ದಾರೆ. ಕೈಗಾರಿಕೆಯ ವಿಚಾರದಲ್ಲಿ ಮಾತನಾಡತಕ್ಕ ಸಂದರ್ಭದಲ್ಲಿ ನಾನು ಒಂದು ಮಾತನ್ನು ಈ ಮಂತ್ರಿಮಂಡಲಕ್ಕೆ ಹೇಳಬೇಕಾಗಿದೆ. ಇಡೀ ಭಾರತ ದೇಶದಲ್ಲೆಲ್ಲೂ ಕೂಡ ಕೈಗಾರಿಕೆಗೆ ಪ್ರಪ್ರಥಮವಾಗಿ ಎಲ್ಲಾ ಉತ್ತೇಜನಗಳನ್ನು ಕೊಟ್ಟು ಸರ್ಕಾರವೇ ತನ್ನ ಮುಂದಾಳುತ್ವದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವಂತಹ ಕೀರ್ತಿ ಮೈಸೂರು ದೇಶಕ್ಕೆ ಇತ್ತು. ಅಂತಹ ಮೈಸೂರು ದೇಶದಲ್ಲ ಇವತ್ತಿನ ದಿವಸ ಕೈಗಾರಿಕೆಯ ಪ್ರಗತಿ ಬಹಳ ಹಿಂದಕ್ಕೆ ಹೋಗಿದೆ. ಅಕ್ಕಪಕ್ಕದ ಮತ್ತು ಇನ್ನೂ ಇತರ ಭಾಗಗಳಿಂದ ಮೈಸೂರು ದೇಶಕ್ಕೆ ಬಂದು ಕೈಗಾರಿಕೆಗಳ ಪ್ರಗತಿಯನ್ನು ನೋಡಿ ಆಯಾ ದೇಶಗಳ ಅನೇಕ ಅಧಿಕಾರಿಗಳನ್ನು ನಮ್ಮ ದೇಶಕ್ಕೆ ಕಳುಹಿಸಿ ಇಲ್ಲಿನ ಕೈಗಾರಿಕೆಯಲ್ಲಿ ಅಧ್ಯಯನ ಮಾಡತಕ್ಕ ಕಾಲ ಒಂದಾನೊಂದು ಕಾಲದಲ್ಲಿ ಇತ್ತು. ಈಗ ನಮ್ಮ ಅಕ್ಕಪಕ್ಕದ ಪ್ರಾಂತಗಳಾದ ಮದ್ರಾಸ್ ಮತ್ತು ಆಂಧ್ರಗಳಿಗಿಂತಲೂ ಬಹಳ ಹಿಂದೆ ಬಿದ್ದಿದೆ. ಈ ಒಂದು ಅಂಶ ಬಹಳ ವಿಷಾದಕರವಾದ

ಸಂಗತಿಯೆಂದು ನಾನು ಮಂತ್ರಿಮಂಡಲಕ್ಕೆ ಹೇಳಬೇಕೆಂದಿದ್ದೇನೆ. ಅದಕ್ಕೆ ಕಾರಣ ಅನೇಕವಿವೆ. ಕೈಗಾರಿಕೆಯ ಪ್ರಗತಿಗೆ ಒಂದು ಶಕ್ತಿ ರೂಪದಲ್ಲಿರತಕ್ಕಂಥಾದ್ದು ವಿದ್ಯುಚ್ಛಕ್ತಿ. ಅದರ ಸರಬರಾಜು ನಮ್ಮ ದೇಶದಲ್ಲಿ ಬಹಳ ಹಿಂದೆ ಬಿದ್ದಿದೆ. ಯಾವ ಕೈಗಾರಿಕೋದ್ಯಮವನ್ನು ಸ್ಥಾಪನೆ ಮಾಡುವುದಕ್ಕೂ ಪವರ್ ಬೇಕು. ಎಷ್ಟೋ ವೇಳೆ ವಿದ್ಯುಚ್ಛಕ್ತಿ ಬೇಕು ಎಂದು ಅರ್ಜಿಗಳನ್ನು ಹಾಕಿಕೊಂಡರೂ ಈ ಸರ್ಕಾರದವರು ಅವರಿಗೆ ಸಕಾಲದಲ್ಲಿ ವಿದ್ಯುಚ್ಛಕ್ತಿ ಸರಬರಾಜು ಮಾಡುವ ಶಕ್ತಿ ಇಲ್ಲದೇ ಇದ್ದುದರಿಂದ ಈ ದೇಶದಿಂದ ಅನೇಕ ಜನರು ಅದರಲ್ಲೂ ಕೈಗಾರಿಕೋದ್ಯಮಿಗಳು ಹೊರಗಡೆಗೆ ಅನೇಕ ರೀತಿಯಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಹೊರಟುಹೋದರು. ಈಗ ಹೊಸದಾಗಿ ಕೈಗಾರಿಕೆಗಳನ್ನು ಸ್ಥಾಪನೆಮಾಡಬೇಕೆಂದು ಬಂದಂಥ ಜನಗಳಿಗೆ ಸಾಕಷ್ಟು ಉತ್ತೇಜನ, ಸಾಕಷ್ಟು ಜ್ಞಾನ, ತಿಳುವಳಿಕೆಯನ್ನು ಕೊಡತಕ್ಕ ಶಕ್ತಿ ನಮ್ಮ ಕೈಗಾರಿಕೆ ಇಲಾಖೆಯಲ್ಲಿಲ್ಲ. ಇವತ್ತು ಲೋಕೋಪಯೋಗಿ ಇಲಾಖೆಯಲ್ಲಿ ಕಂಟ್ರಾಕ್ಟರ್ಸ್ ಕೆಲವು ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ತಮ್ಮ ಸ್ವಾಧೀನಕ್ಕೆ ಮಾಡಿಕೊಂಡು ದೇಶದಲ್ಲಿ ಅಪಾರವಾದ ಹಣವನ್ನು ಕೆಲವೇ ಜನ ಹಂಚಿಕೊಳ್ಳುತ್ತಿದ್ದಾರೆ. ಅದೇ ರೀತಿಯಲ್ಲಿ ಮೈಸೂರು ದೇಶದಲ್ಲಿ ಈ ಕೈಗಾರಿಕೆಯ ನೆಪದಲ್ಲಿ ಏನೇನು ಸೌಲಭ್ಯಗಳು ದೊರಕುತ್ತವೋ ಅವನ್ನೆಲ್ಲಾ ಕೆಲವೇ ಜನರಿಗೆ ಕೊಡಲು ಮಾತ್ರ ಮೀಸಲಾಗಿಟ್ಟಿದ್ದಾರೆ. ಅವರು ಆ ಸೌಲಭ್ಯಗಳನ್ನು ಹೊಂದಿ ಈ ಮೈಸೂರುದೇಶದಲ್ಲಿ ಕೈಗಾರಿಕೆಗಳಲ್ಲಿ ಎಷ್ಟು ಫಲಕಾರಿಯಾಗಿ ಮತ್ತು ಉತ್ತೇಜನಕಾರಿಯಾಗಿ ಮುಂದುವರೆಯಬೇಕಾಗಿತ್ತೋ ಅಷ್ಟು ಮುಂದುವರಿಯಲಿಲ್ಲವೆಂದು ನಾನು ಒತ್ತಿ ಒತ್ತಿ ಹೇಳುತ್ತೇನೆ. ಮೈಸೂರು ದೇಶ ತನ್ನ ಸಂಪತ್ತನ್ನು ಜಾಸ್ತಿ ಮಾಡಿಕೊಳ್ಳುವ ಅವಕಾಶವಿದೆಯೆಂದರೆ ಕೇವಲ ಕೈಗಾರಿಕೆಗಳಿಂದ ಮಾತ್ರವೆ. ಇನ್ನು ನೀರಾವರಿ ಯೋಜನೆ ವಿಷಯವಾಗಿ ಹೇಳುವುದಾದರೆ ನಾವು ಅಕ್ಕಪಕ್ಕದ ದೇಶಗಳಿಗಿಂತಲೂ ಬಹಳ ಹಿಂದುಳಿದಿದ್ದೇವೆ. ನಿಜವಾಗಿ ನಾವು ಮದ್ರಾಸ್, ಕೇರಳ, ಆಂಧ್ರ ಪ್ರದೇಶಗಳ ಮಟ್ಟಕ್ಕೆ ಹೋಗುವುದಕ್ಕಾಗುವುದಿಲ್ಲ. ನಿಜವಾಗಿಯೂ ನಮ್ಮ ದೇಶದ ಸಂಪತ್ತನ್ನು ಜಾಸ್ತಿ ಮಾಡಬೇಕಾದರೆ ದಿವಂಗತ ಸರ್ ಎಂ. ವಿಶ್ವೇಶ್ವರಯ್ಯನವರು ಹೇಳಿರುವ ಹಾಗೆ ಕೈಗಾರಿಕೆಯ ಪ್ರಗತಿಯನ್ನು ಮಾಡಬೇಕು. ಅವರು ರೂರಲ್ ಇಂಡಸ್ಟ್ರಿಯಲೈಸೇಷನ್ ಸ್ಕೀಮು ಎಂಬುದಾಗಿ ಒಂದು ದೊಡ್ಡ ಯೋಜನೆಯೊಂದನ್ನು ಇಟ್ಟರು. ಈ ಕಾಂಗ್ರೆಸ್ ಸರ್ಕಾರ ಬಂದಮೇಲೆ ಸರ್ ಎಂ. ವಿಶ್ವೇಶ್ವರಯ್ಯನವರು ಏನೊಂದು ಯೋಜನೆಯನ್ನು ತಮ್ಮ ಸ್ವಂತ ಅನುಭವದಿಂದ ಇಟ್ಟರೋ ಅದು ನೀರು ಪಾಲಾಯಿತು. ಎಲ್ಲಾ ಹಳ್ಳಿಗಳಲ್ಲೂ ಸಾಧ್ಯವಿಲ್ಲದೆ ಇದ್ದರೂ ತಾಲ್ಲೂಕು ಮಟ್ಟದಲ್ಲಾದರೂ ಒಂದೊಂದು ಕೈಗಾರಿಕೆಯನ್ನು ನಡೆಸಬೇಕು ಎಂಬ ಒಂದು ದೊಡ್ಡ ಸ್ಕೀಮನ್ನು ಸಹ ಇಟ್ಟರು. ಅದನ್ನು ಕಾರ್ಯಗತಮಾಡತಕ್ಕ ಶಕ್ತಿ ಮತ್ತು ನಿಸ್ಪೃಹರಾಗಿರತಕ್ಕಂಥ ಅಧಿಕಾರಿಗಳು ಇಲ್ಲದೇ ಇದ್ದುದರಿಂದ ಆ ಸ್ಕೀಮೇ ನೀರು ಪಾಲಾಯಿತು. ನನಗೆ ತಿಳಿದ ಹಾಗೆ ಮೈಸೂರು ದೇಶದಲ್ಲಿ ಅನೇಕ ಕೈಗಾರಿಕೆಗಳಿವೆ. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್, ಖಾದೀ ಬೋರ್ಡ್ ಮುಂತಾದ ಇನ್ನೂ ಇತರ ಇಂಡಸ್ಟ್ರಿಯಲ್ ಬೋರ್ಡ್ಸ್—ಹೀಗೆ ನಾಲ್ಕೈದು ಇಲಾಖೆಗಳು ಗಾಂಧಿನಗರದಲ್ಲಿವೆ. ಇದರಲ್ಲಿ ಸ್ವಲ್ಪ ಖದೀಮರು ಇರುತ್ತಾರೆ. ಅವರು ಈ ಸರ್ಕಾರಿ ಕೈಗಾರಿಕೆ ಕ್ಷೇತ್ರದಲ್ಲಿ ಬೇಕಾದ ಸೌಲತ್ತುಗಳನ್ನು ಎಲ್ಲಾ ಕಡೆಗಳಲ್ಲಿಯೂ ಸಾಲ ತೆಗೆದುಕೊಳ್ಳುವ ಅವಕಾಶವನ್ನು ಮಾಡಿಕೊಂಡಿದ್ದಾರೆ. ಇವತ್ತು ಆ ರೀತಿ ಸೌಲಭ್ಯಗಳನ್ನು ಕೊಡತಕ್ಕ ಕಾರ್ಪೊರೇಷನ್ನುಗಳು ಬೇಕಾದಷ್ಟಿವೆ. ಅವುಗಳಲ್ಲಿ ಕೆಲವನ್ನು ಹೇಳುತ್ತೇನೆ. ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್, ಫೈನಾನ್ಸ್ ಕಾರ್ಪೊರೇಷನ್, ಆಲ್ ಇಂಡಿಯಾ ಕಾರ್ಪೊರೇಷನ್ ಮತ್ತು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೊರೇಷನ್—ಹೀಗೆ 28 ಕಾರ್ಪೊರೇಷನ್ನುಗಳಿವೆ. ಯಾವ್ಯಾವ ಉದ್ಯಮಕ್ಕೆ ಎಲ್ಲೆಲ್ಲಿ ಕಚ್ಚಾಮಾಲು ಸಿಕ್ಕಬಹುದೆಂಬುದನ್ನು ನೋಡಬೇಕು. ದೇಶದಲ್ಲಿ ವಿದ್ಯಾವಂತ ಯುವಕರಾದವರಿಗೆ ಅದರಲ್ಲೂ ದೇಶದ ಸಂಪತ್ತನ್ನು ಜಾಸ್ತಿಮಾಡಬೇಕು ಎಂಬುದಾಗಿ ಬರುವಂತಹವರಿಗೆ ಸಕಾಲದಲ್ಲಿ ಒಂದು ನೆರವನ್ನು ಕೊಡುವ ಅವಕಾಶ ನಮ್ಮ ದೇಶದಲ್ಲಿಲ್ಲ. ತಮ್ಮ ಅಧಿಕಾರದ ಅವಧಿಯಲ್ಲಿ ಇಂತಹ ಅವಕಾಶವನ್ನು ನೇರವಾಗಿ ನಿಸ್ಪೃಹರಾಗಿ ಕೆಲಸಮಾಡುವವರಿಗೆ ಒದಗಿಸಿಕೊಟ್ಟರೆ ನಮ್ಮ ದೇಶದಲ್ಲಿ ಒಂದು ದೊಡ್ಡ ಉಪಕಾರವನ್ನು ಮಾಡಿದಂತಾಗುತ್ತದೆ, ಇಲ್ಲದಿದ್ದರೆ ಈ ಕೈಗಾರಿಕೆ ಕೇವಲ ಬೋಗಸ್ ಎಂದು ಹೇಳುತ್ತೇನೆ. ಕೆಲವರು ಬೋರ್ಡುಗಳನ್ನು ಹಾಕಿಕೊಂಡು ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳಾಗಿದ್ದಾರೆ. ಅವರು ಇತ್ತೀಚೆಗೆ ದೊಡ್ಡ ದೊಡ್ಡ ವ್ಯಾಪಾರಗಳನ್ನು ಮಾಡುತ್ತಿದ್ದಾರೆ. ಸುಳ್ಳು ಲೆಕ್ಕಗಳನ್ನು ಇಟ್ಟು ವ್ಯಾಪಾರಮಾಡುವವರಿಗೆ ಈ ಸರ್ಕಾರ ಅನೇಕ ರೀತಿಯಲ್ಲಿ ಸಹಾಯಮಾಡಿಕೊಟ್ಟಿದ್ದಾರೆ. ಇದರಿಂದಲೇ ಸಾಕಷ್ಟು ಕೈಗಾರಿಕೆ ಪ್ರಗತಿಯಾಗಿಲ್ಲ. ಅಂತಹವರು ಈಗ ಹಣವಂತರಾಗಿದ್ದಾರೆ. ಕೈಗಾರಿಕೆ ಕ್ಷೇತ್ರಕ್ಕೆ ಬರುವವರ ನೀತಿಯೇನೋ ಒಳ್ಳೆಯದು, ಆದರೆ ಅವರು ಅತಿ ಜಾಗ್ರತೆಯಾಗಿ ಶ್ರೀಮಂತರಾಗಬೇಕು ಎಂಬ ಉದ್ದೇಶದಿಂದ ಈ ಕೈಗಾರಿಕೆಯ ಕ್ಷೇತ್ರಕ್ಕೆ ಬರುತ್ತಿದ್ದಾರೆ. ಸುಲಭದಲ್ಲಿ ಮತ್ತು ಶೀಘ್ರದಲ್ಲಿ ದೊಡ್ಡ ಹಣಗಾರನಾಗಿ ಒಳ್ಳೆಯ ಕಾರಿನಲ್ಲಿಯೇ ಓಡಾಡಬೇಕೆಂಬ ಮನೋಭಾವವುಂಟಾಗುತ್ತದೆ. ಅದಕ್ಕಾಗಿ ಈ ಸರ್ಕಾರದವರು

(ಶ್ರೀ ಎಸ್. ಶಿವಪ್ಪ)

ಅವರಿಗೆ ಬೇಕಾದಷ್ಟು ಸಲಕರಣೆಗಳನ್ನು ಕೊಡುತ್ತಿರುತ್ತಾರೆ. ದೇಶದ ಸಂಪತ್ತನ್ನು ಜಾಸ್ತಿ ಮಾಡಿಕೊಳ್ಳುವುದಕ್ಕೆ ಬದಲಾಗಿ ತಮ್ಮ ಸ್ವಂತ ಸಂಪತ್ತನ್ನು ಇತ್ತೀಚೆಗೆ ಅವರು ಜಾಸ್ತಿಮಾಡಿಕೊಳ್ಳುತ್ತಿದ್ದಾರೆ. ಬಹುಶಃ ಇದು ಕೈಗಾರಿಕೆಯ ಮಂತ್ರಿಗಳಿಗೆ ಸ್ವಲ್ಪ ಗೊತ್ತಿರಬಹುದು. ಅದನ್ನು ತಡೆಗಟ್ಟತಕ್ಕ ಶಕ್ತಿ ಇವರಿಗೆ ಬಹಳವಾಗಿ ಬೇಕಾಗಿದೆ. ಇತ್ತೀಚೆಗೆ ಇಂತಹ ಶಕ್ತಿಗಳು ಜಾಸ್ತಿಯಾಗಿ ಬೆಳೆದು ನಮ್ಮ ಮೇಲೆ ಅಪಪ್ರಚಾರ ಮಾಡುತ್ತಿವೆ. ಅಂತಹ ಒಂದು ಗುಂಪನ್ನು ಇವರು ನಿಜವಾಗಿ ತಡೆಗಟ್ಟಬೇಕಾಗಿದೆ. ನಾನು ಮೊನ್ನೆ ಕೆಲವು ದಿನಗಳ ಹಿಂದೆ ಬೊಂಬಾಯಿಗೆ ಹೋಗಿದ್ದಾಗ ಅಲ್ಲಿ ನಮ್ಮ ಮೈಸೂರಿನ ಕೆಲವು ಕಚ್ಚಾ ಮಾಲುಗಳಿಂದ ಕೈಗಾರಿಕೆಗಳನ್ನು ಅಲ್ಲಿನ ಪ್ರಮುಖ ವರ್ತಕರು ನಡೆಸುತ್ತಿದ್ದರು. ಸ್ಟೇನ್‌ಲೆಸ್ ಸ್ಟೀಲ್ ಕೈಗಾರಿಕೆಯೂ ನಡೆಯುತ್ತಿತ್ತು. ನಮ್ಮ ಮೈಸೂರು ಕೈಗಾರಿಕೆ ಕ್ಷೇತ್ರದಲ್ಲಿ ಪ್ರಥಮ ಸ್ಥಾನವನ್ನು ಪಡೆದಿದ್ದರೂ ಅಲ್ಲಿನ ಕಚ್ಚಾಮಾಲುಗಳು ಬೊಂಬಾಯಿಗೆ ಹೋಗಿ ಅಲ್ಲಿ ಕೈಗಾರಿಕೆ ಸಂಪತ್ತನ್ನು ಜಾಸ್ತಿಮಾಡಿಕೊಳ್ಳುವುದಕ್ಕೆ ಬೆಂಬಲ ಬರುತ್ತಾ ಇದೆಯಲ್ಲಾ, ನಮ್ಮ ಮೈಸೂರಿಗೆ ಆ ಒಂದು ಅವಕಾಶ, ಬೆಂಬಲ ಸಾಕಷ್ಟು ಸಿಗುತ್ತಿಲ್ಲವಲ್ಲಾ ಎಂದು ನಾನು ಬಹಳವಾಗಿ ನೊಂದುಕೊಂಡೆ. ನಮ್ಮ ದೇಶಕ್ಕೆ ಬರಬೇಕಾದ ಕಚ್ಚಾ ಮಾಲುಗಳು ಆ ದೇಶದಲ್ಲಿ ಉತ್ಪತ್ತಿಯಾಗುತ್ತಿವೆ. ಇದು ತಪ್ಪಿ ನಮ್ಮ ದೇಶದಲ್ಲಿ ತಯಾರಾಗತಕ್ಕ ಕಚ್ಚಾ ಮಾಲುಗಳು ನಮ್ಮ ದೇಶದ ಕೈಗಾರಿಕೆಗೋಸ್ಕರ ಉಪಯೋಗವಾಗಬೇಕು. ಆಗ ನಮ್ಮ ದೇಶದಲ್ಲಿ ಹೆಚ್ಚು ಜನರಿಗೆ ಚಾಕರಿ ಸಿಗುತ್ತದೆ. ವ್ಯಾಪಾರ ಚೆನ್ನಾಗಿ ನಡೆಯುತ್ತದೆ. ನಮ್ಮ ದೇಶದ ಸಂಪತ್ತೂ ಸಹ ಉಳಿಯುತ್ತದೆ. ಇಂತಹ ಅವಕಾಶ ಕೈಗಾರಿಕೆಯ ಪ್ರಗತಿಯಲ್ಲಿ ಆಗಬೇಕು. ದೊಡ್ಡ ದೊಡ್ಡ ಜನರು ಇದರ ಹಿಂದೆ ಇದ್ದಾರೆ. ಈ ಬಗ್ಗೆ ಕಟ್ಟುನಿಟ್ಟಾದ ಕಾನೂನುಗಳನ್ನು ಮಾಡಬೇಕು ಎಷ್ಟೇ ನಿಷ್ಠೂರ ಬಂದರೂ ಇದನ್ನು ತಪ್ಪಿಸಬೇಕೆಂದು ನಾನು ಕೈಗಾರಿಕೆಯ ಮಂತ್ರಿಗಳಲ್ಲಿ ಒತ್ತಾಯಪೂರ್ವಕವಾಗಿ ಇವತ್ತು ಹೇಳುತ್ತೇನೆ.

(SMT. NAGARATHNAMMA HIREMATH (Chairman) in the Chair.)

ಇವೊತ್ತು ಕೈಗಾರಿಕೆ ಎಷ್ಟರಮಟ್ಟಿಗೆ ನಮ್ಮ ದೇಶದಲ್ಲಿ ನಡೆಯುತ್ತಿದೆ ಎಂಬುದನ್ನು ನೋಡಬೇಕಾಗಿದೆ. ಹಿಂದೆ ಮೈಸೂರು ದೇಶದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರು ಕೆಲವು ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದರು. ಭದ್ರಾವತಿ ಕಬ್ಬಿಣದ ಕಾರ್ಖಾನೆ, ಸೋಪ್ ಕಾರ್ಖಾನೆ ಮುಂತಾದ ಕಾರ್ಖಾನೆಗಳನ್ನು ಸ್ಥಾಪನೆ ಮಾಡಿದರು. ನಮ್ಮ ಸರ್ಕಾರದವರ ನೇತೃತ್ವದಲ್ಲಿ ಅನೇಕ ವರ್ಷಗಳಿಂದ ನಡೆಯುತ್ತಿರುವ ಕೈಗಾರಿಕೆಗಳನ್ನು ನೋಡಿದರೆ ಅವು ಸರ್ಕಾರದ ಖಜಾನೆಗೆ ಎಷ್ಟು ಲಾಭವನ್ನು ಕೊಡಬೇಕೋ ಅಷ್ಟು ಲಾಭವನ್ನು ಕೊಡುತ್ತಿಲ್ಲ. ಈ ಕೈಗಾರಿಕೆಗಳಿಗೋಸ್ಕರ ಸರ್ಕಾರದವರು ಖರ್ಚು ಮಾಡತಕ್ಕ ಹಣ 9 ಕೋಟಿ 55ಲಕ್ಷ ರೂಪಾಯಿಗಳು. ಮತ್ತು ಅದರಿಂದ ಬಂದಿರತಕ್ಕ ಆದಾಯ 9 ಕೋಟಿ 33ಲಕ್ಷ ರೂಪಾಯಿಗಳು ಎಂದು ಕೊಟ್ಟಿದ್ದಾರೆ. ಇದನ್ನು ನೋಡಿದರೆ ಸರ್ಕಾರದವರು ಕೈಗಾರಿಕೆಗಳಿಗೆ ಎಷ್ಟು ಹಣವನ್ನು ಖರ್ಚುಮಾಡುತ್ತಿದ್ದಾರೆಯೋ ಅಷ್ಟು ಹಣವೂ ಕೂಡ ವಾಪಸ್ಸು ಬರುತ್ತಿಲ್ಲ. ಅದರಲ್ಲಿಯೂ ಕೂಡ 22 ಲಕ್ಷ ರೂಪಾಯಿಗಳು ಖೋತಾ ಬಿದ್ದಿದೆ. ಸರ್ಕಾರದವರು ಕೈಗಾರಿಕೆಗಳಿಗೆ ಕೋಟ್ಯಾಂತರ ರೂಪಾಯಿಗಳ ಬಂಡವಾಳವನ್ನು ಹಾಕಿ ಸರ್ಕಾರದ ನೆರವನ್ನು ಕೊಟ್ಟು ಕೆಲಸ ಮಾಡತಕ್ಕ ಕೈಗಾರಿಕೆಗಳು ಇಂಥಾ ಒಂದು ದುರವಸ್ಥೆಯಲ್ಲಿವೆ. ಈ ರೀತಿ ಆಗುವುದಕ್ಕೆ ಕಾರಣವೇನು ಎಂದು ನಾನು ಮಾನ್ಯ ಕೈಗಾರಿಕಾ ಸಚಿವರನ್ನು ಕೇಳಬೇಕಾಗಿದೆ. ಇವೊತ್ತಿನ ದಿವಸ ಅನೇಕ ಉದ್ಯಮಗಳನ್ನು ನೋಡುವುದಾದರೆ ಅನೇಕ ಉದ್ಯಮಗಳಲ್ಲಿ ಡಿವಿಡೆಂಟ್ ಬಂದಿಲ್ಲ.

ಶ್ರೀ ಕೆ. ಮಲ್ಲಪ್ಪ.—ಈ ಕೈಗಾರಿಕೆಗಳ ಮೇಲೆ ಹಾಕಿರತಕ್ಕ ಹಣ ಕೆಲವು ಮ್ಯಾನುಫ್ಯಾಕ್ಚರ್ ಪ್ರೋಸೆಸ್‌ನಲ್ಲಿ ಇರುತ್ತದೆ, ಕ್ರೆಡಿಟ್ ಪ್ರೋಸೆಸ್‌ನಲ್ಲಿರುತ್ತದೆ. ಮತ್ತು ಸ್ಟಾಕ್ ಪ್ರೋಸೆಸ್‌ನಲ್ಲಿರುತ್ತದೆ. ಇದಕ್ಕೆಲ್ಲಾ ಪ್ರತ್ಯೇಕವಾದ ಅಂಕಿ ಅಂಶಗಳನ್ನು ಕೊಟ್ಟಿದೆ. ಅದನ್ನು ನೋಡಿದರೆ ಮಾನ್ಯ ಸದಸ್ಯರಿಗೆ ಗೊತ್ತಾಗುತ್ತದೆ.

ಶ್ರೀ ಎಸ್. ಶಿವಪ್ಪ.—ಮಾನ್ಯ ಕೈಗಾರಿಕಾ ಮಂತ್ರಿಗಳು ಹೇಳಿದ ವಾಕ್ಯವನ್ನು ನೋಡುವುದಾದರೆ. ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನೋಡುವುದಾದರೆ ಸರ್ಕಾರದವರು ಈ ಕೈಗಾರಿಕೆಗಳ ಮೇಲೆ ಹಾಕಿರತಕ್ಕ ಬಂಡವಾಳದ ಮೇಲೆ ಕೆಲವು ಕಡೆ 4-4½ ಪರ್ಸೆಂಟ್ ಬಡ್ಡಿ ಬರುತ್ತಿದೆ. ಒಟ್ಟಿನಲ್ಲಿ ಸರ್ಕಾರದ ನೇತೃತ್ವದಲ್ಲಿ ನಡೆಯತಕ್ಕ ಉದ್ಯಮಗಳಿಂದ ಆವುಗಳಿಂದ ಎಷ್ಟು ಲಾಭ ಬರಬೇಕೋ ಅಷ್ಟು ಲಾಭ ಬರುತ್ತಿಲ್ಲ ಎಂಬುದನ್ನು ಎಲ್ಲರೂ ಕೂಡ ಒಪ್ಪಬಹುದು. ನಮ್ಮ ದೇಶಕ್ಕೆ

ಸರ್ಕಾರದವರು ಅನೇಕ ಹೊರದೇಶಗಳಲ್ಲಿ ಸಾಲ ಮಾಡಿ ಹಣವನ್ನು ತರುತ್ತಾರೆ. ಆದರೂ ಸಹ ಸಾಲದು. ಇದರ ಜೊತೆಗೆ ಸಾರ್ವಜನಿಕರಿಂದ ಸಾಲವನ್ನು ಎತ್ತಿ ಕೈಗಾರಿಕೋದ್ಯಮಗಳನ್ನು ಸ್ಥಾಪನೆ ಮಾಡತಕ್ಕ ಈ ಬಡ ದೇಶದಲ್ಲಿ, ನಮ್ಮ ದೇಶದ ಸರ್ಕಾರದ ನೇತೃತ್ವದಲ್ಲಿ ನಡೆಯತಕ್ಕ ಕೈಗಾರಿಕೆಗಳಲ್ಲಿ ಶೇಕಡ 10ರಷ್ಟು ಬಡ್ಡಿ ಬಾರದೆ ಹೋದರೆ ಈ ಉದ್ಯಮಗಳಿಂದ ದೇಶಕ್ಕೆ ಏನು ಪ್ರಯೋಜನವಾಗುತ್ತದೆ ಎಂಬುದನ್ನು ನಾನು ಕೇಳಬೇಕಾಗಿದೆ, ಆದ್ದರಿಂದ ಇದನ್ನು ದೃಷ್ಟಿಯಲ್ಲಿಟ್ಟು ಕೊಂಡು ಸರ್ಕಾರದ ಆಡಳಿತದಲ್ಲಿ ನಡೆಯತಕ್ಕ ಕೈಗಾರಿಕೆಗಳಿಲ್ಲಿ ಶೇಕಡಾ 10ಕ್ಕಿಂತ ಕಡಿಮೆ ಆದಾಯ ಬರಕೂಡದು ಎಂದು ಕಟ್ಟುನಿಟ್ಟಾಗಿ ಒಂದು ಆಜ್ಞೆಯನ್ನು ಮಾಡಬೇಕು. ಆ ಪ್ರಕಾರ ಅವರು ನಡೆಯುಕೊಳ್ಳದಿದ್ದರೆ ಅದರ ಮೇಲ್ವಿಚಾರಣೆಯನ್ನು ಮಾಡತಕ್ಕವರಿಗೆ ಶಿಕ್ಷೆಯನ್ನು ವಿಧಿಸುವುದಕ್ಕೆ ಹಿಂದೆ ಬೀಳಬಾರದು. ಈಗ ಕೈಗಾರಿಕೆಯ ಕ್ಷೇತ್ರದಲ್ಲಿ ಏನಾಗಿದೆ ಎಂದರೆ ಈ ನಮ್ಮ ದೇಶದಲ್ಲಿರ ತಕ್ಕ ಕೈಗಾರಿಕಾ ಕಾರ್ಖಾನೆಗಳಲ್ಲಿ ತಯಾರಾಗತಕ್ಕ ವಸ್ತುಗಳೇನಿವೆಯೋ ಅವುಗಳ ಕ್ವಾಲಿಟಿ ಸರಿ ಯಾಗಿಲ್ಲ. ಉತ್ತಮವಾದ ಕ್ವಾಲಿಟಿಯಿಂದ ಕೂಡಿರತಕ್ಕ ಪದಾರ್ಥಗಳನ್ನು ತಯಾರುಮಾಡತಕ್ಕದ್ದು ಕಡಿಮೆಯಾಗಿದೆ. ಒಳ್ಳೆಯ ಕ್ವಾಲಿಟಿ ಇರತಕ್ಕ ಪದಾರ್ಥಗಳು ತಯಾರು ಮಾಡಿದರೆ ಅದರಿಂದ ಲಾಭ ಬರುತ್ತದೆ. ಉಪಯೋಗವೂ ಜಾಸ್ತಿಯಾಗುತ್ತದೆ. ಈಗ ಕಾರ್ಖಾನೆಗಳಲ್ಲಿ ಅಡಲ್ಟ್ರೇಟೆಡ್ ಪ್ರಾಡಕ್ಟ್ಸ್ ಜಾಸ್ತಿಯಾಗುತ್ತಿದೆ. ಮೈಸೂರು ಸ್ಯಾಂಡಲ್ ಸೋಪನ್ನು ತಯಾರು ಮಾಡುವುದರಲ್ಲಿಯೂ ಸಹ ಅಡಲ್ಟ್ರೇಟೆಡ್ ಸೋಪನ್ನು ತಯಾರುಮಾಡುತ್ತಿದ್ದಾರೆ. ಇವೊತ್ತಿನ ದಿವಸ ಇಂಗ್ಲೆಂಡಿನಲ್ಲಿ ನಮ್ಮ ಮೈಸೂರಿನ ಸ್ಯಾಂಡಲ್ ಸೋಪಿಗೆ ಬೆಲೆ ಏತಕ್ಕೆ ಕಡಿಮೆಯಾಗಿದೆ ಎಂದರೆ ಈ ಸೋಪಿನ ಕ್ವಾಲಿಟಿ ಅಡಲ್ಟ್ರೇಟೆಡ್ ಆಗಿರುವುದರಿಂದ ಆದ್ದರಿಂದ ಕಟ್ಟುನಿಟ್ಟಾದ ನಿಯಮಗಳನ್ನು ಹಾಕಿ ಕೊಂಡು ಉತ್ತಮವಾದ ಕ್ವಾಲಿಟಿಯ ಸಾಮಾನುಗಳನ್ನು ನಮ್ಮ ಕಾರ್ಖಾನೆಗಳಲ್ಲಿ ತಯಾರು ಮಾಡುವುದಾದರೆ ಯಾವ ಸಾಮಾನುಗಳು ಸಿಕ್ಕಿದರೂ ಜನಗಳು ಕೊಂಡುಕೊಳ್ಳುತ್ತಾರೆ. ಈಗ ಏನಾಗಿದೆ ಎಂದರೆ ನಮ್ಮ ಕಾರ್ಖಾನೆಗಳಲ್ಲಿ ಉತ್ತಮವಾದ ಕ್ವಾಲಿಟಿಯ ಸಾಮಾನುಗಳನ್ನು ತಯಾರುಮಾಡದೆ ಇರುವುದರಿಂದ ಅವುಗಳಿಗೆ ಸರಿಯಾದ ಬೆಲೆ ಇಲ್ಲದೆ ಕೋಟ್ಯಾಂತರ ರೂಪಾಯಿ ಗಳು ದುರ್ವ್ಯಯವಾಗುತ್ತಿದೆ. ಆದ್ದರಿಂದ ನಮ್ಮ ದೇಶದಲ್ಲಿರತಕ್ಕ ಕೈಗಾರಿಕೆಗಳಲ್ಲಿ ತಯಾರಾಗ ತಕ್ಕ ಪದಾರ್ಥಗಳೇನಿವೆಯೋ ಅವುಗಳ ಮೇಲೆ ಕ್ವಾಲಿಟಿ ಕಂಟ್ರೋಲ್ ಮಾಡದೆ ಹೋದರೆ ನಾವು ಕೈಗಾರಿಕೆಗಳಲ್ಲಿ ಏನು ಸಾಧನೆ ಮಾಡಬೇಕೋ ಅದನ್ನು ಸಾಧನೆ ಮಾಡುವುದಕ್ಕಾಗುವುದಿಲ್ಲ ಎಂದು ನಾನು ಹೇಳುತ್ತೇನೆ. ಮಾನ್ಯ ಹಣಕಾಸಿನ ಸಚಿವರ ಭಾಷಣದಲ್ಲಿ ದೇಶದಲ್ಲಿ ಕೈಗಾರಿಕಾ ನೀತಿ ಯನ್ನು ಕೂಡ ಬದಲಾಯಿಸತಕ್ಕಂಥ ಕಾರ್ಯವನ್ನು ಮಾಡುತ್ತಿದ್ದೇವೆ, ಅದಕ್ಕೋಸ್ಕರ ಸಣ್ಣ ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುವುದಕ್ಕೋಸ್ಕರ ಸ್ಟೇಟ್ ಇಂಡಸ್ಟ್ರಿಯಲ್ ಇನ್ವೆಸ್ಟ್ ಮೆಂಟ್ ಅಂಡ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಮಾಡಬೇಕೆಂದು ಹೇಳಿದ್ದಾರೆ. ಕೈಗಾರಿಕೆ ಗಳಿಗೆ ಹಣ ಸಹಾಯವನ್ನು ಮಾಡುವುದಕ್ಕೋಸ್ಕರ ಇಂಡಸ್ಟ್ರಿಯಲ್ ಕಾರ್ಪೋರೇಷನ್ ಮಾಡ ಬೇಕೆಂದು ಹೇಳಿದ್ದಾರೆ. ಅದರಿಂದ ಸಣ್ಣಪುಟ್ಟ ಕೈಗಾರಿಕೆಗಳಿಗೆ ಹೆಚ್ಚಿನ ಉತ್ತೇಜನ ಕೊಡಬಹುದು ಎಂದು ಹೇಳಿದ್ದಾರೆ. ಈಗ ಸ್ಟೇಟ್ ಫೈನಾನ್ಸಿಯಲ್ ಕಾರ್ಪೋರೇಷನ್ ಇದೆ. ಹೀಗೆ ಬರೀ ಕಾರ್ಪೋರೇಷನ್‌ಗಳ ಸಂಖ್ಯೆಯನ್ನು ಜಾಸ್ತಿ ಮಾಡುವುದರಿಂದ ಕಾರ್ಯ ಸಾಧನೆಯಾಗುವುದಿಲ್ಲ ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಬ್ಯಾಂಕ್, ತಾಲ್ಲೂಕು ಇಂಡಸ್ಟ್ರಿಯಲ್ ಬ್ಯಾಂಕ್ ಎಂದು ಬ್ಯಾಂಕುಗಳ ಸಂಖ್ಯೆಯನ್ನು ಜಾಸ್ತಿ ಮಾಡಿದರೆ ಕೈಗಾರಿಕೆಗಳಿಗೆ ಸಹಾಯ ಮಾಡಿದ ಹಾಗೆ ಆಗುವುದಿಲ್ಲ. ಹಿಂದೆ ಈ ಕೈಗಾರಿಕೆಗೆ ಸಂಬಂಧಪಟ್ಟಂತೆ ಸರ್. ಎಂ. ವಿಶ್ವೇಶ್ವರಯ್ಯನವರ ಒಂದು ಯೋಜನೆ ಡಿಸ್ಟ್ರಿಕ್ಟ್ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಇತ್ತು. ಈಗ ಅದು ಹೊರಟು ಹೋಯಿತು. ಈ ವಿಷಯ ದಲ್ಲಿ ಹೊಸ ಹೊಸ ಯೋಜನೆಗಳನ್ನು ಮಾಡಿದರೆ ಕೆಲಸ ಆಗುವುದಿಲ್ಲ. ಇಂಡಸ್ಟ್ರಿಯಲ್ ಬ್ಯಾಂಕು ಗಳೂ ಬೇಡ, ಇಂಡಸ್ಟ್ರಿಯಲ್ ಕಾರ್ಪೋರೇಷನ್ನೂ ಬೇಡ. ಡಿಸ್ಟ್ರಿಕ್ಟ್ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಒಂದು ಏಜೆನ್ಸಿಯನ್ನು ಇಟ್ಟು ಅವುಗಳ ಮುಖಾಂತರ ಈ ಕೈಗಾರಿಕೆಗಳ ಅಭಿವೃದ್ಧಿಗೆ ಏನೇನು ಸೌಲಭ್ಯವನ್ನು ಕೊಡಬೇಕು ಎಂಬುದಕ್ಕೆ ಒಂದು ಸಿಂಪ್ಲಿಫೈಯ್ಡ್ ಯೋಜನೆಯನ್ನು ಮಾಡಿ ಕೊಟ್ಟರೆ ಅನುಕೂಲವಾಗುತ್ತದೆ. ಇವೊತ್ತಿನ ದಿವಸ ನಮ್ಮ ದೇಶದಲ್ಲಿ ಅನೇಕ ಬೋರ್ಡುಗಳಿವೆ. ಒಂದೇ ಕೆಲಸಕ್ಕೆ ಎರಡು ಮೂರು ಬೋರ್ಡುಗಳಿವೆ. ಇದು ಸರಿಯಲ್ಲ. ಅದಕ್ಕೆ ಯಾವ ಕಾರ್ಪೋ ರೇಷನ್ನೂ ಬೇಡ, ಯಾವ ಕಂಪಿನಿಯೂ ಬೇಡ. ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಒಂದು ಏಜೆನ್ಸಿಯನ್ನಿಟ್ಟು ಅದರ ಮುಖಾಂತರ ಕೈಗಾರಿಕೆಗಳಿಗೆ ಬೇಕಾದ ಸೌಲಭ್ಯವನ್ನು ಒದಗಿಸುವುದು ಒಳ್ಳೆಯದು ಎಂದು ನಾನು ಹೇಳುತ್ತೇನೆ. ಈ ಕೈಗಾರಿಕಾ ನೀತಿಯನ್ನು ಸಾಧನೆ ಮಾಡತಕ್ಕದ್ದು ಒಬ್ಬ ಮಂತ್ರಿಗಳ ಕೈಕೆಳಗೆ ಇರಬೇಕು. ಸಹಕಾರ ಇಲಾಖೆಯ ಮಂತ್ರಿಗಳ ಕೈಕೆಳಗೆ ಕೆಲವು ಕೈಗಾರಿಕೆಗಳು, ಕೈಗಾರಿಕಾ ಮಂತ್ರಿಗಳ ಕೈಕೆಳಗೆ ಕೆಲವು ಕೈಗಾರಿಕೆಗಳು ಹೀಗೆ ಈ ಕೈಗಾರಿಕೆ ಗಳು ಬೇರೆ ಬೇರೆ ಶಾಖೆಯ ಮಂತ್ರಿಗಳ ಕೈಕೆಳಗೆ ಇರತಕ್ಕದ್ದು ಸರಿಯಲ್ಲ. ಈ ಕೈಗಾರಿಕಾ

(ಶ್ರೀ ಎಸ್. ಶಿವಪ್ಪ)

ಶಾಖೆಗೆ ಇನ್ನೊಬ್ಬರು ಉಪಮಂತ್ರಿಗಳನ್ನಾದರೂ ನೇಮಕ ಮಾಡಿ ಈ ಕೈಗಾರಿಕೆಗಳೆಲ್ಲಾ ಒಬ್ಬರೇ ಮಂತ್ರಿಗಳ ಕೈ ಕೆಳಗೆ ಇರುವಂತೆ ಮಾಡಬೇಕು. ಸಹಕಾರ ಇಲಾಖೆಯ ಆಶ್ರಯದಲ್ಲಿ ಒಂದು ಕೈಗಾರಿಕೆಯನ್ನು ನಡೆಸುವುದು, ಕೈಗಾರಿಕೆಯ ಇಲಾಖೆಯ ಆಶ್ರಯದಲ್ಲಿ ಒಂದು ಕೈಗಾರಿಕೆ ಯನ್ನು ನಡೆಸುವುದು ಒಂದು ಗೊಂದಲವನ್ನು ಏರ್ಪಾಡು ಮಾಡಿದ ಹಾಗಾಗುತ್ತದೆಯೇ ಹೊರತು ನಾವು ಕೈಗಾರಿಕೆಗಳಲ್ಲಿ ಏನೊಂದು ಸಾಧನೆಯನ್ನು ಮಾಡಬೇಕೋ ಅದನ್ನು ಸಾಧನೆ ಮಾಡುವು ದಕ್ಕಾಗುವುದಿಲ್ಲ.

1-30 P. M.

ಮೈಸೂರು ದೇಶದಲ್ಲಿ ಈ ಕೈಗಾರಿಕಾ ನೀತಿ ಎಷ್ಟರಮಟ್ಟಿಗೆ ಇದೆ ಎಂದರೆ ನಮ್ಮ ದೇಶದಲ್ಲಿ ಅನೇಕ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಮಾಡಬೇಕು ಎಂದು ಅನೇಕ ಸಾರಿ ಹೇಳಿಕೊಂಡು ಬಂದಿದ್ದೇವೆ. ಇವತ್ತು ಪ್ರಾಮುಖ್ಯವಾಗಿ ನಮ್ಮ ದೇಶದಲ್ಲಿ ಸ್ಥಾಪನೆಯಾಗಬೇಕಾಗಿದ್ದಂಥ ಎಣ್ಣೆ ಕಾರ್ಖಾನೆಯನ್ನು ಬೇರೆ ಕಡೆಗೆ ಕೇಂದ್ರ ಸರ್ಕಾರದವರು ಬದಲಾಯಿಸಿದ್ದಾರೆಂದು ಕೇಳುತ್ತೇನೆ. ಅದೇ ರೀತಿ ಅಲ್ಯೂಮಿನಿಯಂ ಕಾರ್ಖಾನೆ ಸಹ ಆಗಬಹುದೆಂಬ ಶಂಕೆ ನಮಗಿದೆ. ಅಲ್ಯೂಮಿನಿಯಂ ಕಾರ್ಖಾನೆಯನ್ನು ಮೈಸೂರಿನಲ್ಲಿ ಸ್ಥಾಪನೆ ಮಾಡುತ್ತೇವೆ ಎಂದು ಮೊದಲಿನಿಂದಲೂ ಸಾರಿ ಸಾರಿ ಹೇಳುತ್ತಿದ್ದಾರೆ, ಆದರೂ ಕೂಡ ನನಗೆ ಅನುಮಾನವಿದೆ. ಅದಕ್ಕೆ ಬೇಕಾಗಿರತಕ್ಕ ಬ್ಯಾಕ್ಸೈಟ್ ಮಹಾರಾಷ್ಟ್ರದಲ್ಲಿರುತ್ತದೆ. ಅವರೊಡನೆ ಸಹಕಾರ ಮಾಡಿಕೊಂಡು ಆ ಉದ್ಯಮವನ್ನು ಸ್ಥಾಪನೆ ಮಾಡಬೇಕಾಗಿದೆ. ಶರಾವತಿ ಯೋಜನೆಯಿಂದ ನಮಗೆ ಹೇರಳವಾದ ವಿದ್ಯುತ್ತು ದೊರೆಯುತ್ತದೆ. 10 ಲಕ್ಷ ಕೆ. ವಿ. ವಿದ್ಯುತ್ತು ನಮ್ಮ ದೇಶದಲ್ಲಿ ಉತ್ಪತ್ತಿಯಾಗುತ್ತದೆ. ಅಲ್ಯೂಮಿನಿಯಂ ಕಾರ್ಖಾನೆ ಯನ್ನು ಶರಾವತಿ ಕಾರ್ಯಗತವಾಗುವುದಕ್ಕೆ ಮುಂಚೆಯೇ ಪಡೆಯತಕ್ಕ ಅವಕಾಶವನ್ನು ಕೊಂದಬೇಕು.

ಮೈಸೂರು ನಗರದಲ್ಲಿ ಎರಡು ದೊಡ್ಡ ಕಾರ್ಖಾನೆಗಳನ್ನು ಸ್ಥಾಪನೆ ಮಾಡಬೇಕೆಂದು ಯೋಚಿಸಿದ್ದರು. ಒಂದು ನಂಜನಗೂಡು ಮತ್ತು ಮೈಸೂರು ಮಧ್ಯೆ ಒಂದು ರೇಯಾನ್ ಸಿಲ್ಕ್ ಫ್ಯಾಕ್ಟರಿಯನ್ನು ಮಾಡುವದು. ಅದು ಇವತ್ತು ಎಲ್ಲಿಗೆ ಹೋಯಿತೋ ಗೊತ್ತಿಲ್ಲ ಕಚ್ಚಾ ಫಿಲಂ ತಯಾರಿಸುವ ಕಾರ್ಖಾನೆಯನ್ನು ಕೃಷ್ಣರಾಜಸಾಗರದ ಹತ್ತಿರ ಮಾಡಬೇಕೆಂದಿತ್ತು. ಅದು ನೀಲ ಗಿರಿ ಕಡೆ ಹೋಗುವ ಪರಿಸ್ಥಿತಿ ಇದೆ ಅಥವಾ ಆ ಕಡೆ ಹೋಗಿದೆ.

ಶ್ರೀ ಕೆ. ಮಲ್ಲಪ್ಪ.—ಕಚ್ಚಾ ಫಿಲಂ ಕಾರ್ಖಾನೆ ಮದ್ರಾಸಿನಲ್ಲಿ ಆಗುತ್ತದೆ. ಅದಕ್ಕೆ ಬೇಕಾಗಿರತಕ್ಕ ಮೂಲ ವಸ್ತುವನ್ನು ನಾವು ಸಪ್ಲೈ ಮಾಡುತ್ತೇವೆ. ಕ್ರಮೇಣ ನಾವೂ ಕೂಡ ಬಣ್ಣದ ಫಿಲಂ ತಯಾರು ಮಾಡುತ್ತೇವೆ. ಟ್ರಯಾಸಿಟೇಟ್ ತಯಾರುಮಾಡುವ ಕಾರ್ಖಾನೆಯೂ ಬಹಳ ದೊಡ್ಡ ಪ್ರಮಾಣದ್ದಾಗಿದೆ.

This is a very big industry. Not only we manufacture material required for raw-film but also plastic moulding powder. Later on we have a programme to take up colour film.

ಶ್ರೀ ಎಸ್. ಶಿವಪ್ಪ.—ಮೈಸೂರು ದೇಶದಲ್ಲಿ ಹೇರಳವಾದ ಸಂಪತ್ತಿದೆ. ಅದನ್ನು ಕೈಗಾರಿಕೆಗೆ ಉಪಯೋಗಿಸಿಕೊಳ್ಳತಕ್ಕ ಅವಕಾಶವಿದೆ. ಇಲ್ಲಿ ಹೇರಳವಾದ ಖನಿಜ ಸಂಪತ್ತು ಇದೆ. ಲಕ್ಷಗಟ್ಟಲೆ, ಕೋಟಿಗಟ್ಟಲೆ ಟನ್ನುಗಳಷ್ಟು ಅದುರು ಸಾಗಾಣಿಕೆ ಮಾಡುವ ಉದ್ಯಮದಲ್ಲಿ ನಾವು ನಿರತರಾಗಿ ದ್ದೇವೆ. ಆ ಅದಿರನ್ನು ಯಾವ ರೀತಿ ಪ್ರೋಸೆಸ್‌ಮಾಡಿ ಉಪಯೋಗಿಸಿಕೊಳ್ಳಬಹುದು ಎನ್ನುವುದರ ಕಡೆಗೆ ಗಮನ ಕೊಟ್ಟಿಲ್ಲ. ಮ್ಯಾಂಗನೀಸ್, ಕ್ರೋಮ್ ಇಂಥವನ್ನು ಇಲ್ಲಿ ಯಾವ ರೀತಿ ಪ್ರೋಸೆಸ್ ಮಾಡಿ ಅದನ್ನು ಉಪಯೋಗ ಮಾಡಿಕೊಳ್ಳಬೇಕು ಎನ್ನುವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಎಂದು ಹೇಳುತ್ತೇನೆ.

ವನಸಂಪತ್ತು ನಮ್ಮಲ್ಲಿರುವಷ್ಟು ಭಾರತದಲ್ಲಿ ಮತ್ತೆಲ್ಲಿಯೂ ಇಲ್ಲ. ಅರಣ್ಯದಲ್ಲಿ ಸಿಕ್ಕುವ ಬೊಂಬನ್ನು ಉಪಯೋಗಿಸಿ ಕಾಗದವನ್ನು ತಯಾರು ಮಾಡುತ್ತಿದ್ದೇವೆ. ಸಿಮೆಂಟ್ ಫ್ಯಾಕ್ಟರಿಯನ್ನು ಮಾಡಬೇಕೆಂದಿದ್ದೇವೆ, ಎಂದು ಹೇಳುತ್ತೀರಿ. ಈಗ ಹೋಗುತ್ತಿರುವ ವೇಗದಲ್ಲಿ ನೂರು ವರ್ಷ ವಾದರೂ ಕೂಡ ಇದನ್ನೆಲ್ಲ ಕಾರ್ಯಗತ ಮಾಡುವುದಕ್ಕಾಗುವುದಿಲ್ಲ. ಈಗ ಸಿಮೆಂಟಿಗೆ ವಿಪರೀತವಾದ ಅಭಾವವಿದೆ. ಒಂದೆರಡು ಸಿಮೆಂಟ್ ಕಾರ್ಖಾನೆಗಳನ್ನು ಹೆಚ್ಚು ಮಾಡುತ್ತೇವೆಂದು ಹೇಳುತ್ತಿದ್ದೀರಿ. ಅದು ಸಾಲದು. ಹತ್ತುಪ್ಪತ್ತು ಕಾರ್ಖಾನೆಗಳನ್ನಾದರೂ ಜಾಸ್ತಿ ಮಾಡಬೇಕು ಎಂದು ಯೋಚನೆ ಮಾಡಬೇಕು.

ಹೊಸದಾಗಿ 8 ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪನೆ ಮಾಡುತ್ತೇವೆಂದು ಹೇಳುತ್ತೀರಿ. ಉತ್ತರ ಪ್ರದೇಶವಲ್ಲಿ 200 ಸಕ್ಕರೆ ಕಾರ್ಖಾನೆಗಳಿವೆ. ಅಲ್ಲಿ ಬೆಳೆಯತಕ್ಕ ಕಬ್ಬಿನಲ್ಲಿ ರಸವೇ ಇರುವುದಿಲ್ಲ. ಇಂಥ ಕಡೆ 200 ಕಾರ್ಖಾನೆಗಳಿವೆ. ನಮ್ಮ ದೇಶದಲ್ಲಿ ಬೆಳೆಯುವ ಕಬ್ಬಿನಲ್ಲಿ ಹೆಚ್ಚು ರಸವಿದ್ದು ಸಕ್ಕರೆಯ ಅಂಶ ಜಾಸ್ತಿ ಇರುವುದರಿಂದ ಕೊನೆಪಕ್ಷ ಎಲ್ಲಿಗೆ ನೂರು ಸಕ್ಕರೆ ಕಾರ್ಖಾನೆಗಳಾದರೂ ಬೇಕಾಗುತ್ತವೆ. ಈಗ ಸಕ್ಕರೆಗೆ ಹೊರ ಪ್ರಪಂಚದಲ್ಲಿ ಪ್ರಬಲವಾದ ಮಾರುಕಟ್ಟೆ ಇದೆ. ನಾನು ಕೈಗಾರಿಕಾ ಮಂತ್ರಿಗಳಲ್ಲಿ ಹೇಳುವುದೇನೆಂದರೆ ಈ ಸಂದರ್ಭವನ್ನು ಉಪಯೋಗಿಸಿಕೊಂಡು ಮೈಸೂರು ದೇಶಕ್ಕೆ ನಿಮ್ಮ ಕಾಲದಲ್ಲಿ 20 ಕಾರ್ಖಾನೆಗಳನ್ನಾದರೂ ಸ್ಥಾಪನೆ ಮಾಡತಕ್ಕ ಅವಕಾಶ ವನ್ನು ಈ ದೇಶಕ್ಕೆ ಒದಗಿಸಿಕೊಡಬೇಕು ಎಂದು ಹೇಳುತ್ತೇನೆ.

ನಮ್ಮ ವ್ಯವಸಾಯದ ಉತ್ಪನ್ನಗಳೇನಿವೆ ಅವುಗಳಿಗೆ ಹೆಚ್ಚಿನ ಧಾರಣೆ ಸಿಕ್ಕತಕ್ಕ, ನಿಗದಿಯಾದ ಬೆಲೆ ಸಿಕ್ಕತಕ್ಕ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟರು. ಇವತ್ತು ದೇಶದಲ್ಲಿ ಉತ್ಪನ್ನ ಜಾಸ್ತಿಯಾಗಿದೆ. ಅದೇ ರೀತಿ ಹತ್ತಿ, ಸೆಂಗಾ, ಇವುಗಳ ಬೆಳೆಯೂ ಹೆಚ್ಚಾಗಿದೆ. ನಮ್ಮ ರಾಜ್ಯದ ಕೈಗಾರಿಕಾ ಪ್ರಗತಿ ಯಾವರೀತಿ ಇದೆ ಎಂದರೆ snail speed ಎನ್ನುವಂತೆ ಬಹಳ ಮಂದಗತಿಯಿಂದ ಸಾಗುತ್ತಿದೆ. ನಾಲ್ಕೈದು ಫ್ಯಾಕ್ಟರಿಗಳನ್ನು ಮಾಡಿದರೆ ಕೈಗಾರಿಕೆಯಲ್ಲಿ ಮುಂದುವರಿದಿದ್ದೇವೆ ಎಂದು ಹೇಳಿಕೊಳ್ಳುತ್ತೇವೆ. ಅಷ್ಟು ಮಾತ್ರ ಮಾಡಿದರೆ, ಈಗ ಐದು ವರ್ಷಗಳ ಹಿಂದೆ, ಭುಜ ತಟ್ಟಿಕೊಳ್ಳಬಹುದಾಗಿತ್ತು. ಈಗ ಬಹಳ ವೇಗವಾಗಿ ಹೋಗಬೇಕಾಗಿದೆ. ಜೀವನದ ವೆಚ್ಚ ಜಾಸ್ತಿಯಾಗುತ್ತಿದೆ; ಜೀವನದ ಮಟ್ಟ ಜಾಸ್ತಿಯಾಗುತ್ತಿದೆ. ಈ ಕಾಲದಲ್ಲಿ ನಮ್ಮ ರಾಜ್ಯದಲ್ಲಿ ವ್ಯವಸಾಯದ ಉತ್ಪನ್ನ ಎಷ್ಟಾಗಬೇಕೋ ಅಷ್ಟಾಗಲಿಲ್ಲ. ಕೈಗಾರಿಕೆ ಮುಖಾಂತರ ಉತ್ಪನ ಎಷ್ಟು ಜಾಸ್ತಿಯಾಗಬೇಕೋ ಅಷ್ಟು ಆಗಲಿಲ್ಲ. ಆದರಿಂದ ಧಾರಣೆವಾಸಿಗಳು ವಿಪರೀತವಾಗಿ ಏರಿವೆ. ಇದನ್ನು ತಡೆಗಟ್ಟಬೇಕಾದರೆ ನಮ್ಮಲ್ಲಿ ಕೈಗಾರಿಕಾ ಉತ್ಪನ್ನವನ್ನು ಜಾಸ್ತಿ ಮಾಡಬೇಕು ಎಂದು ನಾನು ತಮ್ಮಲ್ಲಿ ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

ಕೈಗಾರಿಕಾ ಮಂತ್ರಿಗಳಲ್ಲಿ ಕೊನೆಯದಾಗಿ ನಾನು ಇಷ್ಟು ಬಿನ್ನಹವನ್ನು ಮಾಡುತ್ತೇನೆ. ಮೈಸೂರು ದೇಶದ ಕೈಗಾರಿಕೆ ಇಡೀ ಭಾರತ ದೇಶದಲ್ಲಿ ಖ್ಯಾತಿಯನ್ನು ಹೊಂದಿತ್ತು. ಅಂಥ ಖ್ಯಾತಿಯನ್ನು ಪುನಃ ತಾವು ಪುನರುಜ್ಜೀವನ ಮಾಡಿ ಮೈಸೂರು ದೇಶ ಕೈಗಾರಿಕಾ ಕ್ಷೇತ್ರದಲ್ಲಿ ಕಿರೀಟಪ್ರಾಯವಾಗುವಂತೆ ಮಾಡಲು ಮೈಸೂರು ದೇಶದಲ್ಲಿರುವ ಎಲ್ಲ ಸಂಪತ್ತನ್ನೂ ಸರಿಯಾಗಿ ಉಪಯೋಗ ಮಾಡಿಕೊಂಡು ನಿಮ್ಮ ನೇತೃತ್ವವಲ್ಲಿ ಕಟ್ಟುನಿಟ್ಟಾಗಿ ಕೆಲಸ ಮಾಡಿಸಿ ಅಭಿವೃದ್ಧಿ ಸ್ಥಿತಿಗೆ ತರಬೇಕಾಗಿದೆ. ಕೆಲವರು ದಳ್ಳಾಳಿಗಳು ಇರುತ್ತಾರೆ. ಅವರು ಕೈಗಾರಿಕಾ ಸಂಪತ್ತನ್ನು ತಮ್ಮ ಸ್ವತ್ತನ್ನಾಗಿ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಅಂಥದಕ್ಕೆ ಅವಕಾಶ ಕೊಡಬೇಡಿ. ಕೆಲವು ಕೈಗಾರಿಕೋದ್ಯಮಿಗಳು ನೀವು ಕೊಡತಕ್ಕ ಲಕ್ಷಗಟ್ಟಲೆ ಹಣದಲ್ಲಿ ಒಂದಲ್ಲ ಒಂದು ರೂಪದಲ್ಲಿ ಹತ್ತಿಪ್ಪತ್ತು ಲಕ್ಷ ರೂಪಾಯಿಗಳನ್ನು ಒಬ್ಬನೇ ವ್ಯಕ್ತಿ ಸಾಲ ಪಡೆಯುವುದಕ್ಕೆ ಅವಕಾಶವಿದೆ. ಆ ಹಣ ಎಲ್ಲರಿಗೂ ಹಂಚಿಕೆಯಾಗಬೇಕಾಗಿದೆ. ಸಮಾಜವಾದದ ಗುರಿಯನ್ನು ಮುಟ್ಟಬೇಕಾದರೆ ಕೆಲವರ ಹತ್ತಿರ ಲಕ್ಷಗಟ್ಟಲೆ ಹಣ ಕೇಂದ್ರಿ ಕೃತವಾಗಬಾರದು. ಸಣ್ಣಪುಟ್ಟ ಕೈಗಾರಿಕೆಯನ್ನು ನಡೆಸತಕ್ಕ ಜನಗಳಲ್ಲಿ ದುಡ್ಡಿಲ್ಲ. ಇಂಥವರಿಗೆ ಸಹಾಯ ಮಾಡತಕ್ಕ ದೃಷ್ಟಿ ನಮ್ಮ ಕೈಗಾರಿಕಾ ನೀತಿಯಲ್ಲಿ ಹೆಚ್ಚಾಗಬೇಕು. ಅದರಿಂದ ನಮ್ಮ ಮೈಸೂರು ದೇಶದ ಕೈಗಾರಿಕಾ ಉತ್ಪತ್ತಿಯನ್ನು ಮಾಡಬೇಕೆಂದು ಹೇಳಿ ನಾನು ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸು ತ್ತೇನೆ.

† ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ಮಾನ್ಯ ಕೈಗಾರಿಕಾ ಮಂತ್ರಿಗಳು ಸಭೆಯ ಮುಂವೆ ಇಟ್ಟಿರುವ ಡಿಮ್ಯಾಂಡ್ 2,7,8,15,22,33,42,53 ಇವುಗಳನ್ನು ಸಂಪೂರ್ಣವಾಗಿ ನಾನು ಅನುಮೋದಿಸುತ್ತೇನೆ. ಬಹುಶಃ ನನ್ನ ಅನುಮೋದನೆ ಯನ್ನು ಪುಷ್ಟೀಕರಿಸುತ್ತ ಕೈಗಾರಿಕೆಗಳ ವಿಚಾರವಾಗಿ ನಮ್ಮ ದೇಶದಲ್ಲಿರುವ ಸ್ಥಿತಿಗತಿಗಳೇನು, ಕೈಗಾರಿಕೆಗಳು ಯಾವ ಮಟ್ಟದಲ್ಲಿ ನಡೆಯುತ್ತಿವೆ ಎಂಬುದಲ್ಲವನ್ನೂ ಕೂಡ ವಿಚಾರ ಮಾಡಲು ಕಾಲಾವಕಾಶವಿಲ್ಲವೆಂದು ತಿಳಿದು ಈ ಕೈಗಾರಿಕಾ ಡಿಮಾಂಡಿನಲ್ಲಿ ಸುಮಾರು 31.97 ಲಕ್ಷ ರೂಪಾಯಿಗಳ ಬೇಡಿಕೆ ಇರುವಂಥ ರೇಷ್ಮೆ ಕೈಗಾರಿಕೆಯ ವಿಚಾರವಾಗಿ ಮಾತ್ರ ನಾನು ಎರಡು ಮಾತನ್ನು ಹೇಳಲು ಅಪೇಕ್ಷೆ ಪಡುತ್ತೇನೆ.

ಈ ಕೈಗಾರಿಕೆ ನಮ್ಮ ದೇಶದಲ್ಲಿ ಎಷ್ಟು ಮಹತ್ವ ಉಳ್ಳದ್ದಾಗಿದೆ ಎಂದು ನಾವು ವಿಚಾರ ಮಾಡುವುದಾದರೆ ಹಣಕಾಸಿನ ಮಂತ್ರಿಗಳು ಅವರ ಭಾಷಣದ ಎರಡನೆ ಭಾಗದಲ್ಲಿ ಕೆಲವು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು 1.30 ಲಕ್ಷ ಎಕರೆಗಳಲ್ಲಿ ಹಿಪ್ಪನೇರಳೆ ಬೆಳೆಯುತ್ತಿತ್ತು, ಎರಡನೆಯ ಯೋಜನೆಯ ಹೊತ್ತಿಗೆ 1.80 ಲಕ್ಷವಾಗಿ ಮೂರನೆಯ ಯೋಜನೆ ಮುಗಿಯುವ ವೇಳೆಗೆ ಎರಡು ಲಕ್ಷಕ್ಕಿಂತ

(ಶ್ರೀ ಎಂ. ಸಿ. ಬಸಪ್ಪ)

ಹೆಚ್ಚು ಎಕರೆಗಳಲ್ಲಿ ಹಿಪ್ಪನೇರಳೆ ಸೊಪ್ಪನ್ನು ಬೆಳೆಯುವುದಕ್ಕೆ ಪ್ರಯತ್ನ ಪಟ್ಟಿದ್ದೇವೆ ಎಂದು ಅವರು ಹೇಳಿದ್ದಾರೆ. ರೇಷ್ಮೆ ಉತ್ಪಾದನೆ ನಮ್ಮ ದೇಶದಲ್ಲಿ ಎಷ್ಟರಮಟ್ಟಿಗೆ ಇದೆ, ಪ್ರಪಂಚದಲ್ಲಿ ಇದಕ್ಕೆ ಯಾವ ಸ್ಥಾನವಿದೆ ಎಂದು ನಾವು ಮನಗಾಣಬೇಕಾಗಿದೆ. ಇಡೀ ಪ್ರಪಂಚದಲ್ಲಿ ರೇಷ್ಮೆಯನ್ನು ಉತ್ಪತ್ತಿ ಮಾಡತಕ್ಕ ಎಲ್ಲ ದೇಶಗಳ ಸ್ಥಿತಿಯನ್ನೂ ತೆಗೆದುಕೊಳ್ಳುವುದಾದರೆ ನಮ್ಮ ಇಂಡಿಯಾ ದೇಶ ಪ್ರಪಂಚದಲ್ಲಿ ನಾಲ್ಕನೆಯ ಸ್ಥಾನವನ್ನು ಗಳಿಸುತ್ತದೆ. ಅದರಲ್ಲಿಯೂ ನಾವು ಇಡೀ ಹಿಂದೂಸ್ಥಾನದ ಚಿತ್ರವನ್ನು ತೆಗೆದುಕೊಂಡರೆ ಮೈಸೂರು ದೇಶ ಹೆಚ್ಚಿನ ಸ್ಥಾನವನ್ನು ಗಳಿಸಿದೆ ಎಂದರೆ ಅದು ತಪ್ಪಾಗಲಾರದು. ಇಡೀ ಹಿಂದೂಸ್ಥಾನದಲ್ಲಿ ಆಗುವ ಮಲ್ಬೆರಿ ರೇಷ್ಮೆಯಲ್ಲಿ ಶೇಕಡ 70 ರಷ್ಟು ಮೈಸೂರು ದೇಶ ಉತ್ಪತ್ತಿ ಮಾಡುತ್ತಿದೆ, 7 ರಷ್ಟು ಜಮ್ಮು ಕಾಶ್ಮೀರದಲ್ಲಿ ಆಗುತ್ತದೆ, 19 ರಷ್ಟನ್ನು ಪಶ್ಚಿಮ ಬಂಗಾಳದಲ್ಲಿ ತಯಾರು ಮಾಡುತ್ತಾರೆ. ನಿಜವಾಗಿಯೂ ಪ್ರಪಂಚದಲ್ಲಿ ರೇಷ್ಮೆ ಬೆಳೆ ಮತ್ತು ಹಿಪ್ಪನೇರಳೆ ಕೈಗಾರಿಕೆಗೆ ಮೈಸೂರು ದೇಶದಲ್ಲಿ ಪ್ರಾಶಸ್ತ್ಯವಿದೆ. ಅಂಕಿ ಅಂಶಗಳಿಂದ ಇದು ಗೊತ್ತಾಗುತ್ತದೆ. ನಮ್ಮ ಸರಕಾರದವರು ಇದರ ಅಭಿವೃದ್ಧಿಗಾಗಿ ಏನು ಯೋಜನೆ ಹಾಕಿಕೊಂಡಿದ್ದಾರೆ, ಎಷ್ಟುಮಟ್ಟಿಗೆ ನಿರ್ವಹಿಸುತ್ತಿದ್ದಾರೆ ಎಂಬುದನ್ನು ಹೇಳಬೇಕಾಗಿದೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದರ ಸಂಬಂಧವಾಗಿ 24 ಯೋಜನೆಗಳನ್ನು ಅಳವಡಿಸಿದ್ದಾರೆ. ಈ 24 ಯೋಜನೆಗಳಿಗೆ 5 ವರ್ಷಗಳಲ್ಲಿ ಒಂದು ಕೋಟಿ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ನಿರ್ಧಾರ ಕೈಕೊಂಡಿದ್ದಾರೆ. ಸುಮಾರು ಹತ್ತು ಲಕ್ಷ ಜನರು ಈ ಕಸಬನ್ನನುಸರಿಸಿ ಜೀವನ ನಡೆಸುತ್ತಾರೆ. ಇಷ್ಟು ದೊಡ್ಡ ಕೈಗಾರಿಕೆಗೆ 5 ವರ್ಷಗಳಲ್ಲಿ ಒಂದು ಕೋಟಿ ಇಪ್ಪತ್ತೈದು ಲಕ್ಷ ರೂಪಾಯಿ ಖರ್ಚು ಮಾಡುತ್ತೇವೆಂದು ಕಾರ್ಯಕ್ರಮ ಹಾಕಿಕೊಂಡರೆ ಇದು ಎಷ್ಟು ಸಾಧು ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಅಲ್ಲದೆ ಒದಗಿಸಿದ ಹಣವನ್ನು ಕೂಡ ಎಷ್ಟುಮಟ್ಟಿಗೆ ಸರಕಾರ ಖರ್ಚು ಮಾಡಿದೆ ಎನ್ನುವುದನ್ನು ನೋಡಬೇಕು. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ಸರಕಾರದವರು ಕೇಂದ್ರ ಸರಕಾರದಿಂದ, ಕೇಂದ್ರ ರೇಷ್ಮೆ ಬೋರ್ಡಿನವರು ಕೊಟ್ಟಿದ್ದ ಹಣವನ್ನು ಎಷ್ಟುಮಟ್ಟಿಗೆ ಉಪಯೋಗ ಮಾಡಿದ್ದಾರೆಂದು ನೋಡಿದರೆ, ಸ್ಟಡಿ ಟೀಮಿನವರು ಇವ್ಯಾಲ್ಯುಯೇಟ್ ಮಾಡಿ ಒಂದು ವರದಿಯನ್ನು ಕೊಟ್ಟಿದ್ದಾರೆ, ಅದರಲ್ಲಿ ಅವರು ಹೇಳುವ ಪ್ರಕಾರ ಶೇಕಡ 55.61 ರಷ್ಟು ಮಾತ್ರ ಉಪಯೋಗ ಮಾಡಿದ್ದಾರೆ, ಸಾಲದಲ್ಲಿ 33.4 ರಷ್ಟು ಮಾತ್ರ ಉಪಯೋಗ ಮಾಡಿದ್ದಾರೆ. ಎಂದಮೇಲೆ ಹೆಚ್ಚು ಪ್ರಗತಿ ಸಾಧಿಸುವುದಕ್ಕಾಗಿ ಒಂದು ಸರಿಯಾದ ಕಾರ್ಯಕ್ರಮವನ್ನು ಎರಡನೆಯ ಯೋಜನೆಯಲ್ಲಿ ಹಾಕಿಕೊಂಡಿಲ್ಲವೆಂಬ ಶಂಕೆ ಬರುತ್ತದೆ. ಆದರೆ ಮೂರನೆಯ ಯೋಜನೆಯಲ್ಲಿ ಸುಮಾರು 24 ಯೋಜನೆಗಳನ್ನು ಹಾಕಿಕೊಂಡಿದ್ದಾರೆ, ಕಾರ್ಯಸಾಧನೆಯಲ್ಲಿಯೂ ಪ್ರಗತಿಯಾಗಿದೆ, ತಕ್ಕಷ್ಟು ಸಾಧನೆ ಮಾಡಿದ್ದಾರೆಂದು ಒಪ್ಪಿಕೊಳ್ಳಬಹುದು. ಇದಕ್ಕೆ ಮಂತ್ರಿಗಳು ಮತ್ತು ಉಪಮಂತ್ರಿಗಳು ಕಾರಣ. ಮಂತ್ರಿಗಳು ಅದೇ ಪ್ರದೇಶದಿಂದ ಬಂದವರು, ರೇಷ್ಮೆ ಕೈಗಾರಿಕೆಯ ಕಷ್ಟಸುಖಗಳನ್ನು ಅರಿತವರು. ರೈತರಿಗೇನು ಕಷ್ಟವಿತ್ತು ಅದನ್ನು ದಿಟ್ಟತನದಿಂದ ಪರಿಹಾರ ಮಾಡಿದ್ದಾರೆ. ಮಾರ್ಕೆಟ್ ಯೋಜನೆಯನ್ನು ಜಾರಿಗೆ ತಂದಿದ್ದಾರೆ. 1952 ರಲ್ಲಿ ಕಾನೂನು ಮಾಡಿ ಅದನ್ನು ಜಾರಿಗೆ ತರಬೇಕಾದರೆ ಸುಮಾರು ಹತ್ತು ವರ್ಷ ಹಿಡಿಯಿತು. ರೈತರ ಜೀವನಕ್ಕೆ ಸಂಬಂಧಪಟ್ಟ ಈ ಕಾನೂನನ್ನು ಜಾರಿ ಮಾಡಬೇಕಾದರೆ ಹತ್ತು ವರ್ಷ ಹಿಡಿಯಿತು. ಕೊನೆಗೆ ರೈತಕುಟುಂಬದ ಮಂತ್ರಿಗಳೇ ಬಂದು ಅದನ್ನು ಜಾರಿಗೆ ಕೊಡಬೇಕಾಯಿತು. ಇದನ್ನು ಮಾಡಬೇಕಾದರೆ ಅವರಿಗೆ ಎಷ್ಟು ಕಷ್ಟವಾಯಿತೆಂಬುದು ಗೊತ್ತಿದೆ. ಆದರೆ ಧೈರ್ಯವಾಗಿ, ದಿಟ್ಟತನದಿಂದ ಆ ಕಷ್ಟಗಳನ್ನೆದುರಿಸಿ ಜನರಿಗೆ ಅನುಕೂಲವಾಗಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಜಾರಿಗೆ ತಂದಿದ್ದಾರೆ. ಇದರಿಂದ ರೈತರಿಗೆ ಅನುಕೂಲವಾಗಿದೆ. ಈ ಕೈಗಾರಿಕೆಯನ್ನು ನಾಲ್ಕು ಭಾಗವಾಗಿ ವಿಂಗಡಿಸಬಹುದು. ಮೊಟ್ಟ ಮೊದಲು ರೇಷ್ಮೆ ಮೊಟ್ಟೆ ಮಾಡುವುದು. ಇದರಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿದ್ದಾರೆ. ಎರಡು ಮೂರು ವರ್ಷಗಳ ಹಿಂದೆ ಸೀಡ್ ಪ್ರಿಪೇರರ್ಸ್ ಏನುಬೇಕಾದರೂ ಮಾಡಬಹುದಾಗಿತ್ತು. ಯಾರು ಬೇಕಾದರೂ ಬಿತ್ತನೆಯನ್ನು ಮಾಡಬಹುದಾಗಿತ್ತು. ಆದರೆ ರೋಗರಹಿತ ಮೊಟ್ಟೆಯನ್ನು ಮಾಡುವುದು ಮುಖ್ಯ, ಆದರೆ ಈಗ ಇದಕ್ಕವಕಾಶವಿಲ್ಲ. ಬೆಳೆಯುವವನ ಆರ್ಥಿಕ ಸ್ಥಿತಿ ಉತ್ತಮ ಮಾಡಬೇಕಾದರೆ ರೋಗರಹಿತ ಮೊಟ್ಟೆಯನ್ನು ಮಾಡಬೇಕು. ಲೈಸೆನ್ಸ್ ಪಡೆಯಬೇಕು. ಬಿಳಿಯ ಮೊಟ್ಟೆ, ಫಾರೆನ್ ರೇಸ್ ಸರಕಾರದವರು ಇಟ್ಟುಕೊಂಡು ಉತ್ತಮವಾದ ಪ್ರದೇಶದಲ್ಲಿ ಬಿಳಿಗಿರಿ ರಂಗನ ಬೆಟ್ಟದಂತಹ ಪ್ರದೇಶಗಳಲ್ಲಿ ಮಾಡಿ, ಮಾರುವವರಿಗೆ ಸಾಕಷ್ಟು ಪ್ರಮಾಣದಲ್ಲಿ ಒದಗಿಸಬೇಕೆಂದು ವ್ಯವಸ್ಥೆ ಮಾಡಿದ್ದಾರೆ ; ಇದು ಪೂರ್ತಿ ಆಗಿಲ್ಲ, ಪಂಚವಾರ್ಷಿಕ ಯೋಜನೆಯನ್ನು ನೋಡಿದರೆ ಈ ಬಗ್ಗೆ ಸರಕಾರದವರು ಧೃಡ ಸಂಕಲ್ಪ ಇಟ್ಟುಕೊಂಡಿದ್ದಾರೆ ಇದನ್ನು ಮಾಡುತ್ತಾರೆ ಎಂಬ ನಂಬಿಕೆ ಬರುತ್ತದೆ.

ಎರಡನೆಯದು ಮೊಟ್ಟೆ ಒಡೆದ ಮೇಲೆ ಎಂಟು ದಿವಸವಾದಮೇಲೆ ಚಾಕಿ ಆಗುತ್ತದೆ, ಇದನ್ನು ಸಣ್ಣ ಪ್ರಮಾಣದಲ್ಲಿ ರೈತರು ಮಾಡುವುದರಿಂದ ಹೆಚ್ಚಿನ ಕಾಲ ಅವರಿಗೆ ಹೋಗುತ್ತದೆ. ಅಲ್ಲದೆ ಹುಳು ಬಹಳ ಸಣ್ಣವಾಗಿರುವ ಸಂದರ್ಭದಲ್ಲಿ ಅದನ್ನು ಸಾಕುವುದು ಕಷ್ಟವೆಂದು ತಿಳಿದು ಚಾಕಿ ರೇರಿಂಗ್ ಕಂಟ್ರಾಕ್ಟ್ ವ್ಯವಸ್ಥೆ ಮಾಡಬೇಕೆಂದು ಸರಕಾರ ಕಾರ್ಯಕ್ರಮ ಹಾಕಿಕೊಂಡಿದೆ. ಮೂರನೆಯ ಯೋಜನೆಯಲ್ಲಿ 108 ಚಾಕಿ ರೇರಿಂಗ್ ಕೇಂದ್ರಗಳನ್ನು ಏರ್ಪಾಡು ಮಾಡಬೇಕೆಂದಿಟ್ಟುಕೊಂಡಿದ್ದಾರೆ. ಇದರಲ್ಲಿ ಖಂಡಿತವಾಗಿಯೂ ಕೂಡ ಈ ರೇಷ್ಮೆ ಕೈಗಾರಿಕೆಯಲ್ಲಿ ಅಭಿವೃದ್ಧಿ ಸಾಧನೆ ಮಾಡುವುದಕ್ಕಾಗುವುದಿಲ್ಲ; ಕೊನೆಯ ಪಕ್ಷ ಪ್ರತಿಯೊಂದು ಗ್ರಾಮದಲ್ಲಿಯೂ ಒಂದೊಂದು ಚಾಕಿ ರೇರಿಂಗ್ ಕೇಂದ್ರವನ್ನು ತೆರೆಯತಕ್ಕ ನಿರ್ಧಾರವನ್ನು ಸರಕಾರದವರು ಕೈಕೊಳ್ಳಬೇಕು. ಈ ಸಂಬಂಧದಲ್ಲಿ ಹಣದ ಕೊರತೆಯನ್ನು ಹೇಳುತ್ತಾರೆ. ಆದರೆ ಸಂಪೂರ್ಣವಾಗಿ ಸರಕಾರವೇ ಹಣವನ್ನು ಕೊಟ್ಟು ಮಾಡಬೇಕಾದ ಅಗತ್ಯವಿಲ್ಲ, ಲಾಭವೂ ಇಲ್ಲ ನಷ್ಟವೂ ಇಲ್ಲ ಎನ್ನುವ ಆಧಾರದ ಮೇಲೆ ಮಾಡಬಹುದು. ಆಗ ಇದನ್ನು ಬೇಕಾದಷ್ಟು ಪ್ರಮಾಣದಲ್ಲಿ ತಯಾರು ಮಾಡಬಹುದು. ಇಲಾಖೆಗೆ ನಷ್ಟವಾಗದೇ ಯಿರುವ ಹಾಗೆ ಮೊಟ್ಟೆಯನ್ನು ಹೇಗೆ ಉಪಯೋಗ ಮಾಡುತ್ತಾರೊ ಹಾಗೆ ಯೋಜನೆಯನ್ನು ಹಾಕಿಕೊಳ್ಳಬಹುದು. ಹೀಗೆ ಪ್ರತಿಯೊಂದು ಗ್ರಾಮದಲ್ಲಿಯೂ ಚಾಕಿ ರೇರಿಂಗ್ ಕೇಂದ್ರವನ್ನು ಮಾಡುವ ಅವಶ್ಯಕತೆ ಇದೆ.

ಮೂರನೆಯದಾಗಿ ಮಾರ್ಕೆಟಿಂಗ್ ವಿಷಯ. ಮಂತ್ರಿಗಳು ಧೈರ್ಯಮಾಡಿ ಇದನ್ನು ಸ್ಥಾಪನೆ ಮಾಡಿದರು. ಇದು ಬೇಡವೆಂದು ನಾನಾ ರೀತಿಯ ಅಡ್ಡಿ ಆತಂಕಗಳು ಬಂದವು, ಹೋರಾಟ ನಡೆಯಿತು. ಹೈಕೋರ್ಟಿನಲ್ಲಿ ಪರಿಶೀಲನೆ ನಡೆಯಿತು. ಕಾನೂನಿನಲ್ಲಿ ಬದಲಾವಣೆಯಾಗಿ ನಂತರ ಮಾಡಬಹುದೆಂದು ತೀರ್ಮಾನವಾದಮೇಲೆ, ನಾಲ್ಕೈದು ಕಡೆ ಮಾಡಿದ್ದಾರೆ. ಆದರೆ ಇದನ್ನು ಜಾರಿಗೆ ತಂದಾಗ ಒಂದು ತರ ತೊಂದರೆ ಇತ್ತು. ಆ ಪ್ರದೇಶಕ್ಕೊಳಪಟ್ಟ ರೈತರು ಸಂಬಂಧಪಟ್ಟ ಮಾರ್ಕೆಟ್ಟಿಗೆ ಮಾತ್ರ ಹೋಗಬೇಕೆಂಬ ನಿರ್ಬಂಧವಿತ್ತು. ಹೈಕೋರ್ಟ್‌ನವರು ಈ ನಿರ್ಬಂಧವನ್ನು ತೆಗೆಯಬೇಕೆಂದು ಹೇಳಿದಮೇಲೆ ಅದನ್ನು ತೆಗೆದುಹಾಕಿದರು. ಇದರಿಂದ ಏನು ಪರಿಣಾಮವೆಂಬುದನ್ನು ಸರಕಾರ ಇನ್ನೂ ಯೋಚನೆ ಮಾಡಿಲ್ಲ. ಮೊದಲು ವ್ಯಾಪಾರ ಕೇಂದ್ರೀಕೃತವಾಗಿತ್ತು. ಈಗ ಚಾಮರಾಜನಗರದಲ್ಲಿ ಒಂದು ಪ್ರದೇಶದಿಂದ ನಾಲ್ಕೈದು ಮಾರ್ಕೆಟ್‌ಗಳಿಗೆ ಹೋಗುತ್ತಿದೆ. ಇದು ಯಶಸ್ವಿಯಾಗಿ ನಡೆಯಬೇಕಾದರೆ ಒಂದು ಅಂಶವನ್ನು ಗಮನದಲ್ಲಿಡಬೇಕು. ಹೆಚ್ಚು ಗೂಡುಗಳು ಒಂದೇ ಕಡೆ ಬರುವುದರಿಂದ ಸ್ಪರ್ಧೆ ತಂದ ಹಾಗಾಗುತ್ತದೆ; ಅವರಲ್ಲಿ ಸ್ಪರ್ಧೆ ಬಂದು ಬೆಳೆಯುವವನಿಗೆ ಒಳ್ಳೆಯ ಧಾರಣೆ ಸಿಕ್ಕುವುದಕ್ಕೆ ಅವಕಾಶವಾಗುತ್ತದೆ. ಆದರೆ ಹದಿನೆಂಟು ಇಪ್ಪತ್ತು ಮಾಡುವುದರಿಂದ ಕೆಲವರಿಗೆ ಲಾಭ ದೊರಕುತ್ತದೆ; ಇನ್ನು ಕೆಲವು ಕಡೆ ಸರಕಾರದ ಸಂಬಳ ಕೊಡುತ್ತಾರೆ. ಕೆಲವು ಅಧಿಕಾರಿಗಳಿಗೆ ಕೆಲಸ ಕೊಡುವ ದೃಷ್ಟಿಯಿಂದ ಕೆಲವು ಮಾರ್ಕೆಟ್‌ಗಳಿವೆ. ಇದನ್ನು ಪರಿಶೀಲನೆ ಮಾಡಿ ಎಲ್ಲಿ ಅವಶ್ಯಕತೆಯಿರುತ್ತದೆಯೋ ಅಲ್ಲಿ ಮಾತ್ರ ಮಾಡಬೇಕು. ಬೇರೆ ಕಡೆಗಳಲ್ಲಿರುವುದನ್ನು ತೆಗೆಯಬೇಕೆಂದು ಮನವಿ ಮಾಡುತ್ತೇನೆ.

ಈ ಮಾರ್ಕೆಟ್‌ಗಳಲ್ಲಿ ಮಾರ್ಕೆಟ್ ಫೀಯನ್ನು ಒಂದೂವರೆ ರೂಪಾಯಿಗೆ ಇಳಿಸುವುದಾಗಿ ಆಶ್ವಾಸನೆ ಕೊಟ್ಟಿದ್ದರು; ಬಹುಶಃ ಅದನ್ನು ಜಾರಿಗೆ ತರಲಿಲ್ಲ, ಆದಷ್ಟು ಬೇಗ ಅದನ್ನು ಜಾರಿಗೆ ತರುವುದು ಒಳ್ಳೆಯದು. ಒಂದು ರೂಪಾಯಿ ರೇಟ ಮಾಡಿದರೆ ಹೆಚ್ಚು ಸಿಕ್ಕಬಹುದು ಎಂಬ ಒಂದು ವಾದ ಇದೆ. ಸರಕಾರ ಇದನ್ನು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಒಟ್ಟಿನಲ್ಲಿ ಒಂದೂವರೆ ರೂಪಾಯಿ ರೇಟ ಕೊಡುವುದನ್ನು ಜಾರಿಗೆ ಕೊಡಬೇಕೆಂದು ಸರಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ರೇಷ್ಮೆಗೂಡು ಮಾರಾಟದ ವಿಚಾರದಲ್ಲಿ ಮಾರ್ಕೆಟ್ ಪರಿಸ್ಥಿತಿ ಹೇಗಿದೆ ಎಂದರೆ ಹಳ್ಳಿಗಳಲ್ಲ ಮಾರ್ಕೆಟ್ ಯಾರ್ಡ್ ಸಿಕ್ಕುವುದಿಲ್ಲ. ಎಲ್ಲಿಯೋ ಒಂದು ಮನೆಯಲ್ಲಿ ಮಾರ್ಕೆಟ್ ಯಾರ್ಡ್ ಎಂದು ಮಾಡಿರುತ್ತಾರೆ. ಅಲ್ಲಿ ವ್ಯವಸ್ಥೆ ಸರಿಯಾಗಿರುವುದಿಲ್ಲ. ಒಂದು ದಿವಸ ರೇಷ್ಮೆ ಗೂಡುಗಳು ಮಾರಾಟವಾಗದೇ ಇದ್ದರೆ ಮರು ದಿವಸದವರೆಗೆ ಅವುಗಳನ್ನು ಸರಿಯಾಗಿ ಇಟ್ಟು ಮಾರಾಟ ಮಾಡಿ ಹೋಗುವ ಹಾಗೆ ಒಂದು ವ್ಯವಸ್ಥೆ ಮಾಡಬೇಕಾದುದು ಅಗತ್ಯ. ಇದಲ್ಲದೆ ಗೂಡು ಕೊಂಡ ಮೇಲೆ ಅದನ್ನು ಇಡುವುದಕ್ಕೆ ಒಂದು ಸರಿಯಾದ ವ್ಯವಸ್ಥೆ ಮಾಡಬೇಕಾದದು ಅಗತ್ಯ. ಒಳ್ಳೇ ಮಾರ್ಕೆಟ್ ಯಾರ್ಡ್, ಸ್ಟೋರಿಂಗ್ ಫ್ಯಾಸಿಲಿಟೀಸ್ ಒದಗಿಸಿಕೊಡುವುದಕ್ಕೆ ಆದಷ್ಟು ಬೇಗ ಪರಿಶೀಲನೆ ಮಾಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

ಬೆಂಗಳೂರಿನಿಂದ ಒಂದು ಸ್ಟಡಿ ಟೀಮು ಚಾಮರಾಜನಗರಕ್ಕೆ ಬಂದಾಗ್ಗೆ ನಮ್ಮಲ್ಲಿಯ ರೀಲರ್ಸ್ ಅಸೋಸಿಯೇಷನ್ನಿನವರು ಅವರಿಗೆ ತಮ್ಮ ಬೇಡಿಕೆಗಳ ಒಂದು ಮೆಮೋರಾಂಡಂ ಕೊಟ್ಟಿದ್ದಾರೆ. ಸರಕಾರಕ್ಕೂ ಮತ್ತು ಮಂತ್ರಿಗಳಿಗೂ ಸಹ ಮೆಮೊರಾಂಡಂ ಕಳಿಸಿದ್ದಾರೆ. ಬೆಂಗಳೂರು ಪೇಟೆಯಲ್ಲಿ ರೇಷ್ಮೆ ಗೂಡುಗಳಿಗೆ ಸರಿಯಾದ ಬೆಲೆ ದೊರೆಯುತ್ತಾ ಇಲ್ಲ. ಆದುದರಿಂದ ಒಂದು

(ಶ್ರೀ ಎಂ. ಸಿ. ಬಸಪ್ಪ)

ಸರಿಯಾದ ಬೆಲೆ ದೊರೆಯುವ ಹಾಗೆ ಮಾಡಲು ರೆಗ್ಯುಲೇಟೆಡ್ ಮಾರ್ಕೆಟ್ ಪ್ರಾರಂಭ ಮಾಡಬೇಕೆಂಬ ಮನವಿ ಮಾಡಿಕೊಂಡಿದ್ದಾರೆ. ಸರಕಾರದ ಒಂದು ರೀತಿ ವಾದ ಇದೆ. ಸಹಕಾರ ಸಂಸ್ಥೆಗಳನ್ನು ಸ್ಥಾಪನೆ ಮಾಡಿದ್ದೇವೆ ನೀವೂ ಸಹ ಅದರಲ್ಲಿ ಬನ್ನಿರಿ ಎಂದು ಹೇಳುತ್ತಾರೆ. ಹಾಗಾದರೆ ನಾನು ಸರಕಾರಕ್ಕೆ ಒಂದು ಪ್ರಶ್ನೆ ಕೇಳುತ್ತೇನೆ. ಅಗ್ರಿಕಲ್ಚರಲ್ ಕಮೋಡಿಟಿ ವಿಚಾರದಲ್ಲಿ ಸಹಕಾರ ಸಂಸ್ಥೆಗಳನ್ನು ಮಾಡುತ್ತೇವೆ ಬನ್ನಿರಿ ಎಂದು ಏಕೆ ಹೇಳುವುದಿಲ್ಲ? ಇದಕ್ಕೋಸ್ಕರ ರೆಗ್ಯುಲೇಟೆಡ್ ಮಾರ್ಕೆಟ್ ಏಕೆ ಮಾಡಿದ್ದೀರಿ? ಸರಿಯಾದ ತೂಕ, ಬೆಲೆ, ದೊರೆಯಬೇಕೆಂಬ ಉದ್ದೇಶದಿಂದ ರೆಗ್ಯುಲೇಟೆಡ್ ಮಾರ್ಕೆಟ್ ಮಾಡಲಾಗಿದೆ. ಅದೇ ರೀತಿಯಾಗಿ ರೇಷ್ಮೆ ಗೂಡು ಬೆಳೆಯುತಕ್ಕ ರೈತರಿಗೂ ಕೂಡ ಸರಿಯಾದ ಬೆಲೆ ತೂಕ ಸಿಕ್ಕಬೇಕಲ್ಲವೇ? ಬೆಂಗಳೂರಿನಲ್ಲಿ ಅವಿನ್ಯೂ ರೋಡಿನಲ್ಲಿ ಎಷ್ಟು ಪ್ರಾಮಾಣಿಕತೆಯಿಂದ ವ್ಯಾಪಾರ ನಡೆಯುತ್ತದೆ ಎಂಬುದು ತಮಗೆಲ್ಲರಿಗೂ ಗೊತ್ತಿರುವ ವಿಚಾರ. ವ್ಯಾಪಾರ ಮಾಡುವ ಸ್ಥಳದಲ್ಲಿ ಬಹಳ ಮೋಸ ನಡೆಯುತ್ತಿದೆ. ಕೈಮೇಲೆ ಬಟ್ಟೆ ಮುಚ್ಚಿ ಬೆರಳುಗಳಿಂದ ಒಬ್ಬರಿಗೊಬ್ಬರು ಸಂಕೇತ ಮಾಡಿ, ವ್ಯಾಪಾರ ನಡೆಸುತ್ತಾರೆ, ಬೆಂಗಳೂರು ನಗರದ ಮಧ್ಯದಲ್ಲಿ ಈ ರೀತಿ ವ್ಯಾಪಾರದಲ್ಲಿ ಹಗಲು ದರೋಡೆ ನಡೆಯುತ್ತಿದೆ. ಇದರಲ್ಲಿ ಬಹಳ ಮೋಸ ಇದೆ. ಇದನ್ನು ಹತೋಟಿಗೆ ತರುತ್ತೇವೆಂದು ಹೇಳುವುದು ತಪ್ಪು. ನಾಗರೀಕತೆ ಇದ್ದು ಮೇಲ್ಮಟ್ಟದಲ್ಲಿ ಹಣ ಸಂಪಾದನೆಗೆ ಮೋಸ ನಡೆಯುತ್ತಿದ್ದರೆ ಅವನ್ನು ಹತೋಟಿಗೆ ತರುವುದು ಬಹಳ ಕಷ್ಟ ಎಂದು ಹೇಳಬೇಕಾಗುತ್ತದೆ. ಆದರೆ ಧೈರ್ಯದಿಂದ ಮನಸ್ಸು ಮಾಡಿದರೆ ಮಾತ್ರ ಇದು ಸಾಧ್ಯವಾದೀತು ಎಂದು ಅನಿಸುತ್ತದೆ. ಆದರೆ ಸರಕಾರ ಇದಕ್ಕೆ ಮನಸ್ಸು ಕೊಡುವುದಿಲ್ಲ. ಹತೋಟಿಗೆ ತರುವುದು ಅಷ್ಟು ಸುಲಭವಾಗಿಲ್ಲ. ಇದಕ್ಕಾಗಿ ಹಾಸನದಲ್ಲಿ ಒಂದು ರೆಗ್ಯುಲೇಟೆಡ್ ಮಾರ್ಕೆಟ್ ಮಾಡಿದ್ದಾರೆ. ಜನರಿಗೆ ಯೋಗ್ಯ ಬೆಲೆ ದೊರೆಯುವ ಹಾಗೆ ಮಾಡಿದ್ದಾರೆ. ಒಂದು ಪೌಂಡು ಮಾರಾಟ ಮಾಡಿದರೆ ನಾಲ್ಕು ರೂಪಾಯಿ ಡಿಸ್ಕೌಂಟು ತೆಗೆದುಕೊಂಡು ವೆಚ್ಚ ಕಳೆದು ನಫೆ ಎರಡು ಪರ್ಸೆಂಟು ಕೊಡಬೇಕೆಂದು ವಿಧಿಸಿದ್ದಾರೆ. ಇದನ್ನು ಬಹಳ ಸುವ್ಯವಸ್ಥಿತ ರೀತಿಯಲ್ಲಿ ಮಾಡಿಕೊಂಡಿದ್ದಾರೆ. ರಶೀದಿ ಕೊಡುವುದರಲ್ಲಿ ಎರಡು ಪರ್ಸೆಂಟ್ ಲಾಭ ಎಂದು ಬರೆದು ಅದರ ಮೇಲೆ 10 ನಯೇ ಪೈಸೆ ಧರ್ಮಾದಾಯ ಎಂದು ತೆಗೆದುಕೊಳ್ಳುತ್ತಾರೆ. ನಾನಾರೀತಿಯಲ್ಲಿ ಕಮಿಷನ್ ತೆಗೆದುಕೊಳ್ಳುವುದನ್ನು ನೋಡಿದರೆ ಎರಡು ಎರಡೂವರೆ ಪರ್ಸೆಂಟ್ ಲಾಭ ಬರುವುದಿಲ್ಲವಾದ್ದರಿಂದ ಜನರಿಗೆ ಬಹಳ ತೊಂದರೆಯಾಗಿದೆ.

ಇನ್ನು ಕೊನೆಯದಾಗಿ ಮುಖ್ಯವಾಗಿ ಹೇಳಬೇಕಾದುದು ಏನೆಂದರೆ ಫಿಲೇಚರ್ಸ್‌ನಲ್ಲಿ ಲಕ್ಷಾಂತರ ರೂಪಾಯಿ ನಷ್ಟವಾಗುತ್ತಿದೆ. ಇದನ್ನು ಸರಕಾರವೇ ವಹಿಸಿಕೊಂಡು ಏಕೆ ನಡಿಸಬಾರದು ಎಂದು ನಾನು ಕೇಳುತ್ತೇನೆ. ಸರಕಾರದ ವಾದ ಯಾರೂ ಎತ್ತಿ ಹಿಡಿಯುವುದಿಲ್ಲ ಯಾರೂ ಎತ್ತಿ ಹಿಡಿಯಬೇಕಾಗಿಲ್ಲ ಈ ರೇಷ್ಮೆ ಕೈಗಾರಿಕೆ ಮೇಲೆ ಸುಮಾರು ಹತ್ತು ಲಕ್ಷ ಜನ ಜೀವನೋಪಾಯಕ್ಕಾಗಿ ಅವಲಂಬಿಸಿದ್ದಾರೆ. ಆದುದರಿಂದ ಈ ಕೈಗಾರಿಕೆಯಲ್ಲಿ ಆದಷ್ಟು ಮಟ್ಟಿಗೆ ನಷ್ಟವಾಗುವುದನ್ನು ಕಡಿಮೆ ಮಾಡಲು ಏನಾದರೂ ಮಾಡಬೇಕೆಂದೂ ಮತ್ತು ಅದಕ್ಕಾಗಿ ಪರಿಶೀಲನೆ ಮಾಡಬೇಕೆಂದೂ ಸೂಚಿಸುತ್ತೇನೆ. ರೇಷ್ಮೆ ಗೂಡು ಮಾರಾಟ ಮಾಡುವುದರಲ್ಲಿ ಲಾಭ ನಷ್ಟ ಸಾಮಾನ್ಯವಾಗಿ ಅವಲಂಬಿಸಿವೆ. ಆದುದರಿಂದ ಶೇಕಡ 75ರಷ್ಟು ಗೂಡು ಯಾವ ಬೆಲೆಗೆ ಯಾವ ರೀತಿ ಮಾರಾಟ ಮಾಡಿದ್ದಾರೆ ಎನ್ನುವುದನ್ನು ನೋಡತಕ್ಕದ್ದು ಮುಖ್ಯ. ಗೂಡು ಕೊಂಡುಕೊಳ್ಳುವುದಕ್ಕೆ ಮಾರ್ಕೆಟ್ ಪರ್ಚೇಜ ಆಫೀಸರ್ ಎಂದು ಇದ್ದಾರೆ. ಅವರು ಲಾಟ್ ಕೊಂಡುಕೊಳ್ಳುತ್ತಾರೆ. ಹತ್ತು ಜನ ಪರ್ಚೇಜ ಆಫೀಸರ್ಸ್ ಹತ್ತು ಮಾರ್ಕೆಟ್ಟಿಗೆ ಹೋಗಿ ಬೇರೆಬೇರೆ ಕಡೆ ಕೊಂಡುಕೊಳ್ಳುತ್ತಾರೆ ಮತ್ತು ಅದನ್ನೆಲ್ಲಾ ಒಟ್ಟಿಗೆ ಒಂದು ಕಡೆ ಸೇರಿಸಿ ಉಪಯೋಗಿಸುವುದರಿಂದ ಯಾವ ರೇಟಿಗೆ ಎಷ್ಟು ದೊರೆಯಿತು ಎನ್ನುವುದನ್ನು ಹೇಳುವುದಕ್ಕಾಗುವುದಿಲ್ಲ. ಅದನ್ನು ಚೆಕ್ ಮಾಡುವುದಕ್ಕೆ ಹತೋಟಿ ಇಲ್ಲ. ಆದುದರಿಂದ ಇದರಲ್ಲಿ ಒಂದು ವ್ಯವಸ್ಥೆ ಮಾಡಬೇಕಾದುದು ಅಗತ್ಯವಾಗಿದೆ. ಇದಲ್ಲದೆ ಪರ್ಚೇಜ್ ಆಫೀಸರರು ರೇಟಿನಲ್ಲಿ ಕೂಡ ಹೆಚ್ಚು ಕಡಿಮೆ ಮಾಡುತ್ತಾರೆ. ಮಾರ್ಕೆಟ್ಟಿನಲ್ಲಿ ನಾಲ್ಕು ರೂಪಾಯಿ ಬೆಲೆ ಬರತಕ್ಕಂಥಾದ್ದನ್ನು ಬಿಟ್ಟುಬಿಟ್ಟು ಆ ಮೇಲೆ ಅದನ್ನೇ ಐದು ರೂಪಾಯಿಗೆ ಕೊಂಡುಕೊಳ್ಳುತ್ತಾರೆ ಮತ್ತು ಈ ರೀತಿ ಹೆಚ್ಚು ಬೆಲೆ ಅವರಿಗೆ ಕೊಡುತ್ತಾರೆ. ಇದರಂತೆಯೇ ನಿಜವಾಗಿಯೂ ಐದು ರೂಪಾಯಿ ಬೆಲೆ ಬಾಳುವ ಗೂಡನ್ನು ನಾಲ್ಕು ರೂಪಾಯಿಗೆ ಬಿಡುತ್ತಾರೆ, ಹಾಗೂ ಕೊಂಡುಕೊಳ್ಳದೆ ಬಿಟ್ಟುಬಿಡುತ್ತಾರೆ. ಇದರಿಂದ ಕೆಲವು ಸಲ ರೈತರಿಗೆ ಹೆಚ್ಚು ಬೆಲೆ ಬರುತ್ತದೆ. ಕೆಲವು ಸಲ ಹೆಚ್ಚು ಬೆಲೆ ಬರತಕ್ಕಂಥಾದಕ್ಕೆ ಕಡಿಮೆ ಬೆಲೆ ಬರುತ್ತದೆ ಮತ್ತು ರೈತರಿಗೆ ನಷ್ಟ ಉಂಟಾಗುತ್ತದೆ. ಈ ರೀತಿ ಮಾಡಲು ಇದರಲ್ಲಿ ಒಂದು ಅವಕಾಶ ಇದೆ. ಯಾರಿಗಾದರೂ ಫೇವರ್ ಮಾಡುವ ಮನಸ್ಸು ಇದ್ದರೆ ಹೀಗೆ ಜಾಸ್ತಿ ಬೆಲೆ ಬರುವ ಹಾಗೆ ಮಾಡುತ್ತಾರೆ.

ಆದುದರಿಂದ ಸರಕಾರದಲ್ಲಿ ನಾನು ಒಂದು ಮನವಿ ಮಾಡಿಕೊಳ್ಳುತ್ತೇನೆ. ಸರಿಯಾದ ಬೆಲೆ ಕೊಟ್ಟಿದ್ದಾರೆಯೇ ಸಮಾಧಾನವಾಗುವ ರೀತಿಯಲ್ಲಿ ಕೊಟ್ಟಿದ್ದಾರೆಯೇ ಎಂಬುದಕ್ಕೆ ಸದ್ಯಕ್ಕೆ ಚೆಕ್ ಇಲ್ಲ. ಇದಕ್ಕೆ ಒಂದು ಚೆಕ್ ಇರಬೇಕಾದುದು ಅಗತ್ಯ. ಪ್ರತಿಯೊಂದು ಲಾಟ್‌ನಿಂದ ಒಂದು ಸ್ಯಾಂಪಲ್ ತೆಗೆದುಕೊಂಡು ರೀಲಿಂಗ್ ಮಾಡಿ ಸರಿಯಾದ ಬೆಲೆ ಕೊಟ್ಟಿದ್ದಾರೆಯೇ ಎಂಬುದಕ್ಕೆ ಒಂದು ಸ್ಟ್ಯಾಂಡರ್ಡ್ ನಿಗದಿ ಮಾಡಬೇಕು. ಏನಾದರೂ ವ್ಯತ್ಯಾಸ ಬಂದರೆ ಚೆಕ್ ಮಾಡಲು ಸಾಧ್ಯವಿದೆ. ಇಂಥ ಹತೋಟಿ ಇರಬೇಕಾದುದು ಅವಶ್ಯಕ. ಇದಲ್ಲದೆ ಸರಿಯಾದ ಬೆಲೆ ಕೊಟ್ಟಿಲ್ಲ ಎಂದು ರೈತರು ಚಾಲೆಂಜ ಮಾಡಲು ಅವಕಾಶ ಇಲ್ಲ. ಒಂದು ಸರಿಯಾದ ವ್ಯವಸ್ಥೆ ಇಲ್ಲದೇ ಇರುವುದರಿಂದ ಈ ತೊಂದರೆಯಾಗಿದೆ. ಇದರಿಂದ ಲಕ್ಷಗಟ್ಟಲೆ ನಷ್ಟವಾಗುತ್ತಿದೆ. ಸಿಲ್ಕ ಫಿಲೇಚರ್‌ನಲ್ಲಿ ಎರಡು ಲಕ್ಷ ಪೌಂಡು ಸಹ ಮಾಡುತ್ತಾ ಇಲ್ಲ. ಆದುದರಿಂದ ಸರಕಾರದವರು ಫ್ಯಾಕ್ಟರಿಗೆ ಕೊಡತಕ್ಕಂಥ ನೂಲನ್ನು ತೆಗೆಸಿ ಪರಿಶೀಲನೆ ಮಾಡಿ ಸರಿಯಾದ ರೇಟನ್ನು ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಕೊನೆಯದಾಗಿ ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

2 P. M.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).— ಸ್ವಾಮಿ, ನಮ್ಮ ಮುಂದಿರತಕ್ಕ ಕೈಗಾರಿಕೆ ಇಲಾಖೆಗೆ ಸಂಬಂಧಪಟ್ಟ 1964-65ನೇ ಸಾಲಿನ ಬೇಡಿಕೆಗಳ ಬಗ್ಗೆ ಮಾತನಾಡುತ್ತಾ, ಈ ಸಂದರ್ಭದಲ್ಲಿ ಒಂದೆರಡು ವಿಷಯಗಳನ್ನು ಹೇಳಲು ಇಷ್ಟಪಡುತ್ತೇನೆ.

ಸ್ವಾಮಿ ತಾವು ಈ ಖಾತೆಯನ್ನು ವಹಿಸಿಕೊಂಡಮೇಲೆ ಬಹುಶಃ ಸಾಕಷ್ಟು ಪ್ರಶಂಸನೀಯ ರೀತಿಯಲ್ಲಿ ಪ್ರಗತಿ ಸಾಧಿಸಿದ್ದೀರಿ ಎಂದು ಹೇಳಿದರೆ ತಪ್ಪಾಗಲಾರದು. ನಾನೇನೂ ಮುಖಸ್ತುತಿ ಮಾಡಬೇಕೆಂದು ಹೇಳುತ್ತಿಲ್ಲ. ಏನು ಸಾಧನೆಯಾಗಿದೆ, ಪ್ರಗತಿಯಾಗಿದೆ ಎಂದು ತಿಳಿದುಕೊಳ್ಳಲು, ಅಂಕಿ ಅಂಶಗಳನ್ನು ತುಲನ ಮಾಡಿದರೆ ಗೊತ್ತಾಗುತ್ತದೆ. ಈ ಇಲಾಖೆ ನಿಜವಾಗಿ ಬಹಳ ಉತ್ತಮ ರೀತಿಯಲ್ಲಿ ಕೆಲಸಮಾಡುತ್ತಿದೆ ಎಂದು ನಾವು ಈ ಸಂದರ್ಭದಲ್ಲಿ ಹೇಳತಕ್ಕಂಥಾದ್ದು ಸೂಕ್ತ. ಇದರಿಂದ ತಾವು ಆಡಳಿತದಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಿರುವುದು ವ್ಯಕ್ತವಾಗುತ್ತದೆ.

ಸರಕಾರದ ಆಡಳಿತದಲ್ಲಿ ನಡೆಯುತ್ತಾ ಇದ್ದಂಥ ಕೆಲವು ಕೈಗಾರಿಕೆಗಳು ಏನು ನಷ್ಟದಲ್ಲಿ ಕೆಲಸಮಾಡುತ್ತಿದ್ದವು, ಅವು ಇವತ್ತಿನ ದಿವಸ ಲಾಭದಾಯಕವಾಗಿ ಕೆಲಸಮಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿರುತ್ತದೆ. ಇದರ ಬಗ್ಗೆ ಒದಗಿಸಿರುವ ಅಂಕಿ ಅಂಶಗಳನ್ನು ನೋಡಿದರೆ ಅದು ವ್ಯಕ್ತವಾಗುತ್ತದೆ. ಈ ಸಂದರ್ಭದಲ್ಲಿ ಒಂದೆರಡು ಮಾತುಗಳಿಂದ ನನ್ನ ಅಭಿಪ್ರಾಯವನ್ನು ಸೂಚನೆ ಮಾಡುತ್ತೇನೆ. ಉದಾಹರಣೆಗೆ ಹೇಳುವುದಾದರೆ ಪೋರ್ಸಿಲೇನ್ ಫ್ಯಾಕ್ಟರಿ 3-4 ವರ್ಷದ ಹಿಂಭಾಗದಲ್ಲಿ ಎಷ್ಟು ನಷ್ಟದಲ್ಲಿ ಕೆಲಸ ಮಾಡುತ್ತಿತ್ತೆಂದು ಅಂಕಿಅಂಶಗಳಿಂದ ಗೊತ್ತಾಗುತ್ತದೆ. ಈಗ ಅದು ಒಂದು ಪ್ರಶಂಸನೀಯವಾದ ರೀತಿಯಲ್ಲಿ ಪ್ರಗತಿ ಸಾಧಿಸಿದೆ. ಮೇಲ್ಮನೆಯಲ್ಲಿ ಪೋರ್ಸಿಲೇನ್ ಫ್ಯಾಕ್ಟರಿ ಬಗ್ಗೆ ಬಹುಶಃ ಸ್ವಲ್ಪ ಹೆಚ್ಚಿನ ರೀತಿಯಲ್ಲಿ ಟೀಕೆ ಬಂದುದರಿಂದ, ನಾನು ನನ್ನ ಅಭಿಪ್ರಾಯವನ್ನು ಇಡಬೇಕಾಗಿದೆ. ಇವತ್ತು ಪೋರ್ಸಿಲೇನ್ ಫ್ಯಾಕ್ಟರಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಹೆಚ್ಚಿನ ರೀತಿಯೊಳಗೆ ಲಾಭವನ್ನು ಸಂಪಾದನೆ ಮಾಡುತ್ತಾ ಇರತಕ್ಕಂಥಾದ್ದು ಕಂಡು ಬರುತ್ತಿದೆ. ಈ ಸಂದರ್ಭದಲ್ಲಿ ಅಲ್ಲಿರತಕ್ಕಂಥ ಮುಖ್ಯ ಆಡಳಿತ ಅಧಿಕಾರಿ ಈ ಒಂದು ದಕ್ಷತೆಗೆ ಕಾರಣ ಎಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ಅವರು ಕೆಲಸದಿಂದ ನಿವೃತ್ತಿ ಹೊಂದತಕ್ಕಂಥ ಕಾಲ ಬಂದಿದೆ. ಅವರು ಇನ್ನೂ ಕೆಲವು ಕಾಲ ಅದೇ ಅಧಿಕಾರದಲ್ಲಿ ಮುಂದುವರಿಯದೆ ಹೋದರೆ ಪ್ರಾಯಶಃ ಈ ಕೈಗಾರಿಕೆಯ ಪ್ರಗತಿಗೆ ಧಕ್ಕೆ ಬರುತ್ತದೆ ಎಂದು ನನ್ನ ಭಾವನೆ. ಇವರಿಗೆ ಸಂಬಂಧಪಟ್ಟಂತೆ ಅಲ್ಲಿ ಇನ್ನೂ ಒಬ್ಬಿಬ್ಬರು ಕೆಲಸಮಾಡುತ್ತಿದ್ದಾರೆ; ಅವರೂ ಈ ಫ್ಯಾಕ್ಟರಿಯ ಪ್ರಗತಿಗೆ ಮುಖ್ಯ ಕಾರಣರಾಗಿದ್ದಾರೆ. ಅವರುಗಳಿಗೆ ಇವತ್ತು ಕೊಡುತ್ತಿರುವುದು ಸುಮಾರು 300 ರೂಪಾಯಿ ಸಂಬಳ; ಅವರಿಗೆ ಬೇರೆಕಡೆಯಿಂದ 1,200-1,400 ರೂಪಾಯಿ ಸಂಬಳ ಮತ್ತು 3 ಸಾವಿರ ರೂಪಾಯಿವರೆಗಿರುವ ಗ್ರೇಡಿನ ಆಫರ್ ಬಂದಿದೆ. ಆದ್ದರಿಂದ ನೀವು ಅವರಿಗೆ ಕೊಡುತ್ತಿರತಕ್ಕಂಥ ಸಂಬಳ ಬಹಳ ಕಡಿಮೆ; ಅವರು ಹೊರಗೆ ಹೋಗತಕ್ಕಂಥ ಪರಿಸ್ಥಿತಿ ಬಂದಿದೆ. ಅವರು ಹೆಚ್ಚಿನ ಮಟ್ಟದ ಪರಿಣತರಾಗಿ, ಒಂದು ಸಂಸ್ಥೆ ಒಳ್ಳೆಯ ರೀತಿಯಲ್ಲಿ ಪ್ರಗತಿ ಹೊಂದುವುದಕ್ಕೆ ಕಾರಣರಾಗಿದ್ದಾರೆ. ಈ ಇಬ್ಬರು ಅಧಿಕಾರಿಗಳಿಗೆ ಸಂಬಳ, ಬಡ್ತಿ ಕೊಡತಕ್ಕಂಥ ಸೌಲಭ್ಯಗಳು ಏನಿವೆ ಅವುಗಳನ್ನು ಸರಿಯಾದ ರೀತಿಯಲ್ಲಿ ಪುನರ್ವಿಮರ್ಶೆ ಮಾಡದೆ ಹೋದರೆ, ಈ ಅಧಿಕಾರಿಗಳು ಹೆಚ್ಚಿನ ವೇತನ ದೊರೆಯುತಕ್ಕಂಥ ಸನ್ನಿವೇಶ ಒದಗಿದಾಗ ಅವರು ರಾಜೀನಾಮೆ ಕೊಡುವ ಅವಕಾಶವನ್ನು ಕಲ್ಪನೆ ಮಾಡುತ್ತೀರ, ಅದು ಬಹುಶಃ ಈ ಇಲಾಖೆ ಏನು ಪ್ರಗತಿಯನ್ನು

(ಶ್ರೀ ಎಚ್. ಡಿ. ದೇವೇಗೌಡ)

ಸಾಧಿಸಿದೆಯೋ ಅದಕ್ಕೆ ಧಕ್ಕೆ ತರುತ್ತವೆ ಎಂದು ನಾನು ಈ ಸಂದರ್ಭದಲ್ಲಿ ತಿಳಿಸಲು ಇಚ್ಛೆಪಡುತ್ತೇನೆ.

ಇಷ್ಟು ಹೇಳಿ, ಇನ್ನು ಸರಕಾರದ ಆಡಳಿತದಲ್ಲಿ ಕೆಲಸ ಮಾಡುತ್ತಿರುವ ಮೈನ್ಸ್ ಇಲಾಖೆ ಬಗ್ಗೆ ಹೇಳಬೇಕಾಗಿದೆ. ನನ್ನ ಕಾನ್‌ಸ್ಟಿಟ್ಯೂಯನ್ಸಿಗೆ ತಾವು ಬಂದಿದ್ದ ಕಾಲದಲ್ಲಿ ತಾವೇ ಖುದ್ದಾಗಿ ಏನೇನು ಖನಿಜಗಳು ಅಲ್ಲಿ ದೊರೆಯುತ್ತವೆ ಎಂದು ನೋಡಿದ್ದೀರಿ. ಇದು ಯಾವುದೇ ಕ್ಷೇತ್ರಕ್ಕೇ ಸಂಬಂಧಪಟ್ಟದ್ದಾಗಲಿ, ನಾನು ವಾದ ವಿವಾದಕ್ಕೆ ಹೋಗುವುದಿಲ್ಲ. ಇವತ್ತು ಇಲಾಖೆಯಲ್ಲಿ ಯಾವ ಕ್ಷೇತ್ರದಲ್ಲಿ, ಯಾವ ಜಿಲ್ಲೆಗಳಿಗೆ, ಎಷ್ಟು ತರಹೆ ಖನಿಜಗಳು ದೊರೆಯುತ್ತವೆ ಎಂಬ ಬಗ್ಗೆ ಸಾಕಷ್ಟು ಅಂಕಿ ಅಂಶಗಳಿಲ್ಲ. ನಾನು ಎರಡನೇ ವರ್ಷದಲ್ಲಿ ನನ್ನ ಬಜೆಟ್ ಭಾಷಣದಲ್ಲಿ ಎಲ್ಲೆಲ್ಲಿ ಯಾವಯಾವ ಅದಿರುಗಳು ದೊರೆಯುತ್ತವೆ, ಅವುಗಳಿಂದ ಯಾವ ಯಾವ ಇಂಡಸ್ಟ್ರಿಗಳನ್ನು ಮಾಡುವುದಕ್ಕೆ ಸಾಧ್ಯ ಎಂದು ಜಿಲ್ಲಾವೈಸ್ ಅಸೆಸ್‌ಮೆಂಟ್ ಮಾಡಿ ಅಂತ ಹೇಳಿದ್ದೆ. ಖಾಸಗಿಯವರೇ ಆಗಲಿ, ಸರಕಾರಿ ಕ್ಷೇತ್ರದಲ್ಲಿಯೇ ಆಗಲಿ. ಕೈಗಾರಿಕೆಗಳನ್ನು ಸ್ಥಾಪಿಸಬೇಕು ಎನ್ನತಕ್ಕಂಥ ಸಂದರ್ಭದಲ್ಲಿ ಸಾಕಷ್ಟು ಅಂಕಿ ಅಂಶಗಳು ದೊರೆಯುವುದಿಲ್ಲ ಯಾವಯಾವ ಅದಿರುಗಳು ಎಲ್ಲೆಲ್ಲಿ ದೊರೆಯುತ್ತವೆ ಎಂಬುದರ ಬಗ್ಗೆ ಸರ್ವೆ ಕಂಡಕ್ಟ್ ಮಾಡಿ ಅಂತ ಎಷ್ಟೋಸಲ ಹೇಳಿದೆ. ಈ ಅಂಕಿಅಂಶವಿಲ್ಲದಿದ್ದರೆ ಸರಕಾರ ಏನೂ ಮಾಡುವುದಕ್ಕಾಗುವುದಿಲ್ಲ. ಖಾಸಗಿಯವರೂ ಯಾವುದಾದರೂ ಕೈಗಾರಿಕೆ ಸ್ಥಾಪನೆಮಾಡಬೇಕೆಂದು ಪ್ರಯತ್ನ ಪಡುವುದಾದರೂ, ನಮ್ಮಲ್ಲಿ ಸಾಕಷ್ಟು ಅಂಕಿಅಂಶಗಳು ಅವರಿಗೆ ದೊರೆಯುವುದಿಲ್ಲವಾದ್ದರಿಂದ, ಅವರು ಯಾವುದೊಂದಕ್ಕೂ ಕೈಹಾಕುವುದಿಲ್ಲ. ಖಾಸಗಿ ಜನಗಳು ಹಿಂದೆ ಹೋಗತಕ್ಕಂಥ ಒಂದು ಸನ್ನಿವೇಶವಿರುವುದರಿಂದ ತಾವು ಜಿಲ್ಲಾವೈಸ, ಏನೇನು ಅದಿರುಗಳು ಸಿಗುತ್ತವೆ, ಯಾವ ಇಂಡಸ್ಟ್ರಿಗಳನ್ನು ಮಾಡತಕ್ಕಂಥ ಸಾಧ್ಯತೆ ಇದೆ ಎಂಬುದರ ಬಗ್ಗೆ ಒಂದು ಸರ್ವೆ ಮಾಡಿಸುವುದು ಸೂಕ್ತ ಎಂದು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ ಬಹುಶಃ ನನ್ನ ಕ್ಷೇತ್ರದಲ್ಲಿ ಸುಮಾರು 18-20 ಅದಿರುಗಳು ದೊರೆಯುತ್ತದೆ. ಯಾವ ಅದಿರಿನಿಂದ ಕೈಗಾರಿಕೆಗಳನ್ನು ಮಾಡಬಹುದು, ಯಾವ ಅದಿರನ್ನು ಉಪಯೋಗಿಸಬಹುದು ಎಂಬ ಬಗ್ಗೆ ಒಂದು ನಿಲುವಿಗೆ ಬರುವುದಕ್ಕೆ ಅದು ಸಾಧ್ಯವೋ ಇಲ್ಲವೋ ಎಂದು ಹೇಳುವುದಕ್ಕೆ ಅಂಕಿ ಅಂಶವಿಲ್ಲ, ಸರ್ವೆ ಮಾಡದ್ದರಿಂದ ಖಾಸಗಿ ಜನರು ಸ್ವಲ್ಪ ಕಷ್ಟ ಪರಿಸ್ಥಿತಿಯಲ್ಲಿದ್ದಾರೆ. ಇದರಲ್ಲಿ ಒಂದು ಆಸಕ್ತಿ ವಹಿಸಿದರೆ, ಸರಕಾರದವರೇ ಆಗಲಿ, ಖಾಸಗಿಯವರೇ ಆಗಲಿ, ಮುಂದೆ ಹೆಚ್ಚಿನ ಉಪಯೋಗ ಪಡೆಯತಕ್ಕಂಥ ಕಾಲ ದೊರೆಯುತ್ತದೆ. ಈ ಉತ್ತಮ ಅದಿರುಗಳಿಂದ ಏನಾದರೂ ಕೈಗಾರಿಕೆಗಳನ್ನು ಪ್ರಾರಂಭಿಸುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ತಮ್ಮ ಇಲಾಖೆಗೆ ಸಂಬಂಧವಿಲ್ಲದೆ ಇರತಕ್ಕಂಥ, ತಮ್ಮ ಆಡಳಿತದಲ್ಲಿ ಇರದೆ ಇರತಕ್ಕಂಥ, ಸಹ ಮಂತ್ರಿಗಳ ಅಧೀನಕ್ಕೆ ಹೋಗಿರುವ ಬಾಬಿನ ಬಗ್ಗೆ ನಾಲ್ಕುಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ ಇವತ್ತು ನಿಮ್ಮ ಸರಕಾರದ ಧೋರಣೆಗಳು ಏನೇ ಇರಲಿ, ನಿಮ್ಮ ಅಭಿಪ್ರಾಯಗಳು ಏನೇ ಇರಲಿ, ಯಾವ ಮಂತ್ರಿಯ ಅಧೀನಕ್ಕೆ ಅದು ಹೋದರೂ, ನನಗೆ ಅದರ ಬಗ್ಗೆ ಹೆಚ್ಚು ಆಸಕ್ತಿ ಇಲ್ಲ. ಹ್ಯಾಂಡ್‌ಲೂಮಿಗೆ 3 ನೇ ಪಂಚವಾರ್ಷಿಕ ಯೋಜನೆಯಲ್ಲಿ 210 ಲಕ್ಷ ರೂಪಾಯಿ ಖರ್ಚು ಮಾಡಬೇಕೆಂದಿರುವ ಹಣ ಏನಿದೆ, ಆ ಹಣ ಸರಿಯಾದ ರೀತಿಯಲ್ಲಿ, ನೇರವಾಗಿ ನೇಕಾರನಿಗೆ ತಲುಪುತ್ತಿದೆಯೋ, ಅದರ ಪ್ರತಿಫಲ ಅವನಿಗೆ ದೊರೆಯುತ್ತಿದೆಯೋ ಇಲ್ಲವೆ ಎಂಬುದರ ಬಗ್ಗೆ ಸರಕಾರದ ಆಡಳಿತ ವಿಚಕ್ಷಣೆಯಿಂದ ಇಲ್ಲದೆ ಹೋದರೆ, ಏನೂ ಉಪಯೋಗವಿಲ್ಲ. ಎಲ್ಲ ಮಂತ್ರಿಗಳು ದೊಡ್ಡ ಭಾಷಣ ಮಾಡಲು ಹೋಗುತ್ತಾರೆ ಆಡಳಿತ ವರ್ಗದವರೊಂದಿಗೆ ಫೋಟೋ ತೆಗೆಸಿಕೊಳ್ಳುತ್ತಾರೆ, ಅವರ ಫೋಟೋ ಅನಾವರಣ ಮಾಡುತ್ತಾರೆ. ನಾನು ಪಾರ್ಟಿ ಪಕ್ಷದ ದೃಷ್ಟಿಯಿಂದ ಹೇಳುತ್ತಿಲ್ಲ. ಸರಕಾರದಲ್ಲಿ ಏನಾದರೂ ಘನತೆ ಗೌರವಗಳು ಉಳಿಯಬೇಕಾದರೆ, ಮಂತ್ರಿಮಂಡಲದ ಪ್ರತಿಯೊಬ್ಬ ಸದಸ್ಯರಿಗೂ ಘನತೆ ಗೌರವವನ್ನು ಎತ್ತಿಹಿಡಿಯಬೇಕೆಂಬ ಆಕಾಂಕ್ಷೆ ಇದ್ದರೆ, ಇಲ್ಲಿ ಸದಸ್ಯರು ಹೇಳುವುದರ ಬಗ್ಗೆ ಗೌರವಕೊಡಬೇಕು. ನೀವು ಹೇಳುವುದು ಹೇಳಿಕೊಂಡು ಹೋಗಿ, ನಾವು ಮಾಡುವುದು ಮಾಡಿಕೊಂಡು ಹೋಗುತ್ತೇವೆ ಎಂಬ ಮನೋಭಾವವನ್ನು ಪ್ರಜಾಪ್ರಭುತ್ವದಲ್ಲಿ ಇಟ್ಟುಕೊಳ್ಳದೆ ನಿಮ್ಮ ದೃಷ್ಟಿಕೋನವನ್ನು ಪ್ರಜಾಭಿಪ್ರಾಯಕ್ಕೆ ಅನುಗುಣವಾಗಿ ಬದಲಾಯಿಸಿಕೊಂಡು ಹೋಗಬೇಕು. ಹಾಗೆ ಸತ್‌ಸಂಪ್ರದಾಯಗಳನ್ನು ಹಾಕಿಕೊಂಡು ನೀವು ಹೋಗುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ.

ಸದಸ್ಯರು ಏನಾದರೂ ಅಂಕಿ ಅಂಶ ತಂದು ಇಡುವುದಾದರೆ ಅದನ್ನು ಪರಿಶೀಲನೆ ಮಾಡದಿದ್ದರೆ ನಮಗೂ ಗೌರವ ಬರುವುದಿಲ್ಲ ಮತ್ತು ತಮಗೂ ಮನ್ನಣೆ ಸಿಕ್ಕುವುದಿಲ್ಲ. ಬಡ್ಜೆಟ್ ಮೇಲೆ ಭಾಷಣ ಮಾಡತಕ್ಕ ಕಾಲದಲ್ಲಿ ತಮಗೆ ಸಂಬಂಧಪಟ್ಟಂತೆ ಒಂದು ಆರೋಪಣೆಯ ವಿಷಯದಲ್ಲಿ ರುಜು ಹಾ॰

ತಕ್ಕ ಒಂದು ಪಟ್ಟಿಯನ್ನು ತಮಗೆ ಕೊಟ್ಟಿದ್ದೇನೆ. ಅದರ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ತಿಳಿಸುತ್ತೇನೆ. 2,000 ಪವರ್ ಲೂಮ್ಸ್ ಹಂಚತಕ್ಕ ಬಗ್ಗೆ 840 ಪವರ್ ಲೂಮ್ಸ್ ಮಾತ್ರ ಕಾರ್ಯರೂಪಕ್ಕೆ ತರಲು ವ್ಯವಸ್ಥೆ ಮಾಡಿದ್ದೇವೆ ಎಂದು ತಮ್ಮ ಬಡ್ಜೆಟ್ ಭಾಷಣದಲ್ಲಿ ಹೇಳಿದ್ದೀರಿ. ಹಾಗಾದರೆ ಇನ್ನು ಉಳಿದ 1,200 ಪವರ್ ಲೂಮ್‌ಗಳ ಸ್ಥಿತಿಗತಿ ಏನು ಎಂದು ತಮ್ಮನ್ನು ಪ್ರಶ್ನೆ ಮಾಡುತ್ತೇನೆ. ಈಗ ಸಪ್ಲೈ ಮಾಡಿರತಕ್ಕ ಮೆಟೀರಿಯಲ್ ಎಲ್ಲಾ ಉಪಯೋಗಕ್ಕೆ ಬರದಂತಹ ಪರಿಸ್ಥಿತಿಯಲ್ಲಿ ಇದ್ದು ಅಂತಹ ಪವರ್ ಲೂಮ್ಸ್‌ಗೆ ಹಣವನ್ನು ಕೊಟ್ಟಿದ್ದೀರಿ. ಆ ರೀತಿ ಕೊಟ್ಟಿರತಕ್ಕ ಸಹಕಾರ ಸಂಘಗಳಿಂದ ಖಂಡಿತವಾಗಿಯೂ ಹಣವನ್ನು ವಾಪಸು ಪಡೆಯುವುದಕ್ಕೆ ಆಗುವುದಿಲ್ಲ. ನನ್ನ ತಾಲ್ಲೂಕಿನಲ್ಲಿ ಕೊಟ್ಟಿರತಕ್ಕ ಹಣ ವಾಪಸು ಬರುವುದಿಲ್ಲ ಎಂದು ನಾನು ಖಂಡಿತವಾಗಿಯೂ ಹೇಳಬಲ್ಲೆ, ಏಕೆಂದರೆ ಅವರು ಓಚರ್ ಕೂಡ ಕೊಟ್ಟಿಲ್ಲ. ಈ ರೀತಿ ಬಡ ಬೋರೇಗೌಡನ ದುಡ್ಡು ಯಾವುದೋ ರೀತಿಯಲ್ಲಿ ಅನ್ಯಾಯವಾಗಿ ವ್ಯಯ ಮಾಡಬೇಕೆಂದು ಇಂತಹ ಯೋಜನೆಯನ್ನು ಹಾಕುವುದರಿಂದ ಖಂಡಿತ ಫಲ ದೊರೆಯುವುದಿಲ್ಲ, ಸಾರ್ಥಕವಾಗಿಲ್ಲ. ಆದ್ದರಿಂದ ಇದಕ್ಕೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕು, ಇಲ್ಲದೆ ಇದ್ದರೆ ಇದರಿಂದ ಎಲ್ಲರಿಗೂ ಅವಮಾನವಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಇನ್ನು ರೂರಲ್ ಇಂಡಸ್ಟ್ರೀಸ್ ವಿಷಯದಲ್ಲಿ ಹೇಳುವುದಾದರೆ ಟ್ರೈನಿಂಗ್ ಸೆಂಟರ್ಸ್‌ನ್ನು ಮಾಡಿದ್ದೀರಿ. ಹಿಂದೆ ಟ್ರೈನಿಂಗ್ ಸೆಂಟರ್ಸ್‌ನ್ನು ಇಟ್ಟಿದ್ದೀರಿ. ಅಲ್ಲಿ ಹೊಲಿಗೆ ಮಾಡಿರತಕ್ಕ ಬಟ್ಟೆಗಳು 40–50 ಸಾವಿರ ರೂಪಾಯಿಗಳವರೆಗೂ ಆಗುತ್ತದೆ, ಅವೆಲ್ಲಾ ನಾಸಿ ಹಿಡಿಯುತ್ತಾ ಇವೆ. ಅವನ್ನು ಮಾರಾಟ ಮಾಡಿದರೆ ಬೇಕಾದಷ್ಟು ಹಣ ಬರುತ್ತದೆ. ಅವುಗಳ ಮಾರಾಟಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ? ಈ ದಿವಸ ಅದರ ಬಗ್ಗೆ ಸರಕಾರದ ಗಮನ ಏಕೆ ಹರಿದಿಲ್ಲ ಎಂದು ಕೇಳುತ್ತೇನೆ. ಆದಷ್ಟು ಜಾಗ್ರತೆ ಇದಕ್ಕೆ ವ್ಯವಸ್ಥೆ ಮಾಡಬೇಕು, ಸರಕಾರದ ಹಣ ಇಷ್ಟು ಸುಲಭವಾದ ರೀತಿಯಲ್ಲಿ ನಷ್ಟವಾಗುವುದಕ್ಕೆ ಅವಕಾಶ ಕೊಡಬಾರದು, ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಸಲಹೆ ಕೊಟ್ಟು 50 ಸಾವಿರ ರೂಪಾಯಿ ಬೆಲೆ ಬಾಳತಕ್ಕ ಆ ಬಟ್ಟೆಗಳನ್ನು ಮಾರಾಟ ಮಾಡಿ ಅದರಿಂದ ಬರತಕ್ಕ ಹಣವನ್ನು ಸರಕಾರದ ಬೊಕ್ಕಸಕ್ಕೆ ಪಡೆಯಬೇಕೆಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಇನ್ನು ಕಚ್ಚಾ ಸಾಮಾನುಗಳ ಹಂಚುವಿಕೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಸರಕಾರದವರು ವಿಚಕ್ಷಣೆಯಿಂದ ಡಿಸ್ಟ್ರಿಬ್ಯೂಷನ್ ಕಮಿಟಿಯನ್ನೇನೋ ನೇಮಕ ಮಾಡಿದ್ದಾರೆ. ಬಹುಶಃ ಇಲ್ಲಿರತಕ್ಕ 208 ಸದಸ್ಯರಿಗೂ ಕೂಡ ಅನಾನಿಮಸ್ ಪೆಟಿಷನ್ ಪ್ರಿಂಟ್ ಮಾಡಿ ಹಂಚಿರುವುದು ಮಾನ್ಯ ಸದಸ್ಯರಿಗೆಲ್ಲರಿಗೂ ಗೊತ್ತಿರಬಹುದು. ಆ ವಿಷಯ ನಾನು ಪ್ರಸ್ತಾಪ ಮಾಡುವುದಿಲ್ಲ. ಕಚ್ಚಾ ಸಾಮಾನುಗಳನ್ನು ಏನು ಹಂಚಿಕೆ ಮಾಡಿದ್ದೀರಿ ಅವು ನಿಜವಾಗಿಯೂ ಕೆಲಸಗಾರನಿಗೇ ಸೇರುವ ಬಗ್ಗೆ ಸರಕಾರದ ಧೋರಣೆ ಏನಿದೆ ಅದನ್ನು ಬದಲಾಯಿಸಿ ಎಂದು ನಾನು ಹೇಳಬಯಸುತ್ತೇನೆ. ಏಕೆಂದರೆ ಸಹಕಾರ ಸಂಘಗಳಿಗೆ ಕೊಡತಕ್ಕ ಕಾಲದಲ್ಲಿ ಆ ಕಚ್ಚಾಮಾಲು ಕೆಲಸಗಾರನ ಕೈಗೆ ಸೇರುತ್ತದೆಯೋ ಇಲ್ಲವೋ ಎಂಬುದನ್ನು ತಾವು ವಿಚಾರ ಮಾಡಿ ನೋಡಬೇಕು. ಯಾವನೋ ಒಬ್ಬ ಹೊಲ ಉಳುವವನು, ದನ ಕಾಯುವವನು ಇರುತ್ತಾನೆ ಅವನ ಹೆಸರಿನಲ್ಲಿ ರಾ ಮೆಟೀರಿಯಲ್ಸ್‌ನ್ನು ಅವರು ಡಿಸ್ಟ್ರಿಬ್ಯೂಟ್ ಮಾಡುವುದಾದರೆ, ಇದು ಸರಕಾರದ ಧೋರಣೆಯೋ ಎಂದು ನಾನು ಕೇಳಬೇಕಾಗುತ್ತದೆ. ಸಾಮಾನ್ಯವಾಗಿ ಅಧಿಕಾರಿಗಳ ಮೇಲೆ ಆರೋಪಣೆ ಮಾಡತಕ್ಕ ಸನ್ನಿವೇಶ ಇದೆ, ಇವತ್ತಿನ ದಿವಸ ಸಹಕಾರ ಸಂಘಗಳ ಅಧ್ಯಕ್ಷರು ಮತ್ತು ಅದಕ್ಕೆ ಸಂಬಂಧಪಟ್ಟ ಕೆಲವು ಅಧಿಕಾರಿಗಳು ಸೇರಿಕೊಂಡು ಈ ರೀತಿಯ ಕೆಲಸ ಕಾರ್ಯಗಳನ್ನು ಮಾಡತಕ್ಕ ಸನ್ನಿವೇಶ ಉಂಟಾದರೆ ನಿಜವಾಗಿಯೂ ಅಧಿಕಾರಿಗಳಿಂದ ಯಾವ ಕೆಲಸ ಸುಗಮವಾಗಿ ನೆರವೇರಬೇಕೆಂಬ ಆಕಾಂಕ್ಷೆ ಜನಗಳಲ್ಲಿ ಇದೆ—ಕಚ್ಚಾ ಸಾಮಾನುಗಳನ್ನು ಹಂಚಬೇಕೆಂಬ ಉದ್ದೇಶ ಇದೆ—ಅದು ಸಫಲವಾಗುವುದಿಲ್ಲ. ಹಾಗಾದ ಪಕ್ಷದಲ್ಲಿ ತಮ್ಮ ದಕ್ಷತೆ ಮತ್ತು ತಮ್ಮ ಆಡಳಿತದಲ್ಲಿ ಜನಗಳಿಗೆ ನೆಮ್ಮದಿ ದೊರೆಯುತ್ತದೆ ಎಂಬ ಭಾವನೆ ಬರುತ್ತದೆಯೇ ಎಂಬುದನ್ನು ಪ್ರಶ್ನೆ ಮಾಡುತ್ತೇನೆ. ಆದ್ದರಿಂದ ಕಚ್ಚಾಮಾಲು ಹಂಚಿಕೆಯಾದದ್ದು ಕೆಲಸಗಾರನ ಕೈಗೇ ಹೋಗಬೇಕು ಎಂದು ಹೇಳುತ್ತೇನೆ. ಈಗ ಆ ರೀತಿ ಆಗುತ್ತಾ ಇಲ್ಲದೇ ಇರುವುದಕ್ಕೆ ನಾನು ಹೇಳುವುದಾದರೆ ರಾಜಕೀಯ ಮುಖಂಡರೇ ಕಾರಣ. ಏಕೆಂದರೆ ಅವರ ಆರ್ಥಿಕ ಪರಿಸ್ಥಿತಿಯು ಮಟ್ಟ ಕೆಟ್ಟುಹೋಗಿದೆ. ರಾಜಕೀಯ ಎಂದರೆ ದುಡ್ಡು ಮಾಡತಕ್ಕ ಮಾರ್ಗಕ್ಕೆ ಕೈ ಹಾಕುವುದು ಎಂದರೆ ಅದಕ್ಕಿಂತಲೂ ಹೇಯವಾದ ಕೃತ್ಯ ಇನ್ನೊಂದು ಇಲ್ಲ ಎಂದು ಹೇಳುತ್ತೇನೆ. ಪ್ರಾಮಾಣಿಕರಾದ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳನ್ನು ನೇಮಕ ಮಾಡಿ ಈ ವ್ಯವಸ್ಥೆಯನ್ನು ಪುನರ್‌ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ತಮಗೆ ತಿಳಿಸಲು ಇಚ್ಛಿಸುತ್ತೇನೆ.

ಇನ್ನು ಹಾಸನಕ್ಕೆ ಬಂದಾಗ, ಎಲ್ಲಾ ಕಾಂಗ್ರೆಸ್ ಪಾರ್ಟಿ ಸದಸ್ಯರು ಮತ್ತು ಸಾರ್ವಜನಿಕ ಮುಖಂಡರೂ ಹಾಸನ ಜಿಲ್ಲೆಯಲ್ಲಿ ಆಗಬೇಕಾದ ಕೆಲವು ಕೈಗಾರಿಕೆಗಳ ಬಗ್ಗೆ ಪ್ರಸ್ತಾಪ ಮಾಡಿ

(ಶ್ರೀ ಹೆಚ್. ಡಿ. ದೇವೇಗೌಡ)

ದ್ದಾರೆ. ಒಂದನೆಯದಾಗಿ ಹಾಸನ ಇಂಪ್ಲಿಮೆಂಟ್ಸ್ ಫ್ಯಾಕ್ಟರಿಯಲ್ಲಿ ಸಣ್ಣ ಟ್ರ್ಯಾಕ್ಟರುಗಳನ್ನು ತಯಾರು ಮಾಡುವ ಬಗ್ಗೆ ತಾವು ಯಾವ ಒಂದು ಯೋಜನೆಯನ್ನು ಹಾಕಿದ್ದೀರಿ ಅದನ್ನು ಆದಷ್ಟು ಬೇಗ ಕಾರ್ಯರೂಪಕ್ಕೆ ತರಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಏಕೆಂದರೆ ಹಾಸನ ಜಿಲ್ಲೆಯಲ್ಲಿ 8 ಲಕ್ಷ ಜನತೆ ಇವತ್ತು ಬರೀ ವ್ಯವಸಾಯ ಉದ್ಯಮದಿಂದ ತಮ್ಮ ಜೀವನವನ್ನು ಸಾಗಿಸುತ್ತಾ ಇದ್ದಾರೆ, ಅಂತಹ ರೈತ ವರ್ಗದವರಿಗೆ ಹೆಚ್ಚಿನ ಸೌಲಭ್ಯ ದೊರೆಯಬೇಕೆಂದರೆ ಅಲ್ಲಿರತಕ್ಕ ಫಾಕ್ಟರಿಯಲ್ಲಿ ಸಣ್ಣ ಟ್ರ್ಯಾಕ್ಟರುಗಳನ್ನು ತಯಾರು ಮಾಡತಕ್ಕ ಯೋಜನೆಯನ್ನು ಕಾರ್ಯಗತ ಮಾಡಬೇಕು. ಅಲ್ಲಿ ಕಮರ್ಷಿಯಲ್ ಕ್ರಾಪ್ ಆಲೂಗಡ್ಡೆಯನ್ನು ಬೆಳೆಯುತ್ತಾರೆ, ಅವರಿಗೆ ಅದಕ್ಕೆ ಸರಿಯಾದ ಮಾರ್ಕೆಟ್ಟನ್ನು ದೊರಕಿಸಿಕೊಳ್ಳುವುದಕ್ಕೆ ಕಷ್ಟವಾಗಿದೆ, ಒಂದು ಸಲ ಬೆಳೆ ಬಂದಾಗ ಮಾರ್ಕೆಟ್‌ನಲ್ಲಿ ಸರಿಯಾದ ಬೆಲೆ ಬರದಿದ್ದರೆ ಬಹಳ ನಷ್ಟವಾಗುತ್ತದೆ. ಒಂದು ಮಣಕ್ಕೆ ಒಂದೂಕಾಲು ರೂಪಾಯಿ ನಂತೆ ಮಾರಿರುವ ಸಂದರ್ಭವೂ ಕೂಡ ಇದೆ. ಆದ್ದರಿಂದ ಅಲ್ಲಿ ಒಂದು ಡೀಹೈಡ್ರೇಷನ್ ಪ್ಲಾಂಟ್ ಹಾಕುವುದು ಸೂಕ್ತ ಎಂದು ಹೇಳಿ ಟೆಕ್ನಿಕಲ್ ಅಭಿಪ್ರಾಯ ಕೊಟ್ಟಿದ್ದಾರೆ. ಹಿಂದೆ ಒಂದು ಸಲ ಕೋಲ್ಡ್ ಸ್ಟೋರೇಜ್ ಪ್ಲಾಂಟ್ ಹಾಕಬೇಕೆಂದು ಹೇಳಿದಾಗ ಡೀಹೈಡ್ರೇಷನ್ ಪ್ಲಾಂಟ್ ಹಾಕುತ್ತೇವೆ ಎಂದು ಹೇಳಿ ತಾವು ತಿಳಿಸಿದಿರಿ ಅದನ್ನು ಆದಷ್ಟು ಜಾಗ್ರತೆ ಕಾರ್ಯರೂಪಕ್ಕೆ ತರುವುದರ ಬಗ್ಗೆ ಮನಸ್ಸು ಮಾಡಬೇಕೆಂದು ಹಾಸನ ಜಿಲ್ಲೆಯ ಪರವಾಗಿ ನಾನು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ಹಾಸನ ಜಿಲ್ಲೆಯಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ತೆಗೆಯಬೇಕೆಂದು ಹೇಳುತ್ತೇನೆ. ಅಲ್ಲಿ ಬೆಳೆಯತಕ್ಕ ಕಬ್ಬಿನ ಪ್ರಮಾಣ ದೊಡ್ಡ ಪ್ರಮಾಣದಲ್ಲಿರುವುದರಿಂದ ಅಲ್ಲಿ ಅಂತಹ ಒಂದು ಫ್ಯಾಕ್ಟರಿಯನ್ನು ಹಾಕುವುದಕ್ಕೆ ಅವಕಾಶವಿದೆ, ಅದನ್ನು ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ದಯಮಾಡಿ ಸೇರಿಸಿಕೊಳ್ಳಬೇಕೆಂದು ಹೇಳುತ್ತೇನೆ, ಏಕೆಂದರೆ ಹಾಸನ ಜಿಲ್ಲೆಯ ಎಲ್ಲಾ ಮುಖಂಡರೂ ಸರ್ವತೋಮುಖವಾಗಿ ಯಾವ ಭಿನ್ನಾಭಿಪ್ರಾಯವೂ ಇಲ್ಲದೆ ಅದರ ಬಗ್ಗೆ ತಮ್ಮಲ್ಲಿ ಅರಿಕೆ ಮಾಡಿಕೊಂಡಿದ್ದಾರೆ. ಎಲ್ಲರ ಮೇಲೂ ಕೂಡ ತಮ್ಮ ಪ್ರೇಮ, ವಿಶ್ವಾಸ, ವಾತ್ಸಲ್ಯ ಇದೆ ಎಂಬುದು ನಮಗೆ ಗೊತ್ತಿದೆ. ಆ ಕಡೆಗೆ ತಮ್ಮ ಮನಸ್ಸನ್ನು ಹರಿಸಬೇಕೆಂದು ಹೇಳಿ ಇನ್ನು ಒಂದೇ ಒಂದು ಮಾತನ್ನು ಆಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಮೈನ್ಸ್‌ಗೆ ಲ್ಯಾಂಡನ್ನು ಲೀಸ್‌ಔಟ್ ಮಾಡುತ್ತಾ ಇದ್ದೀರಿ. ಆದರೆ ಅಲ್ಲಿ ಅವರು ಅದಿರನ್ನು ಕೂಡ ತೆಗೆದಿಲ್ಲ, ಅದನ್ನು ಇತರರಿಗೆ ವ್ಯವಸಾಯಕ್ಕೂ ಕೂಡ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಯಾವ ಉದ್ದೇಶಕ್ಕೆ ಕೊಟ್ಟಿದ್ದಾರೋ ಆ ಉದ್ದೇಶಕ್ಕೆ ಉಪಯೋಗ ಮಾಡಿಕೊಳ್ಳದೆ ಇದ್ದಮೇಲೆ ಅಂತಹ ಪರಿಸ್ಥಿತಿ ಎಲ್ಲಿ ಇದೆ ಎಂಬುದನ್ನು ಸರಕಾರದವರು ತಿಳಿದುಕೊಂಡು ಆ ರೀತಿ ಲೀಸ್ ಔಟ್ ಮಾಡಿರತಕ್ಕ ಜಮೀನನ್ನು ಪುನಃ ವಾಪಸು ತೆಗೆದುಕೊಂಡು ವ್ಯವಸಾಯಕ್ಕೆ ಅನುಕೂಲವಾಗುವ ರೀತಿಯಲ್ಲಿ ವ್ಯವಸಾಯಗಾರರಿಗೆ ಹಂಚುವ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಮಾದಯ್ಯಗೌಡ (ರಾಮನಗರ).—ಮಾನ್ಯ ಸಭಾಧ್ಯಕ್ಷಣಿಯವರೇ, ನಾನು ಮಾತನಾಡುವುದಕ್ಕೆ ಮುಂಚೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮೊದಲು ತಮ್ಮನ್ನು ವಂದಿಸುತ್ತೇನೆ. ನಮ್ಮ ಮುಂದಿರತಕ್ಕ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಹಾಗೆ ಮಾಡುತ್ತಾ ಕೈಗಾರಿಕಾ ಪ್ರಗತಿ ಎಷ್ಟು ಮಟ್ಟಿಗೆ ಆಗುತ್ತಿದೆ ಎಂಬ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕೆಂದು ಇಷ್ಟಪಡುತ್ತೇನೆ. ಒಂದಾನೊಂದು ಕಾಲದಲ್ಲಿ ಮೈಸೂರುದೇಶ ಭಾರತದಲ್ಲೆಲ್ಲಾ ಕೈಗಾರಿಕೆಯಲ್ಲಿ ಮುಂದುವರೆದ ದೇಶವೆಂದು ಕೀರ್ತಿಪಡೆದಿತ್ತು. ಈಚೆಗೆ ನಮ್ಮ ಅಕ್ಕಪಕ್ಕದ ದೇಶಗಳಲ್ಲಿ ನಡೆಯುವ ಪ್ರಗತಿಯನ್ನು ನೋಡಿದರೆ ನಾವು ಹಿಂದೆ ಬಿದ್ದಿದ್ದೇವೋ ಏನೋ, ಎಷ್ಟು ಕೆಲಸ ಮಾಡಬೇಕೋ ಅಷ್ಟು ಮಾಡುತ್ತಿಲ್ಲವೇನೋ ಎಂದು ಕೊಂಚ ಸಂಕೋಚವಾಗುವ ರೀತಿ ಇದೆ. ಆದರೆ ಕ್ರಮೇಣ ಚೇತರಿಸಿಕೊಳ್ಳುತ್ತಿದೆ.

ಹೋದಸಲ ಇದೇ ಬೇಡಿಕೆಯಮೇಲೆ ಇದೇ ಮಾನ್ಯ ಸಭೆಯಲ್ಲಿ ಅನೇಕ ಸದಸ್ಯರು ಮಾತನಾಡಿದ್ದನ್ನು ನಮ್ಮ ಮಂತ್ರಿಗಳು ನಾಲ್ಕು ಭಾಗವಾಗಿ ವಿಂಗಡಿಸಿ ಉತ್ತರ ಕೊಟ್ಟಿದ್ದಾರೆ. ಹಾಗೆ ಕೊಡುವಾಗ ಎಷ್ಟರಮಟ್ಟಿಗೆ ನಮ್ಮ ಮೈಸೂರುದೇಶದಲ್ಲಿ ಕೈಗಾರಿಕಾ ಪ್ರಗತಿಯಾಗುತ್ತಿದೆ ಎಂಬ ವಿಚಾರವನ್ನು ಹೇಳುತ್ತಾ ಇಲ್ಲೇನು ಕುಂದು ಕೊರತೆಯಿದೆ, ಏಕೆ ನಾವು ನಿರೀಕ್ಷಿಸಿದಷ್ಟು ಮುಂದುವರೆಯುತ್ತಿಲ್ಲ ಎಂದು ಅವರು ಪ್ರಸ್ತಾಪಮಾಡಿದರು. ಆ ಸಂದರ್ಭದಲ್ಲಿ ಹೇಳುತ್ತಾ ನಮಗೆ ಸಾಕಾದಷ್ಟು ವಿದ್ಯುಚ್ಛಕ್ತಿ ದೊರೆಯುತ್ತಿಲ್ಲ ಎಂದು ಕೂಡ ಹೇಳಿದರು. ಆದರೆ ಇನ್ನು ವಿದ್ಯುಚ್ಛಕ್ತಿ ಕೊರತೆ ಉಂಟಾಗಬಾರದು. ಯಥೇಚ್ಛವಾಗಿ ಅದು ದೊರೆಯುವ ಸಂದರ್ಭ ಬಂದಾಗ ಈ ಸಂಬಂಧದಲ್ಲಿ ಯಾವ

ವಿಧವಾದ ಯೋಜನೆ ಮಾಡಬೇಕೋ ಅದನ್ನು ನಾವು ಮಾಡಿ ಯಾವ ಯಾವ ಕೈಗಾರಿಕೆಗಳನ್ನು ಏರ್ಪಾಡು ಮಾಡಿಕೊಳ್ಳಬೇಕೋ ಅವನ್ನು ಮಾಡಿಕೊಳ್ಳಬೇಕು. ಅದಕ್ಕೆ ತಕ್ಕ ಪ್ಲಾನ್ ಮಾಡುತ್ತಾರೆಂಬ ಭರವಸೆ ನನಗಿದೆ. ಹಾಗೆಯೇ ಹೇಳುತ್ತಾ ಮಂತ್ರಿಗಳು ಸಾಕಾದಷ್ಟು ನಮಗೆ ಕಚ್ಚಾಮಾಲು ಸಿಕ್ಕುತ್ತಿಲ್ಲ ಎಂದು ಹೇಳಿದರು. ಆ ವಿಚಾರ ನಾನು ಒಪ್ಪುವುದಿಲ್ಲ. ನಮ್ಮ ದೇಶದಲ್ಲಿ ಅದಕ್ಕೆ ಯಾವ ವಿಧವಾದ ಕೊರತೆಯೂ ಇಲ್ಲ. ಬೇಕಾದಷ್ಟು ಖನಿಜಸಂಪತ್ತು ನಮ್ಮ ದೇಶದಲ್ಲಿದೆ ಎಂದು ಖಚಿತವಾಗಿ ಕಂಡುಬರುತ್ತದೆ. ಆದರೆ ಸರ್ವೆಮಾಡಿ ಯಾವ ರೀತಿಯ ಖನಿಜ ಎಲ್ಲಿ ಸಿಕ್ಕುತ್ತದೆ ಯಾವ ರೀತಿ ಅದನ್ನು ಉಪಯೋಗಿಸಬೇಕು ಎಂಬುದನ್ನು ತಿಳಿಯಲು ಇನ್ನೂ ತಕ್ಕ ಕ್ರಮ ಕೈಕೊಳ್ಳಲಿಲ್ಲವಲ್ಲಾ ಎಂದು ವ್ಯಸನಪಡಬೇಕಾಗಿದೆ. ಕಚ್ಚಾಮಾಲು ಎಂದು ಹೇಳುವಾಗ ನಮ್ಮ ದೇಶದಲ್ಲಿ ಬೇಕಾದ ಕೋಕ್, ಕೋಲ್ ಸಿಕ್ಕದಿರುವುದು ವಾಸ್ತವ. ವಿದ್ಯುಚ್ಛಕ್ತಿ ಹೇಗೆ ಬೇಕೋ ಹಾಗೆ ಅದು ಬೇಕು. ಅದನ್ನು ನೆರೆ ದೇಶಗಳಿಂದ ಯಾವ ರೀತಿ ಪಡೆಯಬೇಕು ಎಂಬುದರ ಬಗ್ಗೆ ಹೆಚ್ಚು ಮುತವರ್ಜಿಯನ್ನು ವಹಿಸಬೇಕಾಗುತ್ತದೆ. ಮತ್ತೊಂದು ವಿಚಾರ ಆಗ ಪ್ರಸ್ತಾಪಮಾಡಿದರು. ಕೈಗಾರಿಕೆ ಸ್ಥಾಪನೆ ಮಾಡಲು ಕೇಂದ್ರಸರ್ಕಾರ ಲೈಸೆನ್ಸ್ ಕೊಡಬೇಕು. ಹೊಸದಾಗಿ ಒಂದು ಕಾನೂನಾಗಿದೆ; ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಆಂಡ್ ರೆಗ್ಯುಲೇಷನ್ ಆಕ್ಟ್ ಆಗಿದೆ. ಅದನ್ನನುಸರಿಸಿ ಲೈಸೆನ್ಸ್ ಕೊಡುತ್ತಾರೆ. ಹಾಗೆ ಕೊಡುವಾಗ ಸ್ವಲ್ಪ ಬಿಕ್ಕಟ್ಟು ಬರುತ್ತದೆ. ಅದನ್ನು ಹೋಗಲಾಡಿಸಲು ಸರ್ಕಾರ ಯಾವ ರೀತಿ ಮಾಡಬೇಕೋ ಹಾಗೆ ಮಾಡಿ ಪಡೆಯಬೇಕು, ಅನೇಕ ಸಂದರ್ಭಗಳಲ್ಲಿ ಕೈಗಾರಿಕೆ ಪ್ರಾರಂಭಿಸಲು ಲೈಸೆನ್ಸ್ ಪಡೆಯಬೇಕಾಗುತ್ತದೆ. ಅದಕ್ಕೆ ಇರುವ ಕುಂದುಕೊರತೆ ಹೋಗಲಾಡಿಸುವುದಕ್ಕೆ ಮಂತ್ರಿಗಳೂ ಮತ್ತು ಸರ್ಕಾರದವರೂ ಪ್ರಯತ್ನಪಡುತ್ತಾರೆಂದು ನಂಬಿದ್ದೇನೆ.

ಹಾಗೆಯೇ ಬಂಡವಾಳ ವಿಚಾರದಲ್ಲಿ ಯಾರಾದರೂ ಖಾಸಾಗಿಯವರು ಕೈಗಾರಿಕೆ ಸ್ಥಾಪಿಸಲು ಮುಂದೆ ಬಂದರೆ ಬೇಕಾದ ಬಂಡವಾಳ ಸರ್ಕಾರ ಕೊಡಬೇಕು; ಸರ್ಕಾರದಿಂದ ಅಥವ ಸಾಲದ ಮೂಲಕ ಬೇಕಾದಷ್ಟು ಬಂಡವಾಳ ಒದಗಿಸಬೇಕು. ಈಗ ಸಂಡೂರು ಮತ್ತು ಬಳ್ಳಾರಿ ಕಡೆ ಕಬ್ಬಿಣದ ಅದುರು ಬೇಕಾದಷ್ಟಿದೆ, ಹೆಚ್ಚು ಕೈಗಾರಿಕೆ ಸ್ಥಾಪಿಸಲು ಅವಕಾಶವಿದೆ, ಅಗತ್ಯವಿದೆ. ಅದಕ್ಕೆ ನೂರಾರು ಕೋಟಿ ರೂಪಾಯಿಗಳು ಬೇಕೆಂದು ಹೇಳುತ್ತಾರೆ. ಅದನ್ನೆಲ್ಲಾ ಕೇಂದ್ರ ಸರ್ಕಾರದಿಂದ ಒದಗಿಸಿ ಕೊಳ್ಳುವುದಕ್ಕೆ ಅಥವಾ ಬೇರೆ ರೀತಿ ಪಡೆಯಲು ಪ್ರಯತ್ನಪಡಬೇಕು. ಹಾಗೆ ಮಾಡುತ್ತಾರೆಂದು ನಂಬಿದ್ದೇನೆ. ಖಾಸಗಿ ಕೈಗಾರಿಕೆಗಳ ಸ್ಥಾಪನೆಗೆ ಯಾವ ರೀತಿ ಕ್ರಮ ತೆಗೆದು ಕೊಳ್ಳಬೇಕೋ ಆ ರೀತಿ ಮಾಡುವುದು ಅವಶ್ಯಕ. ಈಗ ಫೈನಾನ್ಷಿಯಲ್ ಕಾರ್ಪೊರೇಷನ್ ಮಾಡಿದ್ದಾರೆ. ಅಲ್ಲದೆ ಸರ್ಕಾರದವರು ನೇರವಾಗಿ ಕೆಲವು ಸಣ್ಣಪುಟ್ಟ ಕೈಗಾರಿಕೆಗಳಿಗೆ ಇಂಡಸ್ಟ್ರಿಯಲ್ ಏಡ್ ಎಂದು ಸಾಲ ಕೊಡುತ್ತಾರೆ. ಆದರೆ ಅದು ಸೂಕ್ತ ರೀತಿಯಲ್ಲಿ ಕೆಲಸಮಾಡುತ್ತಿಲ್ಲ; ಸರಿಯಾಗಿ ಮಾಡುವಂತೆ ಹೆಚ್ಚು ಗಮನ ಕೊಡಬೇಕಾದ್ದು ಅಗತ್ಯ. ಈ ನಾಲ್ಕೈದು ಅಡಚಣೆಗಳ ನಿವಾರಣೆಯಾದರೆ ಹೆಚ್ಚಿನ ಪ್ರಗತಿಯಾದೀತು. ಈಗ ಅನೇಕ ತೊಂದರೆಗಳು ನಿವಾರಣೆಯಾಗಿವೆ; ಆದುದರಿಂದ ಹೆಚ್ಚಿನ ರೀತಿಯ ಪ್ರಗತಿಯಾಗುತ್ತಿದೆ ಎಂದು ಭಾವಿಸಿದ್ದೇನೆ.

ನಮ್ಮ ಕೈಗಾರಿಕೆಗಳು ಲಾಭದಾಯಕವಾಗಿ ಕೆಲಸಮಾಡುತ್ತಿಲ್ಲ, ಎಷ್ಟು ಲಾಭ ಬರಬೇಕಾಗಿತ್ತೋ ಅಷ್ಟು ಬರುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಈಗ ಸರ್ಕಾರದವರೇ ನೇರವಾಗಿ ನಡೆಸುವ ಕೈಗಾರಿಕೆಗಳನ್ನು ನೋಡಿದರೆ ಇಚೀಚೆಗೆ ಹಿಂದೆ ನಷ್ಟದಲ್ಲಿದ್ದ ಕೆಲವು ಒಂದು ರೀತಿಯಲ್ಲಿ ಲಾಭ ಪಡೆಯುತ್ತಿವೆ. ಆದರೂ ಕೂಡ ನನ್ನಭಿಪ್ರಾಯದಲ್ಲಿ ಕೆಲವು ಕೈಗಾರಿಕೆಗಳು ತೋರಿಸುವ ಲಾಭ ಲಾಭವೇ ಅಲ್ಲ ಎಂದು ಕಾಣುತ್ತದೆ. ಎಷ್ಟು ಬಂಡವಾಳ ನಾವು ಹಾಕಿದ್ದೇವೆಯೋ ಆದಕ್ಕೆ ತಕ್ಕಷ್ಟು ದಾಮಾಷಾ ಪ್ರಕಾರ ಸರಿಯಾದ ಪರ್ಸೆಂಟೇಜ್ ಲಾಭ ಸಿಕ್ಕುತ್ತಿದೆಯೇ ಎಂದರೆ ಇಲ್ಲ. ಈಗ ವಿದ್ಯುಚ್ಛಕ್ತಿ ಕಾರ್ಖಾನೆಯನ್ನು ತೆಗೆದುಕೊಳ್ಳೋಣ. ಅದಕ್ಕೆ ಬಂಡವಾಳ ಬೇಕಾದಷ್ಟು ಹಾಕಿದೆ. ಅದರ ಮೇಲೆ ಒಂದು ಲಕ್ಷ ಲಾಭ ಬಂದರೆ ಅದನ್ನು ಲಾಭವೆಂದು ಪರಿಗಣಿಸುವುದಕ್ಕಾಗುವುದಿಲ್ಲ. ಹೀಗೆಯೇ ಇಂಡಸ್ಟ್ರಿಯಲ್ ವರ್ಕ್‌ಷಾಪ್ ಮುಂತಾದವು ಕೆಲವು ಲಾಭದಾಯಕವಾಗಿ ಕೆಲಸಮಾಡುತ್ತಿಲ್ಲ. ಚನ್ನಪಟ್ಟಣದ ಸ್ಪನ್ ಸಿಲ್ಕ್ ಮಿಲ್ಸ್‌ನಲ್ಲಿ ಲಾಭ ಬಂದರೂ ಅದು ಸಾಲದು ಎಂದು ನನಗಾದರೂ ಅನ್ನಿಸುತ್ತದೆ. ಅಲ್ಲಿ ಬರುವ ಲಾಭ ಬಂಡವಾಳಕ್ಕನುಗುಣವಾಗಿಲ್ಲ. ಅದಕ್ಕೆ ಕಾರಣ ಏದೆ. ಸರಿಯಾದ ಲೂಮ್ಸ್ ಇಲ್ಲ. ಮಾಡಬೇಕಾದ ಏರ್ಪಾಡು ಸರಿಯಾಗಿ ಮಾಡಿಲ್ಲ. ಆದುದರಿಂದ ಎಷ್ಟು ಉತ್ಪತ್ತಿ ಬರಬೇಕೋ ಅಷ್ಟು ಬರುತ್ತಿಲ್ಲ ಎಂಬ ಭಾವನೆ ಇದೆ. ಹೀಗೆ ಸರ್ಕಾರ ನೇರವಾಗಿ ನಡೆಸುವ ಕೈಗಾರಿಕೆ ಅಲ್ಲದೆ ಲಿಮಿಟೆಡ್ ಕಂಪೆನಿಗಳು, ಷೇರು ಹಾಕಿ ನಡೆಸುವ ಅನೇಕ ಕೈಗಾರಿಕೆಗಳು ಮುಂತಾದುವುಗಳಲ್ಲಿ ಎಷ್ಟು ಲಾಭ ಬರಬೇಕೋ ಅಷ್ಟು ಬರುತ್ತಿಲ್ಲ, ಕೆಲವು ಕೈಗಾರಿಕೆಗಳು ಉದಾಹರಣೆಗೆ ರೆಂಕೋ, ಸಕ್ಕರೆ ಕಾರ್ಖಾನೆ, ಲ್ಯಾಂಪ್‌ವರ್ಕ್ಸ್ ಮುಂತಾದುವು ಸಾಕಷ್ಟು ಲಾಭ ನೀಡುತ್ತಿವೆ. ಭದ್ರಾವತಿ ಕಾರ್ಖಾನೆ ಕೂಡ ಬಹಳ ಚೆನ್ನಾಗಿ ಕೆಲಸಮಾಡುತ್ತಿದೆ. ಆದರೆ ಕೆಲವು ಕಂಪನಿ

(ಶ್ರೀ ಮಾದಯ್ಯಗೌಡ)

ಗಳು ಉದಾಹರಣೆಗೆ ಲ್ಯಾಕ್ ಅಂಡ್ ಪೈಂಟ್ ವರ್ಕ್ಸ್, ಹಟ್ಟಿ ಚಿನ್ನದ ಗಣಿ ಮುಂತಾದುವು ಲಾಭ ದಾಯಕವಾಗಿ ಕೆಲಸಮಾಡುತ್ತಿಲ್ಲ. ಟ್ಯಾನಿಂಗ್ ಫ್ಯಾಕ್ಟರಿ ಬಹಳ ವರ್ಷಗಳಿಂದ ನಡೆಯುತ್ತಿದೆ. ಅಂಥ ಕೆಲವು ಕೈಗಾರಿಕೆಗಳಲ್ಲಿ ಲಾಭ ಬಾರದಿರುವುದಕ್ಕೆ ಕಾರಣವೇನೆಂದು ವಿಮರ್ಶೆ ಮಾಡಿ ಸರಿ ಯಾಗಿ ಕೆಲಸಮಾಡುವಂತೆ ಶಿಕ್ಷಣ ಕೊಡುವ ಸಾಮರ್ಥ್ಯ ಮಂತ್ರಿಗಳಿಗಿದೆ, ಅವರು ಅದಕ್ಕೆ ಗಮನ ಕೊಡಬೇಕು ಎಂದು ಸೂಚಿಸುತ್ತೇನೆ.

ಈಗ ಸರ್ಕಾರದವರೇ ನೇರವಾಗಿ ನಡೆಸುವ ಕೈಗಾರಿಕೆ, ಕಂಪೆನಿ ಮಾಡಿ ಬಂಡವಾಳ ಹಾಕಿ ನಡೆಸುವುದು, ಕೇಂದ್ರ ಸರ್ಕಾರ ನಡೆಸುವುದು ಇಂಥ ಕೈಗಾರಿಕೆಗಳಿವೆ. ಉದಾಹರಣೆಗೆ ಎಚ್. ಎ. ಎಲ್., ಎಚ್. ಎಂ. ಟಿ., ಐ. ಟಿ. ಎಲ್., ಬಿ. ಇ. ಎಲ್. ಮುಂತಾದ ಕೈಗಾರಿಕೆಗಳಿವೆ. ಅವು ಮೈಸೂರು ಸರ್ಕಾರದ ಆಡಳಿತದಲ್ಲಿಲ್ಲ, ನಮ್ಮ ದೇಶ ಅವುಗಳಿಗೆ ಬೇಕಾದ ವಿದ್ಯುಚ್ಛಕ್ತಿ, ನೀರು, ಭೂಮಿ ವಗೈರೆ ಸೌಕರ್ಯಗಳನ್ನು ಯಥೇಷ್ಟವಾಗಿ ಒದಗಿಸುತ್ತಿದೆ.

2-30 P. M.

ಆದರೂ ಸಹ ನಮ್ಮಲ್ಲಿ ನಮ್ಮ ದೇಶದ ಜನಗಳಿಗೆ ನಮ್ಮ ದೇಶದ ಕೂಲಿಗಾರರಿಗೆ ನಮ್ಮ ದೇಶದ ಅಧಿಕಾರಿಗಳಿಗೆ ಏನೊಂದು ಉತ್ತೇಜನ ಕೊಡಬೇಕೋ ಅದನ್ನು ಕೊಡುತ್ತಾ ಇದ್ದಾರೆ ಎನ್ನುವುದರಲ್ಲಿ ನನಗೇನೋ ಸಂಶಯವಿದೆ. ಈಗಲಾದರೂ ಇದನ್ನು ವಿಮರ್ಶೆ ಮಾಡಬೇಕಾದುದು ಅತ್ಯಾವಶ್ಯಕ. ಈ ವಿಚಾರದಲ್ಲಿ ಮೈಸೂರು ದೇಶದ ಪ್ರಜೆಗಳಿಗೆ ಬಹಳ ನಷ್ಟಗಳಾಗುತ್ತಿವೆ ಎನ್ನುವುದನ್ನ ಈ ಸಂದ ರ್ಭದಲ್ಲಿ ಮಾನ್ಯ ಮಂತ್ರಿಗಳು ಮನಗಾಣಬೇಕೆಂದು ಇಚ್ಛಿಸುತ್ತೇನೆ. ಅದೂ ಅಲ್ಲದೆ ಈ ಫ್ಯಾಕ್ಟರಿಗಳಲ್ಲಿ ಆಸಕ್ತಿ ಇರತಕ್ಕ ಅಧಿಕಾರಿಗಳೂ ಇದ್ದಾರೆ. ಅವರಿಗೆ ಯಾವ ಯಾವ ರೀತಿ ಉತ್ತೇಜನ ಕೊಡಬೇಕೋ ಅವುಗಳನ್ನೆಲ್ಲ ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮತ್ತೊಂದು ವಿಚಾರವನ್ನು ಹೋದ ಸಾರಿ ಮಾನ್ಯ ಮಂತ್ರಿಗಳು ಇಲ್ಲಿ ಉತ್ತರ ಕೊಟ್ಟಾಗ ಹೇಳಿದರು. ಕೈಗಾರಿಕೆ ಉದ್ಯಮಗಳಲ್ಲಿ ನೈಪುಣ್ಯ ಪಡೆದಿರತಕ್ಕವರನ್ನು ಇಲ್ಲಿ ಅಧಿಕಾರಿಗಳನ್ನಾಗಿ ಮಾಡ ಬೇಕು. ಆದರೆ ಈಗ I. A. S. officer ಗಳನ್ನು ಬೇರೆ ಇಲಾಖೆಯಲ್ಲಿ ಕೆಲಸಮಾಡಿದವರನ್ನು ಇಲ್ಲಿ ಕೆಲಸಮಾಡಬೇಕೆಂದು ನೇಮಿಸುವುದು ಸರಿಯೇ ಎಂದು ಹೇಳಿದರು. ನನಗಾದರೂ ಅನಿಸುವುದು ಕೈಗಾರಿಕೆಗಳಲ್ಲಿ ಮತ್ತೊಂದು ಇಲಾಖೆಯಿಂದ ಬಂದವರನ್ನು Administrative officer ಎಂದು ನೇಮಿಸಿದರೆ ಅವರಿಗೆ ಕೈಗಾರಿಕೆಗಳಲ್ಲಿ ನೇರವಾದ ಕೃತಜ್ಞತೆ ಇರುವುದಿಲ್ಲ. ಅವರ ಕೈಕೆಳಗೆ ಕೆಲಸ ಮಾಡತಕ್ಕ ತಜ್ಞ ಅಧಿಕಾರಿಗಳು ಯಾವ ರೀತಿ ಕೆಲಸ ಮಾಡುತ್ತಾರೆನ್ನುವುದು ಸರಿಯಾಗಿ ತಿಳಿಯುವು ದಿಲ್ಲ. ಈಗೇನೋ ಫೈಲ್‌ಗಳಲ್ಲಿ ಆರ್ಡರು ಮಾಡುತ್ತಾರೆ. ಆದರೂ ಅನೇಕ ಅಡ್ಮಿನಿಸ್ಟ್ರೇಷನ್ನಿನ ವಿಚಾರದಲ್ಲಿ—ಉದಾಹರಣೆಯಾಗಿ ಕಂಪನಿವಾದ ವಿಚಾರದಲ್ಲಿ ಕೈಹಾಕಬೇಕಾಗುತ್ತದೆ. ಅಧಿಕಾರಿ ಗಳಲ್ಲಿ ನೈಪುಣ್ಯತೆ ಪಡೆಯದೆ ಇರತಕ್ಕವರ ಕೈಯಲ್ಲಿ ಇಂತಹ ಕಂಪನಿ ಬಗ್ಗೆ ಆಡಳಿತ ನಡೆಸಬಹುದು ಎಂದರೆ ಕಂಪನಿಗಳನ್ನು ಹೇಗೆ ನಡೆಸಬೇಕು ಇಂತಹ ಸಂದರ್ಭದಲ್ಲಿ ಕೈಗಾರಿಕಾ ಕ್ಷೇತ್ರದಲ್ಲಿ ರೂಲ್ಸ್ ಗಳನ್ನು ಸರಿಯಾಗಿಮಾಡಿ ಸರಿಯಾದಂತಹ ಅಧಿಕಾರಿಗಳನ್ನು ನೇಮಕಮಾಡಲು ಏರ್ಪಾಡುಮಾಡ ಬೇಕು. ಆದರೆ ಸರ್ಕಾರದವರೇನೋ ಈಗಿರುವಂತಹ ಅಡ್ಮಿನಿಸ್ಟ್ರೇಷನ್ನು ಆಫೀಸರುಗಳು ಚೆನ್ನಾಗಿ ಕೆಲಸಮಾಡುತ್ತಾರೆ ಎನ್ನುವ ಮನೋಭಾವನೆಯನ್ನು ಹೊಂದಿದ್ದಾರೆ. ಆದರೆ ಇದನ್ನು ನಾನು ಒಪ್ಪಿಕೊಳ್ಳಲಾರೆ ಎಂದು ಸ್ವಲ್ಪ ಕಟುವಾಗಿಯೇ ಇಲ್ಲಿ ಹೇಳಬಯಸುತ್ತೇನೆ.

ಇನ್ನೊಂದು ಮುಖ್ಯವಾದ ವಿಚಾರ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದು ಖನಿಜಗಳ ವಿಚಾರ. ನಮ್ಮ ಮೈಸೂರಿನಲ್ಲಿ ಖನಿಜ ಸಂಪತ್ತು ಹೇರಳವಾಗಿವೆ. ಇವುಗಳೆಲ್ಲ ಎಲ್ಲೆಲ್ಲಿವೆ ಎನ್ನುವುದನ್ನು ಸೂಕ್ತವಾದ ರೀತಿಯಲ್ಲಿ ಸರ್ವೆಮಾಡಿ ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ಖನಿಜ ಸಂಪತ್ತು ಸಿಗುತ್ತದೆ. ಎನ್ನುವಂತಹ ಸರ್ವೆ ಕೆಲಸ ಇನ್ನೂ ನಡೆದಿಲ್ಲ. ನಾನಾದರೂ ಇದು ತೀರಾ ವ್ಯಸನ ಕರವಾದ ಸಂಗತಿ ಎಂದು ಭಾವಿಸುತ್ತೇನೆ. ಹೋದ ಸಲ ಇಲ್ಲಿ ಸರಕಾರದವರು ಅಪ್ಪಣೆಕೊಡಿಸಿದರು National Council of Applied Economics Research ಎಂದು ಏರ್ಪಾಡುಮಾಡುತ್ತಿ ದ್ದೇವೆ. ಅದರಿಂದ ರೀಸರ್ಚ್‌ಮಾಡುತ್ತೇವೆ, ಸರ್ವೆಮಾಡುತ್ತೇವೆ, ಎಂದು ಹೇಳಿದ್ದರು. ಅದು ಎಲ್ಲೂ ಆದಂತೆ ನನಗೆ ಕಾಣಲಿಲ್ಲ ಏನು ಸರ್ವೆಮಾಡಿದರು? ಮೈಸೂರು ದೇಶದಲ್ಲಿ ಇದರಿಂದ ಪ್ರಗತಿ ಸಾಧನೆ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದನ್ನು ಈಗಲಾದರೂ ಮಾನ್ಯ ಮಂತ್ರಿಗಳು ಇಲ್ಲಿ ತಿಳಿಸಬೇಕೆಂದು ಕೇಳುತ್ತೇವೆ. ಖನಿಜಗಳನ್ನು ಸರ್ವೆ ಮಾಡತಕ್ಕ ಸಂದರ್ಭಗಳಲ್ಲಿ ತ್ವರಿತ ಮಾಡಬೇಕು. ಎಲ್ಲೆಲ್ಲಿ ಖನಿಜಗಳಿವೆಯೋ ಅವನ್ನೆಲ್ಲಾ ಉಪಯೋಗಿಸಿಕೊಳ್ಳಬೇಕು.

ಇನ್ನು ಸಿಮೆಂಟಿನ ಅಭಾವ ಈಗ ಬಹಳವಾಗಿ ಕಾಣುತ್ತಿದೆ. ಸಿಮೆಂಟಿಗೆ ಬೇಕಾಗುವ Lime Stone Clay ಇತ್ಯಾದಿ ಎಲ್ಲ ಪದಾರ್ಥಗಳನ್ನು ಉಪಯೋಗಿಸಿಕೊಂಡು ಅನೇಕ ಸಿಮೆಂಟು ಫ್ಯಾಕ್ಟರಿಗಳನ್ನು ತೆಗೆಯಬಹುದು. ಇವನ್ನು ಮಾಡುವುದಕ್ಕೆ ಸಾಧ್ಯವಿಲ್ಲವೊ? ಅಮ್ಮಸಂದ್ರದಲ್ಲಿ ಒಂದು, ಹಿರಿಯೂರಿನ ಬಳಿ ಒಂದು, ಬೆಳಗಾಂ ಜಿಲ್ಲೆಯಲ್ಲಿ ಒಂದು ಸಿಮೆಂಟು ಫ್ಯಾಕ್ಟರಿ ಮಾಡುವುದಕ್ಕೆ ಅವಕಾಶವಿದೆ. ಇದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದರು. ಇದನ್ನು ಎಷ್ಟು ಮಟ್ಟಿಗೆ ಮಾಡಿದ್ದಾರೋ ಅದನ್ನು ಮಂತ್ರಿಗಳಿಂದ ತಿಳಿಯಲು ಕಾತುರನಾಗಿದ್ದೇನೆ.

Coloured Films Industry ನಮ್ಮ ದೇಶದಲ್ಲಿ ಮಾಡಲು ಬಹಳ ಅವಕಾಶವಿದೆ. ಇಂತಹ ಒಂದು ಫ್ಯಾಕ್ಟರಿಯನ್ನು ಮಂಡ್ಯದ ಬಳಿ ಏರ್ಪಾಡು ಮಾಡಲು ಎಲ್ಲ ಅನುಕೂಲಗಳಿವೆ. ಇದಕ್ಕೆ ಅಮೆರಿಕಾದಿಂದ ತಿಳುವಳಿಕೆ ಕೊಡುವವರು ಬಂದು ಇದನ್ನು ಏರ್ಪಾಡು ಮಾಡುತ್ತಾರೆಂದು ಇತ್ತು. ಇಲ್ಲಿಯವರೆಗೂ ಇದು ಆಗಲಿಲ್ಲ. ಇದು ನನ್ನ ಗಮನಕ್ಕೆ ಬಂದಂತೆ ಬೇರೆಲ್ಲಿಯೂ ಆದುದು ನಾನು ಕಾಣೆ. ನಮ್ಮ ದೇಶದಲ್ಲಿ ಈ ಕಾರ್ಖಾನೆ ಆಗುವಂತೆ ಮಾಡಲು ಬೇಗ ಕ್ರಮ ತೆಗೆದುಕೊಳ್ಳಬೇಕು.

ನಮ್ಮ ದೇಶದಲ್ಲಿ ಇನ್ನೂ ಕಾಗದದ ಕಾರ್ಖಾನೆ ಮಾಡುವುದಕ್ಕೆ ಬಹಳ ಅವಕಾಶಗಳಿವೆ, ಇರ ತಕ್ಕ ಕಾಗದದ ಕಾರ್ಖಾನೆಯಲ್ಲಿ ಈಗ ಒಂದು ವರ್ಷಕ್ಕೆ 8,000 ಟನ್ನುಗಳಷ್ಟು ಉತ್ಪತ್ತಿಯಾಗು ತ್ತಿದೆ. ಈಚೆಗೆ ಇದನ್ನು ಜಾಸ್ತಿ ಮಾಡಿ ದಿನಕ್ಕೆ 50 ಟನ್ನುಗಳಷ್ಟು ಹೆಚ್ಚು ಉತ್ಪತ್ತಿ ಮಾಡಲು ಪ್ರಯತ್ನ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇದು ಹೇಗೆ ನಡೆದಿದೆಯೋ ಯಾರಿಗೂ ಗೊತ್ತಿಲ್ಲ.

SRI K. MALLAPPA.—Production in the Paper Mills at Bhadravathi will be raised to 70 tons per day and one work will be completed by the end of this month.

ಶ್ರೀ ಟಿ. ಮಾದಯ್ಯ ಗೌಡ.—ಫರ್ಟಿಲೈಸರು ಫ್ಯಾಕ್ಟರಿಗಳು ನಮ್ಮ ದೇಶದಲ್ಲಿ ಇನ್ನೂ ಹೆಚ್ಚು ರೀತಿಯಲ್ಲಿ ಕೆಲಸ ಮಾಡುವುದು ಅವಶ್ಯಕ. ಈಗಿರುವ ಫರ್ಟಿಲೈಸರು ಫ್ಯಾಕ್ಟರಿಗಳ ಉತ್ಪತ್ತಿ ಸಾಲದು. ವ್ಯವಸಾಯ ಮುಖ್ಯವಾದ ಈ ದೇಶಕ್ಕೆ ಬಹಳ ಉತ್ತಮವಾದ ಫರ್ಟಿಲೈಸರ್ ಫ್ಯಾಕ್ಟರಿ ಗಳಿರಬೇಕು. ಈಗ ಅಷ್ಟು ಇಲ್ಲದೆ ಇರುವುದರಿಂದ ನಮಗೆ ಎಷ್ಟು ಉತ್ಪತ್ತಿಯಾಗಬೇಕೋ ಅಷ್ಟು ಆಗುತ್ತಿಲ್ಲ. ಇದಕ್ಕೆ ಸಹಾಯವಾಗಲು ಫರ್ಟಿಲೈಸರ್ ಫ್ಯಾಕ್ಟರಿಗಳು ಹೆಚ್ಚಾಗಬೇಕು.

ತುಮಕೂರು ಮತ್ತು ಧಾರವಾಡದಲ್ಲಿ ಒಂದು pilot project ಮಾಡುತ್ತೇವೆಂದು ಹೇಳಿ ದ್ದಾರೆ. ತುಮಕೂರಿನಲ್ಲಿ ಇಂತಹ ಪೈಲಟ್ ಪ್ರಾಜೆಕ್ಟು ಬೇಕು ಎಂದು ಇಲ್ಲಿರುವ ತುಮಕೂರಿನ ಪ್ರತಿನಿಧಿಗಳೂ ಕೇಳುತ್ತಿದ್ದರು. ಆದರೆ ಇದುವರೆಗೆ ರಾಮನಗರಂನಲ್ಲಿ ಈ ಪೈಲೆಟ್ ಪ್ರಾಜೆಕ್ಟು ಇತ್ತು. ಇದಕ್ಕೋಸ್ಕರ ಲಕ್ಷ ರೂಪಾಯಿಗಳಷ್ಟು ಖರ್ಚಾಯಿತು. ಇಷ್ಟು ಲಕ್ಷ ರೂಪಾಯಿಗಳು ಖರ್ಚು ಮಾಡಿದ್ದರೂ ನಮ್ಮ ರಾಮನಗರಕ್ಕೆ ಎಷ್ಟುಮಟ್ಟಿಗೆ ಉಪಯೋಗವಾಗಿದೆ ಎನ್ನುವುದನ್ನು ನನಗೆ ಮಾನ್ಯ ಮಂತ್ರಿಗಳು ಇಲ್ಲಿ ತಿಳಿಸಿದರೆ ನಾನು ಅವರಿಗೆ ತುಂಬಾ ಕೃತಜ್ಞನಾಗಿರುತ್ತೇನೆ. ನನ್ನ ಅನುಭವದಿಂದ ರಾಮನಗರಂನಲ್ಲಿದ್ದ ಈ ಪೈಲೆಟ್ ಪ್ರಾಜೆಕ್ಟಿನಿಂದ ಗ್ರಾಮಾಂತರ ಜನರಾದ ರೈತ ರಿಗೆ ವ್ಯವಸಾಯಗಾರರಿಗೆ ಏನೂ ಉಪಯೋಗವಾಗಲಿಲ್ಲ ಎಂದು ವ್ಯಸನದಿಂದ ಹೇಳಬೇಕಾಗಿದೆ. ಆದರೂ ತುಮಕೂರಿಗೆ ಹಾಗೂ ಧಾರವಾಡಕ್ಕೆ ಪೈಲಟ್ ಪ್ರಾಜೆಕ್ಟು ಎಂದು ಮಾಡುತ್ತಿರುವುದನ್ನು ಸ್ವಾಗತಿಸಬೇಕಾದುದೇ. ಆದರೆ ಅದಕ್ಕೆ ಕೊಡಬೇಕಾದ ಎಲ್ಲ ಸವಲತ್ತುಗಳನ್ನು ಕೊಟ್ಟು ಅಲ್ಲಿ ರುವ ಜನಕ್ಕೂ ಅನುಕೂಲ ಮಾಡಿಕೊಡುವುದು ಅಗತ್ಯ.

ಕೈಗಾರಿಕಾ ಕ್ಷೇತ್ರದಲ್ಲಿ ಅನೇಕ ಯುವಕರಿಗೆ ತರಬೇತಿ ಕೊಟ್ಟು ಅವರು ತರಬೇತಿ ಪಡೆದು ಬಂದ ಮೇಲೆ ಅವರಿಗೆ ಬೇಕಾಗುವ ಸಲಕರಣೆಗಳನ್ನು ಅನುಕೂಲಗಳನ್ನು ಕೊಟ್ಟು ಕೈಗಾರಿಕೆ ಗಳನ್ನು ಸೂಕ್ತವಾದ ರೀತಿಯಲ್ಲಿ ಅಭಿವೃದ್ಧಿ ಮಾಡಲು ಏರ್ಪಾಡು ಮಾಡಬೇಕು. ಆದರೆ ಈಗ ಟ್ರೈನಿಂಗ್ ಆಗದೇ ಇರುವವರೂ ಕೈಗಾರಿಕಾ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುತ್ತಾರೆ. ಟ್ರೈನಿಂಗು ಕೊಡುವುದು ಒಳ್ಳೆಯದು. ಆದರೆ ಟ್ರೈನಿಂಗು ಕೊಟ್ಟ ಮೇಲೆ ಅವರಿಗೆ ಯಾವ ರೀತಿ ಯಲ್ಲಿ ಸಹಾಯಮಾಡಬೇಕೋ ಅದನ್ನು ಮಾಡುತ್ತಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಬಯಸು ತ್ತೇವೆ.

ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷಣಿಯರೇ ಈ ಇಂಡ ಸ್ಟ್ರೀಸ್ ಡಿಮ್ಯಾಂಡುಗಳ ಮೇಲೆ ಮಾತನಾಡುವ ಸಂದರ್ಭದಲ್ಲಿ ನಾನು ನನ್ನ ಕೆಲವು ವಿಚಾರ ಗಳನ್ನು ಈ ಸಭೆಯ ಮುಂದಿಡಬೇಕೆಂದು ನಿಂತಿದ್ದೇನೆ. ಈಗತಾನೆ ನಮ್ಮ ಶ್ರೀ ಶಿವಪ್ಪನವರೂ ಮತ್ತು ಶ್ರೀ ಮಾದಯ್ಯಗೌಡರೂ ಹೇಳಿದಹಾಗೆ ನಮ್ಮ ಮೈಸೂರು ದೇಶ ಈ ಕೈಗಾರಿಕೆಗಳಲ್ಲಿ ಬಹಳ ಮುಂದುವರಿದ ದೇಶವಾಗಿತ್ತು. ಆದರೆ ಈಗ ಇದು ಬಹಳ ಹಿಂದು ಹಿಂದಕ್ಕೆ ಹೋಗುತ್ತಿದೆ ಯೆಂದು ವ್ಯಸನಪಡತಕ್ಕವರಲ್ಲಿ ನಾನೂ ಕೂಡ ಒಬ್ಬಳಾಗಿದ್ದೇನೆ. ಆದರೆ ಈಗತಾನೇ ಮಾತನಾಡಿದ

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಶ್ರೀ ಟಿ. ಮಾದಯ್ಯಗೌಡರು ಈಗ ನಮ್ಮಲ್ಲಿ ಕೆಲವು ಕೈಗಾರಿಕೆಗಳು ಅಭಿವೃದ್ಧಿ ಹೊಂದುತ್ತಿವೆಯೆಂದು ಅವರೇನೋ ಒಂದು ರೀತಿಯಲ್ಲಿ ಸ್ವಲ್ಪ ಮಟ್ಟಿಗೆ ಸಮಾಧಾನವನ್ನು ಮಾಡಿಕೊಂಡರು. ಆದರೆ ನಾನು ಅವರಹಾಗೆ ಸಮಾಧಾನಪಟ್ಟುಕೊಳ್ಳುವ ಹಾಗಿಲ್ಲ. ಇವುಗಳ ಅಭಿವೃದ್ಧಿ ಹಿಂದು ಹಿಂದಕ್ಕೆ ಹೋಗುತ್ತಿದೆ ಎಂಬ ಶಬ್ದಕ್ಕಿಂತಲೂ ಇನ್ನೊಂದು ಶಬ್ದವಿದ್ದರೆ ಅದನ್ನೂ ಕೂಡ ಬಳಸಬಹುದು, ಅಂದರೆ ಇದು ಅಷ್ಟು ಹಿಂದಕ್ಕೆ ಹೋಗುತ್ತಿದೆ ಎಂದು ಹೇಳಬಹುದು. ಆದರೆ ಈ ಹಿಂದೆ ಚರ್ಚೆ ನಡೆದ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯ ಕಾಲದಲ್ಲೂ ಮತ್ತು ಹಿಂದೆ ನಡೆದ ಬಜೆಟ್ ಚರ್ಚೆಯ ಕಾಲದಲ್ಲೂ ನಾನು ನಮ್ಮಲ್ಲಿ ಈ ಅಲ್ಯೂಮಿನಿಯಮ್, ಮತ್ತು ಸ್ಟೀಲ್ ಪ್ಲಾಂಟುಗಳ ಸ್ಥಾಪನೆಯ ವಿಚಾರ ಎಲ್ಲಿಗೆ ಬಂದಿದೆ ಎಂದು ನಾನು ಒಂದು ಪ್ರಶ್ನೆಯನ್ನು ಹಾಕಿದ್ದೆ. ಆದರೆ ಅದಕ್ಕೆ ಜವಾಬೇ ಬರಲಿಲ್ಲ. ಈಗ ನಮ್ಮ ಕೈಗಾರಿಕೆಯ ಮಂತ್ರಿಗಳಾದರೂ ಅಲ್ಯೂಮಿನಂ ಫ್ಯಾಕ್ಟರಿಯ ವಿಚಾರ ಎಲ್ಲಿಗೆ ಬಂದಿದೆ ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಾನು ಕೆಲವು ಪತ್ರಿಕೆಗಳಲ್ಲಿ ಸ್ಟೀಲ್ ಪ್ಲಾಂಟನ್ನು ಗೋವಾದಲ್ಲೋ ಅಥವಾ ಹೊಸಪೇಟೆಯ ಬಳಿಯೋ ಎಲ್ಲಿಯೋ ಒಂದು ಕಡೆ ಹಾಕಲಾಗುತ್ತದೆಂದೂ ಈ ವಿಚಾರದಲ್ಲೂ ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದೊಡನೆ ಕನ್‌ಸಲ್ಟೇಷನ್ ನಡೆಸುತ್ತಿದ್ದಾರೆಂತಲೂ ಓದಿದ ಜ್ಞಾಪಕವಿದೆ. ಈ ಎರಡು ಹೆಸರುಗಳನ್ನು ಕೇಳಿದರೆ ನನಗನಿಸುತ್ತಿದೆ—ಅಂತೂ ಇಂತೂ ಕುಂತೀ ಮಕ್ಕಳಿಗೆ ರಾಜ್ಯವಿಲ್ಲ ಎಂದಹಾಗೆ ಎಲ್ಲಿ ಇದು ಆ ಗೋವಾಕ್ಕೆ ಹೋಗಿ ಬಿಡುತ್ತದೋ ಎಂಬ ಶಂಕೆ ನನಗೆ ಬಂದಿದೆ. ಹಾಗೊಂದು ವೇಳೆ ಇದನ್ನು ಗೋವಾದಲ್ಲೇ ಹಾಕಬೇಕೆಂದು ನಿರ್ಧಾರವಾದರೆ ಮುಂದೆ ನಮ್ಮ ಶರಾವತಿಯಲ್ಲಿ ತಯಾರಾಗತಕ್ಕ ಪವರನ್ನೆಲ್ಲಾ ನಾವು ಏನು ಮಾಡಬೇಕು ? ಅದನ್ನು ನಾವು ಬಳಸುವುದು ಹೇಗೆ? ನಮಗೆ ಆ ಪವರನ್ನೆಲ್ಲಾ ಉಪಯೋಗಿಸಲು ಅವಕಾಶವೆಲ್ಲಿದೆ? ಈಗ ನಾವು ಸುಮಾರು 100 ಕೋಟಿ ರೂಪಾಯಿನ ಪವರನ್ನು ಉತ್ಪಾದನೆ ಮಾಡುತ್ತಿದ್ದೇವೆ. ಅದನ್ನೆಲ್ಲಾ ಉಪಯೋಗಿಸುವುದಕ್ಕೆ ಅವಕಾಶವೆಲ್ಲಿದೆ? ಈ ವಿಚಾರಗಳನ್ನೆಲ್ಲಾ ನಮ್ಮ ಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ತಿಳಿಸಿ ಆ ಫ್ಯಾಕ್ಟರಿಯನ್ನು ಹೊಸಪೇಟೆಯಲ್ಲೇ ಹಾಕಲು ಪ್ರಬಲವಾದ ಕಾರಣಗಳಿವೆಯೆಂದು ಅವರಿಗೆ ಮನವರಿಕೆಯಾಗುವಂತೆ ತಿಳಿಸಬೇಕು. ಅಲ್ಲಿ ಹೈ ಪವರ್ ಓರ್ ಸಿಕ್ಕುತ್ತದೆ. ಈಗ ಹೊಸಪೇಟೆಯಿಂದ ಮದ್ರಾಸಿಗೆ ಬ್ರಾಡ್‌ಗೇಜ್ ರೈಲ್ವೆ ಲೈನು ಬೇರೆ ಆಗುತ್ತಿದೆ. ಇದರಿಂದ ನಮಗೆ ಓರ್ ಮತ್ತು ಕೋಕುಗಳನ್ನು ಟ್ರಾನ್ಸ್‌ಪೋರ್ಟ್ ಮಾಡಿಕೊಳ್ಳುವುದಕ್ಕೆ ಬಹಳ ಅನುಕೂಲವಾಗುತ್ತದೆ. ನಮ್ಮಲ್ಲಿ ಪವರ್ ಸಹಾ ಇರುತ್ತದೆ. ಈ ಎಲ್ಲ ಕಾರಣಗಳಿಂದ ನಮ್ಮ ಸರ್ಕಾರದವರು ತಮ್ಮ ಎಲ್ಲಾ ಇನ್‌ಫ್ಲುಯೆನ್ಸನ್ನೂ ಉಪಯೋಗಿಸಿ ಅದನ್ನು ಆ ಹೊಸಪೇಟೆಯಲ್ಲೇ ಸ್ಥಾಪನೆಯಾಗುವಂತೆ ಮಾಡಬೇಕೆಂದು ನಾನು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಶ್ರೀಮಾನ್ ಸಿದ್ದಯ್ಯ ಕಾಶೀಮಠ—ಇವರು ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂದು ಒಂದು ಕಟ್‌ಮೋಷನ್ ತಂದಿದ್ದಾರೆ. ನನಗೆ ಇದರಲ್ಲಿ ಸಂಪೂರ್ಣ ನಂಬಿಕೆಯಿದೆ. ನಾನು ಈ ಕೈಗಾರಿಕೆಗಳಲ್ಲಿ ಮತ್ತು ವ್ಯವಸಾಯದಲ್ಲಿ ಅಭಿವೃದ್ಧಿ ಹೊಂದಿರತಕ್ಕ ಯಾವ ಯಾವ ದೇಶಗಳನ್ನು ನೋಡಿದ್ದೇನೋ ಮತ್ತು ಏನು ವಿಚಾರಗಳನ್ನು ಓದಿದ್ದೇನೋ ಆ ದೇಶಗಳಲ್ಲೆಲ್ಲಾ ಎಲ್ಲಿ ಕೈಗಾರಿಕೆ ಮುಂದುವರಿದಿರುತ್ತದೆಯೋ ಅಲ್ಲಿ ಜನರೂ ಮುಂದುವರಿದಿರುತ್ತಾರೆ. ಜಪಾನಿನಲ್ಲಿ ಪ್ರತಿಯೊಬ್ಬರೂ ಇಂಡಸ್ಟ್ರಿಯಲಿಸ್ಟುಗಳೇ ಆಗಿದ್ದಾರೆ ಈ ತಾಲ್ಲೂಕ್‌ವೈಸ್ ಇಂಡಸ್ಟ್ರೀಸನ್ನು ಹಾಕುವ ವಿಚಾರದಲ್ಲಿ ತುಮಕೂರು ಜಿಲ್ಲೆಯಲ್ಲೇ ಏಕೆ ಅಥವಾ ಧಾರವಾಡದಲ್ಲೇ ಏಕೆ ಈ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕೆಂದು ಕೆಲವರು ಕೇಳಬಹುದು. ಅದಕ್ಕೆ ನಾನು ಹೇಳುವುದು ಎಲ್ಲಿ ವ್ಯವಸಾಯಕ್ಕೆ ನೀರಾವರಿ ಸೌಕರ್ಯಗಳಿರುವುದಿಲ್ಲವೋ ಅಂಥ ಸ್ಥಳಗಳಿಗೆ ಮೊದಲು ಈ ಅನುಕೂಲವನ್ನು ಕಲ್ಪಿಸಬೇಕೆಂದು ಹೇಳುತ್ತೇನೆ. ಈ ಅನುಕೂಲವನ್ನು ಕಲ್ಪಿಸಿಕೊಡತಕ್ಕದ್ದು ಸರ್ಕಾರದವರ ಆದ್ಯ ಕರ್ತವ್ಯ. ಈಗ ನಮ್ಮ ತಾಲ್ಲೂಕಾದ ಗುಂಡ್ಲುಪೇಟೆಯಲ್ಲಿ 2—3 ಪ್ರಾಜೆಕ್ಟುಗಳನ್ನು ಕಟ್ಟಿದರೆ ಅಲ್ಲಿ 15—20 ಸಾವಿರ ಎಕರೆ ನೀರಾವರಿಯಾಗುತ್ತದೆ. ನಮ್ಮ ರಾಜ್ಯದಲ್ಲಿ ವ್ಯವಸಾಯದ ಕಸುಬನ್ನವಲಂಬಿಸಿರುವವರಿಗೆ ವರ್ಷದಲ್ಲಿ 5—6 ತಿಂಗಳು ಯಾವ ಉದ್ಯೋಗವೂ ಇರುವುದಿಲ್ಲ. ಅಂಥವರಿಗಾಗಿ ಸರ್ಕಾರದವರು ಪ್ರತಿಯೊಂದು ತಾಲ್ಲೂಕಿನಲ್ಲೂ ಗೃಹ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ನಮ್ಮ ತಾಲ್ಲೂಕಿನಲ್ಲಿರತಕ್ಕ ಗೋಪಾಲಸ್ವಾಮಿ ಬೆಟ್ಟದಲ್ಲಿ ಬೆಲೆಬಾಳತಕ್ಕ ಅನೇಕ ಬಗೆಯ ರತ್ನಗಳು ಸಿಗುತ್ತವೆಂದು ಹೇಳುತ್ತಿದ್ದಾರೆ. ಇದನ್ನೂ ಸಹಾ ನೋಡಿಸಿ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಹಾಗೊಂದುವೇಳೆ ಸರ್ಕಾರದವರಿಗೆ ಅದೂ ಸಾಧ್ಯವಾಗದೆ ಹೋದರೆ

ಮಣ್ಣಿನಿಂದ ಆಗತಕ್ಕ ಹೆಂಚು ಇಂಥ ಕಾರ್ಖಾನೆಗಳನ್ನಾದರೂ ಅಲ್ಲಿ ಪ್ರಾರಂಭಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹೀಗೆ ಏನಾದರೊಂದು ಕೈಗಾರಿಕೆಯನ್ನು ಪ್ರತಿಯೊಂದು ತಾಲ್ಲೂಕಿನಲ್ಲೂ ಸ್ಥಾಪಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಈ ಕೈಗಾರಿಕೆಗಳನ್ನು ಸ್ಥಾಪಿಸಲು ಯಾವ ರಾ ಮೆಟೀರಿಯಲ್ಸ್ ಸಿಕ್ಕದಿದ್ದರೂ ಈಗ ಅಲ್ಲಿ ರೇಷ್ಮೆ ಬೆಳೆಯನ್ನು ಬೆಳೆಸುವುದು ಪ್ರಾರಂಭವಾಗಿದೆ. ಇದೇ ವಿಚಾರದಲ್ಲಿ ರೇಷ್ಮೆ ಕ್ವಾಲಿಟಿಯನ್ನು ಇನ್ನೂ ಉತ್ತಮಗೊಳಿಸಬೇಕೆಂದು ಮೊನ್ನೆ ತಾನೆ ಪ್ಲಾನಿಂಗ್ ಕಮಿಷನ್ನಿನ ವೈಸ್ ಛೇರ್ಮನ್ನರ ಒಂದು ಹೇಳಿಕೆಯನ್ನು ನಾನು ಪತ್ರಿಕೆಗಳಲ್ಲಿ ಓದಿದೆನು. ಆದರೆ ಈ ಹಿಂದೆ ಮಾತನಾಡಿದ ಶ್ರೀಮಾನ್ ಎಂ. ಸಿ. ಬಸಪ್ಪನವರು ರೇಷ್ಮೆ ವಿಚಾರವಾಗಿ ಮಾತನಾಡುತ್ತಾ ಇದರಲ್ಲಿ ಎಷ್ಟು ವಿಭಾಗವಿದೆ, ಇದನ್ನು ಎಷ್ಟು ಎಕರೆಗಳಲ್ಲಿ ಬೆಳೆಯಲಾಗುತ್ತಿದೆ, ಇದರಲ್ಲಿ ಎಷ್ಟು ಜಾತಿಯಿರುತ್ತದೆ ಎಂಬತಕ್ಕ ವಿಚಾರಗಳನ್ನೆಲ್ಲಾ ಅವರು ಪ್ರಸ್ತಾಪ ಮಾಡಿದ್ದಾರೆ. ಆದರೆ ನಾನೀಗ ಅಂಥ ಕಷ್ಟದ ಕೆಲಸಕ್ಕೆ ಹೋಗುವುದಿಲ್ಲ. ಅವರ ವಿಚಾರ ಸರಣಿಗೂ ನನ್ನ ವಿಚಾರಣೆಗೂ ಸ್ವಲ್ಪ ವ್ಯತ್ಯಾಸವಿರುತ್ತದೆ. ಆದರೆ ಅವರು ಹೇಳತಕ್ಕ ವಿಚಾರವೂ ಕೂಡ ಬಹಳ ಪ್ರಾಮುಖ್ಯವಾದುದ್ದೇ. ಆದರೆ ನಾನು ಹೇಳಬೇಕೆಂದಿರುವುದೇನೆಂದರೆ ಪ್ರೈವೇಟ್ ಗ್ರೋಯರ್ಸ್‌ಗಳಿಗೆ ಒಳ್ಳೆಯ ಬಿತ್ತನೆಯ ಗೂಡುಗಳನ್ನು ಒದಗಿಸಬೇಕೆಂದೂ, ಮತ್ತು ಈ ಉದ್ಯಮವನ್ನು ನ್ಯಾಷನಲೈಜ್ ಮಾಡಬೇಕೆಂದು ನನ್ನ ಅಭಿಪ್ರಾಯ. ಹೀಗೆ ಮಾಡಿ ಯಾರ್ಯಾರು ರೇಷ್ಮೆಯನ್ನು ದೇಶದಲ್ಲಿ ಬೆಳೆಸುತ್ತಾರೋ ಅಂಥವರಿಗೆಲ್ಲಾ ಒಳ್ಳೆಯ ರೇಷ್ಮೆಯ ಬಿತ್ತನೆಯ ಗೂಡುಗಳು ದೊರೆಯುವಂತೆ ಮಾಡಬೇಕೆಂಬುದು ನನ್ನ ಉದ್ದೇಶ. ಒಳ್ಳೆ ಹೈಬ್ರೀಡ್ ರೇಷ್ಮೆ ಗೂಡುಗಳನ್ನು ಉತ್ಪತ್ತಿ ಮಾಡಿ ಅದನ್ನು ಬಿಳಿಗಿರಿ ರಂಗನ ಬೆಟ್ಟದಲ್ಲೂ ಬಿತ್ತನೆ ಮಾಡಿ ಹಿಲ್ ಸ್ಟೇಷನ್‌ಗಳಲ್ಲೂ ಈ ಬೆಳೆಯನ್ನು ಅಭಿವೃದ್ಧಿಪಡಿಸಬೇಕೆಂದು ಹೇಳುತ್ತೇನೆ. ಹೀಗೆ ಆ ನಾಟೀ ಗೂಡುಗಳನ್ನೂ ಸಹಾ ಅವುಗಳ ಉತ್ಪನ್ನವನ್ನು ಹೆಚ್ಚಿಸುವಂತೆ ಪ್ರಯತ್ನ ಪಡಬೇಕೆಂದು ನಾನು ಸೂಚನೆ ಮಾಡುತ್ತೇನೆ.

ಇನ್ನು ಎರಡನೆಯದಾಗಿ ಚಾಕೀ ಸೆಂಟರುಗಳ ವಿಷಯವನ್ನು ಕೆಲವು ಸಂದರ್ಭಗಳಲ್ಲಿ ಒಂದೇ ತೋಟದ ಸೊಪ್ಪನ್ನು ತಂದು ಹಾಕಿ ಒಂದೇ ಮಟ್ಟದ ಬೆಳೆಯನ್ನು ಪಡೆಯಬೇಕೆಂದು ಪ್ರಯತ್ನಪಟ್ಟ ಹಲವೆಡೆಗಳಲ್ಲಿ ಸಾಕಿದವರಿಗೆ ಏಟು ಬೀಳತಕ್ಕ ಪ್ರಸಂಗವುಂಟು. ನಾನು ಹೇಳುವುದು ಈ ಚಾಕೀ ಸೆಂಟರುಗಳಿಗೆ 8—10 ಎಕರೆ ಜಮೀನನ್ನು ಕೊಟ್ಟು ಅದನ್ನು ಒಂದು ಮಾಡಲ್ ಸೆಂಟರನ್ನಾಗಿ ಮಾಡಿ ಅಲ್ಲಿ ಒಂದೇ ತರಹ ಚಂದ್ರಿಕೆ, ಒಂದೇ ತರಹ ತಟ್ಟೆ, ಒಂದೇ ತರಹದ ಸೊಪ್ಪು ಹೀಗೆ ಎಲ್ಲವೂ ಒಂದೇ ರೀತಿಯಿರುವಂತೆ ಒಂದು ಮಾಡಲ್ಲಾಗಿ ರೇಷ್ಮೆಯನ್ನು ತಯಾರಿಸತಕ್ಕ ವಿಧಾನವನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಹೀಗೆ ಇನ್ನು ಈ ಚರಕಾಗಳನ್ನು ರೀಪ್ಲೇಸ್ ಮಾಡಿ ಬೇಸನ್‌ಗಳನ್ನು ಕೊಡಬೇಕೆಂದು ಹೇಳುತ್ತೇನೆ. ಈ ಬದಲಾವಣೆಗಳನ್ನು ನಾವು ಮಾಡದೇ ಹೋದರೆ ನಾವು ಈ ದಿವಸ ಈ ರೇಷ್ಮೆಯ ಭಾರವನ್ನು ಚೆನ್ನಾಗಿ ತೆಗೆಯುತ್ತೇವೆಂದು ಹೇಳಿಕೊಳ್ಳುತ್ತಿದ್ದರೂ ಮುಂದೆ ಇದರಿಂದ ನಮ್ಮ ದೇಶಕ್ಕೆ ಕೆಟ್ಟ ಹೆಸರು ಬರುತ್ತದೆ. ಆದ್ದರಿಂದ ಸಾಧ್ಯವಾದ ಮಟ್ಟಿಗೂ ಬೇಸಿನ್‌ಗಳನ್ನು ಕೊಡಬೇಕೆಂದು ಹೇಳುತ್ತೇನೆ.

ಈ ಬೇಸಿನ್ನುಗಳನ್ನು ರೀಪ್ಲೇಸ್ ಮಾಡುವಾಗ ಸಬ್ಸಿಡೈಜ್ ಮಾಡಬೇಕು. ಅವರಿಗೆ ಸಾಲ, ಸಬ್ಸಿಡಿ ಎಲ್ಲಾ ಕೊಡುತ್ತಿದ್ದಾರೆ. ಆದರೆ ಈಗ ರೈತನಿಗೆ ಒಂದು ಕೈಲಿ ಹಣ ಕೊಡುತ್ತಾರೆ, ಇನ್ನೊಂದು ಕೈಲಿ ಹಣವನ್ನು ಕಿತ್ತುಕೊಳ್ಳುವುದಕ್ಕೆ ನೋಡುತ್ತಿದ್ದಾರೆ. ಸುಮಾರು 20-21 ಇಲಾಖೆಗಳಲ್ಲಿ ರಿಜಿಸ್ಟ್ರೇಷನ್ ಚಾರ್ಜಸ್ಸನ್ನು ತೆಗೆದುಕೊಳ್ಳುತ್ತಾ ಇಲ್ಲ. ಇಲ್ಲದೇ ಹೋದರೆ ಒಬ್ಬೊಬ್ಬ ರೈತ ಒಂದು ಸಾವಿರಕ್ಕೆ ನೂರು ರೂಪಾಯಿಗಳ ಸ್ಟಾಂಪು ಫೀ ಕೊಡಬೇಕಾಗುತ್ತದೆ. ರಿಜಿಸ್ಟ್ರೇಷನ್ ಫೀಯನ್ನು ಇಷ್ಟು ಹೆಚ್ಚಿಗೆ ಅವನಿಂದ ತೆಗೆದುಕೊಳ್ಳುವುದು ತುಂಬಾ ಅನ್ಯಾಯ. ಆದ್ದರಿಂದ ಇದನ್ನು ವಿನಾಯಿತಿ ಕೊಡತಕ್ಕಂಥ ಪಟ್ಟಿಯಲ್ಲಿ ಸೇರಿಸಬೇಕೆಂದು ನಾನು ಹೇಳುತ್ತೇನೆ. ಇನ್ನು ಅಸಿಸ್ಟೆಂಟ್ ಡೈರೆಕ್ಟರ್ಸ್ ಆಗಿರುವವರು ಅದರಲ್ಲೂ ಇಲಾಖೆಗೆ ಸಂಬಂಧಪಟ್ಟವರು ತಂತಮಗೆ ಕಂಡ ರೀತಿಯಲ್ಲಿ ವ್ಯವಹಾರಗಳನ್ನು ನಡೆಸುತ್ತಿದ್ದಾರೆ. ಅದೇನು ಒಳ್ಳೆಯ ವ್ಯವಹಾರವೇ, ಖಂಡಿತವಾಗಿ ಇಲ್ಲ. ಅದಕ್ಕಾಗಿ ಅವರಿಗೆ ಯೂನಿಫಾರಂ ಐಡಿಯಾ ಕೊಡುವ ಹಾಗೆ ಕೇಂದ್ರದಲ್ಲಿರುವ ಹಾಗೆ ರೀ ಓರಿಯಂಟೇಷನ್ ಕೋರ್ಸನ್ನು ಇಲ್ಲಿ ಪ್ರಾರಂಭಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ವೀವಿಂಗ್ ಯೂನಿಟ್ಟುಗಳ ವಿಷಯವಾಗಿ ಹೇಳುವುದಾದರೆ ಮಳೆಗಾಲದಲ್ಲಿ ಈಗ ಇರುವ ಸುಧಾರಿಸಿದ ಕಕೂನ್ಸ್ ಸ್ಕೀಮಿನಲ್ಲಿ ರೀಲ್ಸ್ ಬಹಳ ನಷ್ಟವಾಗುತ್ತವೆಂಬುದಾಗಿ ಸೆಂಟ್ರಲ್ ಸಿಲ್ಕ್ ಬೋರ್ಡಿನಲ್ಲಿ ಹೇಳಿದ್ದಾರೆ. ಆದ್ದರಿಂದ ನಮ್ಮ ಸರ್ಕಾರದವರು ಸುಧಾರಿಸಿದ ಕಕೂನ್ಸ್ ಸರಬರಾಯಿ ಮಾಡುವ ಮತ್ತು ಬೇರೆ ತರಹ ವರ್ಕ್ ಕೊಡುವ ವಿಚಾರದಲ್ಲಿ ಅವರಿಗೆ ಸಹಾಯಮಾಡಬೇಕೆಂದು ನಾನು ಹೇಳುತ್ತೇನೆ. ನನ್ನ ತಾಲ್ಲೂಕಿನಲ್ಲಿಯೇ ಸುಮಾರು 6 ಸಾವಿರ ಚರಕಗಳಿವೆ. ಅವುಗಳಿಂದೆಲ್ಲಾ ಕೆಲಸ ನಡೆಯುತ್ತಾ ಇದೆ. ಆದರೆ ಅವು ಸಿಲ್ಕ್ ಚರಕಗಳಲ್ಲ. ಕಾಟನ್ ಚರಕಗಳು. ಅವುಗಳಿಂದಲೇ ಹೆಣ್ಣುಮಕ್ಕಳು ನೂಲುತ್ತಾ ಇದ್ದಾರೆ. ನಮ್ಮಲ್ಲಿ ವೇಸ್ಟ್ ಕಕೂನ್ಸ್ ಬಹಳವಾಗಿ ಸಿಗುತ್ತದೆ. ವೇಸ್ಟ್

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಬಂಗಾಳದಲ್ಲಿ ಕೆಲವು ಕಡೆಗಳಲ್ಲಿ ಅವರು ನೂತು ಫಾರೆನ್ನಿಗೆ ಕಳುಹಿಸಿ ಫಾರೆನ್ ಎಕ್ಸ್ಚೇಂಜನ್ನು ಸಂಪಾದಿಸುತ್ತಾರೆ. ನಮ್ಮಲ್ಲಿ ಸಿಕ್ಕುವ ನೂಲನ್ನು ಅವರಿಗೆ ಕೊಟ್ಟದ್ದರಿಂದ ಅವರು ಹೆಚ್ಚಿಗೆ ಸಂಪಾದನೆ ಮಾಡಿದ್ದಾರೆ. ಇದು ಬಹಳ ವಿಷಾದಕರ. ಹೆಣ್ಣುಮಕ್ಕಳು ನಿಜವಾಗಿ ಮಾಡುವ ಕೆಲಸವಿದು. ಅಲ್ಲಿ ಯಾವ ರೀತಿಯಲ್ಲಿ ನೂಲನ್ನು ತೆಗೆಯುತ್ತಿದ್ದಾರೆಂಬುದನ್ನು ಮತ್ತು ಯಾವ ರೀತಿ ಅವರಿಗೆ ಸಹಾಯ ಮಾಡಬೇಕೆಂಬುದನ್ನು ಸರ್ಕಾರದವರು ನೋಡಬೇಕು. ಈ ವಿಷಯದಲ್ಲಿ ಅನೇಕ ಅರ್ಜಿಗಳನ್ನು ಖಾದೀ ಬೋರ್ಡಿಗೆ ಬರೆದಿದ್ದೇವೆ. ಇದುವರೆಗೂ ಅದು ಏನಾಗಿದೆ ಯಾವ ಮಟ್ಟದಲ್ಲಿದೆ ಎನ್ನುವುದಕ್ಕೆ ಜವಾಬು ಬರಲಿಲ್ಲ. ಸಂಬಂಧಪಟ್ಟ ಮಂತ್ರಿಗಳು ಈ ವಿಚಾರವನ್ನು ನೋಡಬೇಕು. ಇದು ಸ್ಥಾಪನೆಯಾದ ಕೂಡಲೇ, ಶುರುವಾದ ಕೂಡಲೇ ಪ್ರಿಂಟಿಂಗ್, ವೀವಿಂಗ್, ಸಬ್ಸಿಡಿಯರಿ ಹಾಬೀಸ್ ಕ್ರಮೇಣವಾಗಿ ಆಗುತ್ತವೆ. ಇದಕ್ಕೆ ಸರ್ಕಾರದವರು ಗಮನಕೊಡಬೇಕು.

ಇನ್ನು ಸಿಲ್ಕ್ ಫೀಲೇಚರ್‌ನಲ್ಲಿ ಬಹಳ ನಷ್ಟವಾಗುತ್ತಿದೆ. ಇದು ಯಾವ ಕಾರಣವೋ, ಎಷ್ಟು ಪರೀಕ್ಷೆಮಾಡಿದರೂ ನಷ್ಟವೇ ಆಗುತ್ತಿದೆ. ನಮ್ಮಲ್ಲಿ ಜಾಪನೀಸ್ ಕೊಲ್ಯಾಬರೇಷನ್ನಿನಿಂದ ಒಂದು ಫಿಲೇಚರ್ ಇಂಡಸ್ಟ್ರಿಯನ್ನು ಪ್ರಾರಂಭಮಾಡಿ ಅವರಿಂದ ಸಾಕಷ್ಟು ಮೆಷನರಿಗಳನ್ನು ತೆಗೆದುಕೊಂಡು ಈ ಕೈಗಾರಿಕೆಯನ್ನು ಅಭಿವೃದ್ಧಿಮಾಡಬೇಕು. ಅವರು ಯಾವ ರೀತಿ ನೂಲು ತೆಗೆಯುತ್ತಾರೋ ಆ ರೀತಿ ನೂಲು ತೆಗೆಯಲು ಜಪಾನಿನವರ ರೇಷನ್ನಿನಿಂದ ಈ ಫೀಲೇಚರ್ ಇಂಡಸ್ಟ್ರಿಯನ್ನು ಗುಂಡ್ಲು ಪೇಟೆಯಲ್ಲಿ ಸ್ಥಾಪನೆಮಾಡಬೇಕೆಂದು ನಾನು ಸರ್ಕಾರದವರನ್ನು ಕೇಳಿಕೊಂಡು ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಂಥ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ವಿ. ಬೈರೇಗೌಡ (ಯಶವಂತಪುರ).—ಅಧ್ಯಕ್ಷಣಿಯವರೇ, ಕೈಗಾರಿಕೆಗಳ ಬೇಡಿಕೆಗೆ ನನ್ನ ಪೂರ್ಣ ಬೆಂಬಲವನ್ನು ಕೊಡುತ್ತಾ ಒಂದೆರಡು ಸೂಚನೆಗಳನ್ನು ಹೇಳಬಯಸುತ್ತೇನೆ. ದೇಶಕ್ಕೆ ಸ್ವಾತಂತ್ರ್ಯ ಬಂದನಂತರ ಒಂದೇ ಸಮನಾಗಿ ನಮ್ಮ ಸರ್ಕಾರ ಕೈಗಾರಿಗೆ ಅಭಿವೃದ್ಧಿ ವಿಷಯದಲ್ಲಿ ಚೆನ್ನಾಗಿ ಕೆಲಸಮಾಡುತ್ತಾ ಇದೆ. ಸಾಕಾದಷ್ಟು ಪ್ರಗತಿಯನ್ನೂ ಸಹ ಹೊಂದಿದೆ. ಬಹುಶಃ ಗತಿಸಿದಂಥ ಸರ್ ಎಂ. ವಿಶ್ವೇಶ್ವರಯ್ಯನವರು ಈಗ ಇದ್ದಿದ್ದರೆ ಭದ್ರಾವತಿಯ ಕಬ್ಬಿಣದ ಕಾರ್ಖಾನೆಯ ಪ್ರಗತಿಯ ಬಗ್ಗೆ ಮೊದಲಿನಿಂದಲೂ ಎಷ್ಟರಮಟ್ಟಿಗೆ ಕುತೂಹಲವುಳ್ಳವರಾಗಿದ್ದರೋ ಅಂತಹವರು ಈಗ ಅದನ್ನು ನೋಡಿ ಸಂತೋಷಪಡುತ್ತಿದ್ದರು. ಪಂಚವಾರ್ಷಿಕ ಯೋಜನೆಗಳ ಪ್ರಕಾರ ಬಹಳವಾಗಿ ಕೈಗಾರಿಕೆಗಳ ಅಭಿವೃದ್ಧಿ ನಡೆಯುತ್ತಿದೆ. ಇದರಲ್ಲಿ ಒಂದು ಪ್ರಬಲವಾದ ಪೈಪೋಟಿ ನಡೆಯು ವಂಥಾದ್ದನ್ನೆಲ್ಲಾ ಸರ್ಕಾರದವರು ಸರಿದೂಗಿಸಿಕೊಂಡು ಹೋಗಬೇಕಾಗಿದೆ. ಈ ಕೈಗಾರಿಕೆಯ ಯುಗದಲ್ಲಿ ವ್ಯವಸಾಯಗಾರರ ಬಲ ಹೆಚ್ಚಾಗಬೇಕಾದರೆ, ಅದರಲ್ಲೂ ವ್ಯವಸಾಯಗಾರರ ಶಕ್ತಿ ಬೆಳೆಯಬೇಕಾದರೆ ದೇಶದಲ್ಲಿ ಕೈಗಾರಿಕೆ ಚೆನ್ನಾಗಿ ಬೆಳೆದು ಶೇಕಡ 70-75 ಭಾಗ ಕೈಗಾರಿಕೆಯ ಕ್ಷೇತ್ರದಿಂದಲೇ ವರಮಾನ ಬರುವಂತೆ ಮಾಡತಕ್ಕದ್ದು ಎಲ್ಲರ ಮುಖ್ಯ ಕರ್ತವ್ಯವಾಗಿದೆ. ಪಂಚ ವಾರ್ಷಿಕ ಯೋಜನೆಗಳ ಪ್ರಕಾರ ನಮ್ಮ ಸರ್ಕಾರದವರು ಈ ಕೈಗಾರಿಕೆಯ ಕ್ಷೇತ್ರದಲ್ಲಿ ಸಾಕಾದಷ್ಟು ಪ್ರಗತಿಯನ್ನು ಹೊಂದುತ್ತಾ ಇದ್ದಾರೆ. ನನಗೆ ಗೊತ್ತಿರುವ ಹಾಗೆ ಮೈಸೂರು ಪೋರ್ಸಿಲನ್ ಫ್ಯಾಕ್ಟರಿ ಮುಚ್ಚುವ ಸ್ಥಿತಿಗೆ ಬಂದಿತ್ತು. ಅದನ್ನು ಜಪಾನೀಯರ ಸಹಾಯದಿಂದ ತ್ವರಿತಗೊಳಿಸಿ ಅದಕ್ಕೆ ಬೇಕಾದಂಥ ತಾಂತ್ರಿಕ ಅಭ್ಯಾಸವನ್ನು ಲೇಟೆಸ್ಟಾಗಿ ನಮ್ಮವರಿಗೆ ಕೊಟ್ಟುದರ ಫಲವಾಗಿ ಇವತ್ತು ಲಾಭ ದೃಷ್ಟಿಯಿಂದ ಕೆಲಸಮಾಡತಕ್ಕ ಸಂದರ್ಭ ಬಂದಿದೆ. ಇನ್ನು ಆಡಳಿತದಲ್ಲಿ ಒಂದೆರಡು ವಿಷಯಗಳನ್ನು ಹೇಳಬೇಕಾಗಿದೆ. ಸಾಧಾರಣವಾಗಿ ಕೈಗಾರಿಕೆಗಳಲ್ಲಿ ಎರಡು ಭಾಗಗಳಿವೆ ಒಂದು ತಜ್ಞರು ಕೆಲಸಮಾಡತಕ್ಕಂಥಾದ್ದು, ಮತ್ತೊಂದು ಅಡ್ಮಿನಿಸ್ಟ್ರೇಟರ್ಸ್ ಮಾಡುವ ಕೆಲಸ ಈಗ್ಗೆ ಒಂದು ವರ್ಷದಿಂದ ಸರ್ಕಾರೀ ಕೈಗಾರಿಕೆಯ ಕ್ಷೇತ್ರಗಳಲ್ಲಿ ಅಡ್ಮಿನಿಸ್ಟ್ರೇಟರ್ಸ್ ಮತ್ತು ಟೆಕ್ನಿಕಲ್ ಪೀಪಲ್ ಯಾರು ಇದ್ದಾರೋ ಅವರಿಗೆ ಸಾಕಾದಷ್ಟು ಹೊಂದಾಣಿಕೆ ಇಲ್ಲದೆ ಹೋದುದರಿಂದ ನಾವು ಏನು ಟಾರ್ಜೆಟ್ಟನ್ನು ಮುಟ್ಟಬೇಕಾಗಿತ್ತೋ ಅದನ್ನು ಇನ್ನೂ ಮುಟ್ಟುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಈಗ ಅದನ್ನು ಕೂಲಂಕಷವಾಗಿ ಆಲೋಚನೆ ಮಾಡಬೇಕಾದ ವಿಷಯವಾಗಿದೆ. ಇದನ್ನು ನಾನು ಬಹಳ ದೃಢಮನಸ್ಸಿನಿಂದ ಹೇಳುತ್ತಿದ್ದೇನೆ. ಯುವಕರಾದ ಅಧಿಕಾರಿಗಳನ್ನು ಸಾಕಾದಷ್ಟು ಸ್ಪೆಷಲೈಜ್ ಮಾಡಿದರೆ ಅವರಿಂದ ಹೆಚ್ಚಿಗೆ ಪ್ರಗತಿಪರವಾದ ಕೆಲಸಗಳಾಗುತ್ತವೆ. ಇನ್ನು ಟಾರ್ಜೆಟ್ ಮತ್ತು ವೇಸ್ಟೇಜನ್ನು ಸಹ ಯಾವ ಅಧಿಕಾರಿಗಳೇ ಆಗಲೀ ಕಡಿಮೆ ಮಾಡಿದರೆ ಅಂತಹವರನ್ನೇ ಹತ್ತಾರು ವರ್ಷಗಳ ಕಾಲ ಈ ಕೈಗಾರಿಕೆಯ ಕ್ಷೇತ್ರದಲ್ಲಿ ಬಿಡುವುದು ಉತ್ತಮ. ಇನ್ನು ಅಡ್ಮಿನಿಸ್ಟ್ರೇಷನ್ನಿನಲ್ಲಿರುವ ಕೆಲಸಗಾರರು ಮಾತ್ರ ಸಂಬಂಧಪಟ್ಟ ಇಲಾಖೆಗೆ ಬರಶಕ್ಕ ಉತ್ಪತ್ತಿಯನ್ನು ಕೊಡಿಸದೇ ಹೋದರೆ ಅದರಲ್ಲಿಯೂ ಈ ಆಡಳಿತಗಾರರು ಸರಿಯಾಗಿ ಕೆಲಸವನ್ನು ಮಾಡದೇ ಹೋದರೆ ಬೇರೆಯವ

ರನ್ನು ಅಲ್ಲಿಗೆ ತಂದು ಹಾಕುವುದರಲ್ಲಿ ಏನೂ ತೊಂದರೆಯಿಲ್ಲ. ಮುಖ್ಯವಾಗಿ ಕೈಗಾರಿಕೆ ನಮ್ಮ ದೇಶ ದಲ್ಲಿ ಅಭಿವೃದ್ಧಿಯಾಗಬೇಕು. ಅದಕ್ಕಾಗಿ ಎಲ್ಲರೂ ಪ್ರಯತ್ನಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೆಲವು ವಿಷಯಗಳನ್ನು ನನಗೆ ಸಂಬಂಧಪಟ್ಟ ಹಾಗೆ ನನ್ನ ಸ್ನೇಹಿತರು ಪ್ರಸ್ತಾಪ ಮಾಡಿದ್ದಾರೆ. ರೇಷ್ಮೆ ವ್ಯವಸಾಯ ವಿಷಯವನ್ನೂ ಸಹ ಹೇಳಿದ್ದಾರೆ. ಚನ್ನಪಟ್ಟಣ ಸ್ಪನ್ ಸಿಲ್ಕ್ ಕೈಗಾರಿಕೆಯನ್ನು ಮುಚ್ಚಿ ಪುನಃ ಸ್ಥಾಪನೆಮಾಡಿದಾಗಲೂ ಆ ಕಂಪೆನಿ ಮೊದಲು ಅಲ್ಲಿಗೆ ತಂದು ಹಾಕಿದ್ದಂಥ ಹಳೆಯ ಡೊಂಕು ಡೊಂಕು ಮೆಷನರಿಗಳಿಂದಲೇ ಕೆಲಸಮಾಡುತ್ತಾ ಇತ್ತು. ಈಗ ಅದಕ್ಕೆ ಬೇರೆ ಕಾರಣಗಳಿಂದ ಪುನರ್ಜನ್ಮವನ್ನು ಕೊಟ್ಟಿದ್ದಾರೆ. ಬಹಳ ಸಂತೋಷದ ವಿಷಯ. ಇಡೀ ಇಂಡಿಯಾ ದೇಶದಲ್ಲಿ ಆ ರೀತಿಯಾದಂಥ 2-3 ಮಿಲ್ಲುಗಳಿವೆ. ರೇಷ್ಮೆ ಕಚ್ಚಾಮಾಲು ಇತ್ತೀಚೆಗೆ ಪರದೇಶಗಳಿಗೆ ಹೋಗುತ್ತಿದೆ. ಅಪೂರ್ಣವಾಗಿ ಇಲ್ಲಿ ಬಳಕೆಯಾಗಿರತಕ್ಕ ಕಚ್ಚಾಮಾಲನ್ನು ಪ್ರಪಂಚದ ಬೇರೆ ಬೇರೆ ಭಾಗಗಳಿಗೆ ಕಳುಹಿಸಿಕೊಡುವ ನೀತಿಯನ್ನು ಬೇಗ ಬದಲಾವಣೆಮಾಡಬೇಕಾದುದು ಸೂಕ್ತ. ಏನೇನು ನವೀನ ಮೆಷನರಿಗಳಿವೆಯೋ ಅವನ್ನು ನಾವು ಉಪಯೋಗಿಸದೆ ಹೋದರೆ ನಿಜವಾಗಿ ನಮಗೆ ನಷ್ಟ ಮತ್ತು ಅನ್ಯಾಯವಾಗುತ್ತದೆ. ಮನುಷ್ಯನಿಗೆ ಆಯಸ್ಸು ಪ್ರಮಾಣವಿರುವ ಹಾಗೆ ಆ ಮೆಷನರಿಗಳಿಗೂ ಅವುಗಳಿಂದ ಮಾಡತಕ್ಕ ಕೈಗಾರಿಕೆಗೂ ನೇರವಾದ ಸಂಬಂಧವಿರುತ್ತದೆ. ಆದ್ದರಿಂದ ಇದನ್ನು ಕೂಡಲೇ ಮಾಡುವುದು ಒಳ್ಳೆಯದು.

ಇನ್ನು ಕೋಲಾರ, ಬೆಂಗಳೂರು, ತುಮಕೂರು ಜಿಲ್ಲೆಗಳಲ್ಲಿ ದ್ರಾಕ್ಷಿ ಬೆಳೆ ಇದೆ. ಸುಮಾರು ಐದಾರು ವರ್ಷಗಳಿಂದ ಇದು ಮಿತಿಮೀರಿ ಬೆಳೆದಿದೆ. ಸುಮಾರು 10-12 ಸಾವಿರ ಎಕರೆಯಷ್ಟು ಭೂಮಿಯಲ್ಲಿ ಈ ಬೆಳೆಯನ್ನು ಬೆಳೆಯುತ್ತಿದ್ದಾರೆ. ಕೈಗಾರಿಕೆಯ ಮಂತ್ರಿಗಳು ನಮಗೆ ಈ ವಿಚಾರ ದಲ್ಲಿ ಸಾಕಾದಷ್ಟು ಆಶ್ವಾಸನೆಯನ್ನು ಕೊಟ್ಟಿದ್ದರೂ ಮೈಸೂರು ಫ್ರೂಟ್ ಪ್ರಾಡಕ್ಟ್ಸನ್ನು ಅಭಿವೃದ್ಧಿಗೆ ತರುವುದಕ್ಕೆ ಏನೇನು ಪ್ರಯತ್ನಗಳನ್ನು ಮಾಡುತ್ತಿದ್ದರೂ ಈ ಕೈಗಾರಿಕೆಯಲ್ಲಿ ಸಾಕಷ್ಟು ಪ್ರಗತಿಯನ್ನು ಮುಟ್ಟುವುದಕ್ಕೆ ಇದುವರೆಗೂ ಸಾಧ್ಯವಾಗಲಿಲ್ಲ. ಮೈಸೂರು ಫ್ರೂಟ್ ಪ್ರಾಡಕ್ಟ್ಸ ನಲ್ಲಿ ಹಣ್ಣಿನ ಕ್ಷೇತ್ರದಲ್ಲಿ ಕೆಲಸಮಾಡುವ ಕಿಸಾನ್ ಫ್ರೂಟ್ ಪ್ರಾಡಕ್ಟ್ಸನವರಷ್ಟು ಪ್ರಗತಿಯನ್ನು ಈ ಕೈಗಾರಿಕೆಯಲ್ಲಿ ಹೊಂದಿಲ್ಲ. ಈಗ ಈ ಬೆಳೆಗಾರರು ವೈನ್ ಮ್ಯಾನುಫ್ಯಾಕ್ಚರ್ ಮಾಡುವುದಕ್ಕೆ ಬೇಕಾದ ರೂಲ್ಸ್‌ಗಳನ್ನು ತಯಾರುಮಾಡಿದ್ದಾರೆ. ಈಗ ಅದಕ್ಕೆ ಅಪ್ಪಣೆ ಕೊಡಬಹುದೆಂದು ತೀರ್ಮಾನವನ್ನು ಮಾಡಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆ ವೈನನ್ನು ಎಲ್ಲಿಗೆ ಕಳುಹಿಸುತ್ತೀರಾ ?

ಶ್ರೀ ಕೆ. ವಿ. ಬೈರೇಗೌಡ.—ಆರೋಗ್ಯ ದೃಷ್ಟಿಯಿಂದ ಅದನ್ನು ಉಪಯೋಗಿಸುವುದರಲ್ಲಿ ಏನೂ ತೊಂದರೆಯಿಲ್ಲ. ಇದು ಮಕ್ಕಳ ಪದಾರ್ಥಗಳ ಜೊತೆಯಲ್ಲಿ ಸೇರಿಸುವ ಪದಾರ್ಥವಾಗಿಯೂ ಇರುತ್ತದೆ.

3-00 P. M.

ಮನುಷ್ಯನ ಆರೋಗ್ಯ ದೃಷ್ಟಿಯಿಂದ ಮತ್ತು ಆಹಾರ ದೃಷ್ಟಿಯಿಂದ ಇಂಥಾದ್ದನ್ನು ಒದಗಿಸು ವುದಕ್ಕೆ ಸಾಧ್ಯವಿದೆ. ಇವೊತ್ತಿನ ದಿವಸ ನಮ್ಮಲ್ಲಿ 10-12 ಸಾವಿರ ಎಕರೆ ಜಮೀನಿನಲ್ಲಿ ದ್ರಾಕ್ಷಿ ಹಣ್ಣನ್ನು ಬೆಳೆಯುತ್ತಿದ್ದಾರೆ. ಆದರೆ ಇದರ ಪರಿಸ್ಥಿತಿ ಏನಾಗಿದೆ ಎಂದರೆ, ಈಗ ದ್ರಾಕ್ಷಿಹಣ್ಣಿನ ಬೆಲೆ ಬಹಳ ಕಡಿಮೆಯಾಗಿರುವುದರಿಂದ ಅದನ್ನು ತೆಗೆಯತಕ್ಕ ಒಂದು ಪರಿಸ್ಥಿತಿ ಬಂದಿದೆ. ಈಗ ನಮ್ಮಲ್ಲಿ ಬೆಳೆಯತಕ್ಕಂಥ ದ್ರಾಕ್ಷಿಹಣ್ಣು ಏನಿದೆ ಇದರಲ್ಲಿ ಒಳ್ಳೆಯ ಅತ್ಯುತ್ತಮವಾದ ವೈನ್‌ಅನ್ನು ತಯಾರು ಮಾಡಬಹುದು ಎಂದು ಫ್ರೂಟ್ ರೀಸರ್ಚ್ ಸಂಸ್ಥೆಯವರು ಅಭಿಪ್ರಾಯಪಟ್ಟಿದ್ದಾರೆ. ನಮ್ಮ ಬೆಂಗಳೂರಿನ ಸುತ್ತ ಮುತ್ತ ಬೆಳೆಯತಕ್ಕಂಥ ದ್ರಾಕ್ಷಿ ಹಣ್ಣಿಗೆ ಒಂದು ಎಕರೆಗೆ 500 ರೂಪಾಯಿ ಆದಾಯ ಬರುವುದು ಹೆಚ್ಚು. ಈ ದೃಷ್ಟಿಯಿಂದ ದ್ರಾಕ್ಷಿ ಬೆಳೆಯನ್ನು ಬೆಳೆಯತಕ್ಕ ರೈತರಿಗೆ ಯೋಗ್ಯ ಬೆಲೆಯನ್ನು ಕೊಡುವ ದೃಷ್ಟಿಯಿಂದಲೂ ಮತ್ತು ಬೆಂಗಳೂರಿನಲ್ಲಿ ಒಂದು ವೈನ್ ಕಾರ್ಖಾನೆಯನ್ನು ಸ್ಥಾಪನೆ ಮಾಡುವುದಾದರೆ ಅದಕ್ಕೆ ಉತ್ತಮವಾದ ಭವಿಷ್ಯವಿರುವುದರಿಂದಲೂ ಈ ಕಾರ್ಖಾನೆ ಯನ್ನು ಕೈಗಾರಿಕಾ ಇಲಾಖೆಯವರಾಗಲೀ ಅಥವಾ ಖಾಸಗೀಯವರಾಗಲೀ ಸ್ಥಾಪನೆಮಾಡು ವುದಕ್ಕೆ ಏರ್ಪಾಡು ಮಾಡದೆ ಹೋದರೆ ದ್ರಾಕ್ಷಿಹಣ್ಣನ್ನು ಬೆಳೆಯತಕ್ಕ ಕಸುಬು ಹಾಳಾಗುತ್ತದೆ. ಮತ್ತು ರೈತರಿಗೂ ತೊಂದರೆಯಾಗುತ್ತದೆ. ಆದ್ದರಿಂದ ಸರ್ಕಾರದವರು ಬೇರೆ ಯಾವುದಾದರೂ ದೇಶದಲ್ಲಿರುವ ಕಂಪೆನಿಯ ಕೊಲ್ಯಾಬರೇಷನ್ ತೆಗೆದುಕೊಂಡು ಬೆಂಗಳೂರಿನಲ್ಲಿ ಒಂದು ವೈನ್ ಕಾರ್ಖಾನೆಯೊಂದನ್ನು ಸ್ಥಾಪನೆಮಾಡಿ ರೈತರು ದ್ರಾಕ್ಷಿ ಹಣ್ಣನ್ನು ಬೆಳೆಯುವುದಕ್ಕೆ ಸಾಕಷ್ಟು ಪ್ರೋತ್ಸಾಹವನ್ನು ಕೊಟ್ಟು ಅವರಿಗೆ ಒಂದು ಶಕ್ತಿಯನ್ನು ಕೊಡಬೇಕೆಂದು ನಾನು ಪ್ರಾರ್ಥನೆಮಾಡಿ ಕೊಳ್ಳುತ್ತೇನೆ.

(ಶ್ರೀ ಕೆ. ವಿ. ಬೈರೇಗೌಡ)

ನಮ್ಮ ದೇಶದಲ್ಲಿ ಅರಣ್ಯ ಸಂಪತ್ತೇನು ಇದೆ ಅದನ್ನು ಸಾಕಷ್ಟು ರೀತಿಯಲ್ಲಿ ಉಪಯೋಗ ಮಾಡಿಕೊಳ್ಳುತ್ತಿಲ್ಲ ಎಂದು ಶ್ರೀಮಾನ್ ಶಿವಪ್ಪನವರು ಹೇಳಿದರು. ನಮ್ಮ ದೇಶಕ್ಕೆ ಹೊರಗಡೆಯಿಂದ ಕಾಗದವನ್ನು ತರಿಸಿ ಕೊಳ್ಳುತ್ತಿದ್ದಾರೆ. ನಮ್ಮ ದೇಶದಲ್ಲಿರತಕ್ಕ ಅರಣ್ಯದಲ್ಲಿ ಬೇಕಾದಷ್ಟು ರಾ ಮೆಟೀರಿಯಲ್ಸ್ ಇರುವಾಗ ಅದನ್ನು ಉಪಯೋಗಿಸಿ ಕೊಂಡು ನಮ್ಮ ದೇಶದಲ್ಲಿಯೇ ಕಾಗದವನ್ನು ಬೇಕಾದಷ್ಟು ತಯಾರು ಮಾಡುವುದಕ್ಕೆ ಅವಕಾಶವಿರುವಾಗ ಬೇರೆ ದೇಶದಿಂದ ಏತಕ್ಕೆ ಕಾಗದವನ್ನು ತರಿಸಬೇಕು ? ನಮ್ಮ ದೇಶದ ಅರಣ್ಯದಲ್ಲಿ ಸಿಕ್ಕತಕ್ಕಂಥ ರಾ ಮೆಟೀರಿಯಲ್ಸ್ ಅನ್ನು ಉಪಯೋಗಿಸಿ ಕೊಂಡು ಕಾಗದವನ್ನು ತಯಾರು ಮಾಡುವುದಕ್ಕೆ ಕಾರ್ಖಾನೆಯನ್ನು ಸ್ಥಾಪನೆಮಾಡಬೇಕು. ಒಂದು ವೇಳೆ ಸರ್ಕಾರದವರು ಅದನ್ನು ಸ್ಥಾಪನೆ ಮಾಡುವುದಕ್ಕೆ ಸಾಧ್ಯವಿಲ್ಲವಿದ್ದರೆ ಖಾಸಗಿಯವರಿಗೆ ಲೈಸೆನ್ಸ್ ಕೊಟ್ಟು ಅವರ ಮೂಲಕವಾದರೂ ಕಾಗದದ ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನೊಂದು ವಿಷಯ. ಈಗ ನಮ್ಮ ದೇಶದಲ್ಲಿ ಸಿಕ್ಕತಕ್ಕಂಥ ಕಬ್ಬಿಣದ ಅದುರು ಏನಿದೆಯೋ ಅವರಲ್ಲಿ ಹೆಚ್ಚಿನ ಪರ್ಸೆಂಟೇಜಿನ ಕಬ್ಬಿಣ ಇದೆಯೆಂದು ಹೇಳುತ್ತಾರೆ. ನಮ್ಮ ದೇಶದಿಂದ ಲಕ್ಷಾಂತರ ರೂಪಾಯಿಗಳ ಕಬ್ಬಿಣದ ಅದುರು ಹೊರ ದೇಶಕ್ಕೆ ಹೋಗುತ್ತದೆ. ಆದರೆ ನಮ್ಮ ದೇಶದವರು ಹೊರದೇಶಗಳಿಂದ ಕಬ್ಬಿಣದ ಸಾಮಾನುಗಳನ್ನು ತರಿಸಿಕೊಳ್ಳುತ್ತಿದ್ದಾರೆ. ನಮ್ಮ ರೈತರು ಹೊರ ದೇಶದ ಕಬ್ಬಿಣದ ಸಾಮಾನುಗಳನ್ನು ಕೊಂಡುಕೊಂಡು ವ್ಯವಸಾಯ ಮಾಡಿ ಜೀವನ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ. ನಮ್ಮ ದೇಶದಲ್ಲಿ ಸಾಕಷ್ಟು ಅನುಭವಶಾಲಿಗಳು ಇದ್ದಾರೆ. ಮತ್ತು ಸಾಕಷ್ಟು ರಾ ಮೆಟೀರಿಯಲ್ಸ್ ಇದೆ. ಹೀಗಿರುವಾಗ ನಮ್ಮ ದೇಶದಲ್ಲಿ ಒಂದೆರಡು ಕಬ್ಬಿಣದ ಕಾರ್ಖಾನೆಗಳನ್ನು ಸ್ಥಾಪನೆಮಾಡಿ ಉತ್ತಮವಾದ ಪದಾರ್ಥಗಳನ್ನು ತಯಾರುಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಈಗ ನಮ್ಮ ದೇಶದಲ್ಲಿರತಕ್ಕ ಕಬ್ಬಿಣದ ಕಾರ್ಖಾನೆಗಳಲ್ಲಿ ಕೆಲವು ಕಬ್ಬಿಣದ ಸಾಮಾನುಗಳು ತಯಾರಾದರೂ ಕೂಡ ವ್ಯವಸಾಯಗಾರರಿಗೆ ಆಗಿಂದಾಗ್ಗೆ ಬೇಕಾದ ಸಾಮಾನುಗಳು ಸಿಕ್ಕದೆ ತೊಂದರೆಯಾಗುತ್ತಿದೆ. ಕೆಲವು ಸೊಸೈಟಿಗಳಲ್ಲಿ ಸಾಕಷ್ಟು ಕಬ್ಬಿಣದ ಸ್ಟಾಕು ಬಿದ್ದಿರುತ್ತದೆ. ಆದರೆ ರೈತರಿಗೆ ಬೇಕಾದಂತಹ ಪದಾರ್ಥಗಳು, ಜಿಂಕ್‌ಷೀಟುಗಳು, ಕಬ್ಬಿಣದ ಕಂಬಿಗಳು ಮುಂತಾದುವುಗಳು ಸಿಕ್ಕುವುದಿಲ್ಲ. ಆದ್ದರಿಂದ ಬ್ಲಾಕ್ ಮಾರ್ಕೆಟ್ಟಿನಲ್ಲಿ ರೈತ ತನಗೆ ಬೇಕಾದ ಕಬ್ಬಿಣದ ಸಾಮಾನುಗಳು ಮತ್ತು ಮುಳ್ಳು ತಂತಿಯನ್ನು ಮತ್ತು ಕಂಬಿಯನ್ನು ಕೊಂಡುಕೊಂಡು ಬರುತ್ತಾನೆ. ರೈತರಿಗೆ ಬೇಕಾದಂತಹ ಸಾಮಾನುಗಳನ್ನು ನಮ್ಮ ಕಾರ್ಖಾನೆಗಳಲ್ಲಿ ತಯಾರು ಮಾಡುವುದಕ್ಕೆ ಏನು ಟೆಕ್ನಿಕಲ್ ಡಿಫಿಕಲ್ಟಿ ಇದೆ ಎಂಬುದು ನನಗೆ ಗೊತ್ತಿಲ್ಲ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಪರಿಶೀಲನೆ ಮಾಡಿ ವ್ಯವಸಾಯಗಾರರಿಗೆ ಬೇಕಾದ ಕಬ್ಬಿಣದ ಸಾಮಾನುಗಳು ಮುಳ್ಳು ತಂತಿ ಮತ್ತು ಜಿಂಕ್ ಷೀಟುಗಳು ದೊರೆಯುವಂತೆ ಏರ್ಪಾಡು ಮಾಡ ಬೇಕು. ಮತ್ತು ಎಷ್ಟೋ ಜನ ಕಾರ್ಮಿಕರಿಗೆ ಜಿಂಕ್ ಷೀಟುಗಳು ಸಿಕ್ಕದೆ ಅವರು ತೊಂದರೆ ಪಡುತ್ತಿದ್ದಾರೆ. ಅವರಿಗೂ ಸಹ ಅದು ದೊರೆಯುವಂತೆ ಏರ್ಪಾಡು ಮಾಡಬೇಕು. ಈಗ ಎಷ್ಟೋ ಸೊಸೈಟಿಗಳಲ್ಲಿ ಅನೇಕ ಕಬ್ಬಿಣದ ಸಾಮಾನುಗಳು ಡೆಡ್‌ಸ್ಟಾಕ್ ಆಗಿ ಬಿದ್ದಿರುತ್ತವೆ. ಆದರೆ ರೈತರ ಉಪಯೋಗಕ್ಕೆ ಬೇಕಾದಂತಹ ಸಾಮಾನುಗಳು ದೊರೆಯುತ್ತಿಲ್ಲ. ಆದ್ದರಿಂದ ಸರ್ಕಾರದವರು ರೈತರಿಗೆ ವ್ಯವಸಾಯಕ್ಕೆ ಅಗತ್ಯವಾಗಿ ಏನೇನು ಸಾಮಾನುಗಳು ಬೇಕೋ ಅಂಥವುಗಳನ್ನು ಒದಗಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ನಾನು ಈ ಸಮಯದಲ್ಲಿ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ.

ಆ ಮೇಲೆ ಇನ್ನೊಂದು ವಿಷಯ. ಎನ್. ಇ. ಎಸ್. ಬ್ಲಾಕುಗಳು ಬಂದ ಮೇಲೆ ಪ್ರತಿಯೊಂದು ಬ್ಲಾಕಿನಲ್ಲಿಯೂ ಇಂಡಸ್ಟ್ರಿಯಲ್ ಎಕ್ಸ್‌ಟೆನ್‌ಷನ್ ಆಫೀಸರನ್ನು ಇಟ್ಟಿದ್ದಾರೆ. ನಾನು ನಿಜಾಂಶವನ್ನು ಹೇಳಬೇಕಾದರೆ ಈಗ 10 ವರ್ಷಗಳಿಂದಲೂ ಕೂಡ ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ಹೊಸ ಕೈಗಾರಿಕೆಗಳೂ ಆಗಿಲ್ಲ. ಹಿಂದೆ ಎಷ್ಟಿತ್ತೋ ಈಗಲೂ ಅಷ್ಟೇ ಇದೆ. ಎಕ್ಸ್‌ಟೆನ್‌ಷನ್ ಆಫೀಸರಿಗೆ ಸುಮ್ಮನೆ ಸಂಬಳ ಕೊಟ್ಟು ಅವರು ಯಾವ ಕೆಲಸವನ್ನೂ ಮಾಡದೆ ಇದ್ದರೆ ಏನು ಪ್ರಯೋಜನ ? ಗ್ರಾಮಾಂತರಗಳಲ್ಲಿ ಅಕ್ಕಸಾಲಿಗರು ಮತ್ತು ಕುಂಬಾರರು ಏನು ಕೈಗಾರಿಕೆಯನ್ನು ಮಾಡುತ್ತಾರೆಯೋ ಆ ಒಂದು ಅಂಕಿ ಅಂಶಗಳನ್ನು ಕೊಡುವುದು ಸರಿಯಾದುದಲ್ಲ. ದೇಶದ ಅಭ್ಯುದಯವಾಗ ಬೇಕಾದರೆ ಕೈಗಾರಿಕೆಗಳ ಬೆಳವಣಿಗೆಗೆ ನಾವು ಹೆಚ್ಚು ಮಹತ್ವವನ್ನು ಕೊಡ ಬೇಕಾಗುತ್ತದೆ. ಈ ದೃಷ್ಟಿಯಿಂದ ನಾವು ಗ್ರಾಮಾಂತರ ಪ್ರದೇಶದಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಮತ್ತು ಈಗ ಹಾಲಿ ಎಲ್ಲೆಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳಿವೆಯೋ ಅವುಗಳು ಇನ್ನೂ ಹೆಚ್ಚು ಬೆಳೆಯುವಂತೆ ಮಾಡಬೇಕು. ಎಕ್ಸ್‌ಟೆನ್‌ಷನ್ ಆಫೀಸರಿಗೆ ಸುಮ್ಮನೆ ಸಂಬಳ ಕೊಟ್ಟು ಅವರು ಗ್ರಾಮಾಂತರ ಪ್ರದೇಶಗಳಲ್ಲಿ

ಕೈಗಾರಿಕೆಯನ್ನು ಅಭಿವೃದ್ಧಿ ಮಾಡುವ ವಿಷಯದಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸದೇ ಯಾವುದೋ ಅಂಕಿ ಅಂಶಗಳನ್ನು ಕೊಡತಕ್ಕದ್ದು ಸರಿಯಾದ್ದಲ್ಲ. ವಿದ್ಯಾವಂತರಾಗಿರತಕ್ಕ ಜನ ಹಳ್ಳಿಗಾಡುಗಳಲ್ಲಿ ನಿಲ್ಲ ಬೇಕಾದರೆ ಉತ್ತಮವಾದ ಕೈಗಾರಿಕೆಗಳನ್ನು ಅಲ್ಲಿ ಸ್ಥಾಪನೆ ಮಾಡಬೇಕು ಅವರಿಗೆ ಅಲ್ಲಿ ಉದ್ಯೋಗ ದೊರೆಯುವಂತೆ ಮಾಡಬೇಕು. ಇಲ್ಲದೇ ಹೋದರೆ ಆ ಜನಗಳು ಅಲ್ಲಿ ಇರುವುದಕ್ಕೆ ಸಾಧ್ಯವಿಲ್ಲ. ಯಾರಾದರೂ ತಜ್ಞರು ಮತ್ತು ಹಣ ಇರತಕ್ಕವರು ನಮ್ಮ ದೇಶದಲ್ಲಿ ಕೈಗಾರಿಕೆಯನ್ನು ಸ್ಥಾಪನೆಮಾಡುತ್ತೇವೆಂದು ಬಂದರೆ ಅವರಿಗೆ ಪ್ರೋತ್ಸಾಹ ಕೊಡಬೇಕು. ನಮ್ಮ ಸ್ನೇಹಿತರು ಹೇಳಿದರು ಮದ್ರಾಸು ಮತ್ತು ಪಂಜಾಬು ಮುಂತಾದ ಕಡೆಗಳಲ್ಲಿ ಕೈಗಾರಿಕೆಗಳು ಬಹಳ ಮಟ್ಟಿಗೆ ಮುಂದುವರಿದಿವೆ, ಅದರೂ ಸಹ ಅಲ್ಲಿ ಯಾರಾದರೂ ಕೈಗಾರಿಕೆಗಳನ್ನು ಸ್ಥಾಪನೆಮಾಡುತ್ತೇವೆಂದು ಮುಂದೆ ಬಂದರೆ ಅವರಿಗೆ ಅವಕಾಶ ಕೊಟ್ಟು ಅವರಿಗೆ ಸೌಲಭ್ಯವನ್ನು ಕೊಟ್ಟು ಅವುಗಳನ್ನು ಸ್ಥಾಪಿಸುವುದಕ್ಕೆ ಪ್ರೋತ್ಸಾಹ ಕೊಡುತ್ತಾರೆಯೇ ವಿನಹ ಅವುಗಳನ್ನು ಈಚೆಗೆ ಬಿಟ್ಟುಕೊಡುವುದಿಲ್ಲ ಎಂದು. ಅದಕ್ಕೋಸ್ಕರ ಹಣ ಇರತಕ್ಕ ಜನ ಯಾರಾದರೂ ನಮ್ಮ ದೇಶದಲ್ಲಿ ಯಾವುದಾದರೂ ಕೈಗಾರಿಕೆಯನ್ನು ಸ್ಥಾಪನೆ ಮಾಡುತ್ತೇವೆಂದು ಮುಂದೆ ಬಂದರೆ ಅವರಿಗೆ ಬೇಕಾದ ಸೌಲಭ್ಯವನ್ನು ಸರ್ಕಾರದವರು ಒದಗಿಸುವುದಕ್ಕೆ ಏರ್ಪಾಡು ಮಾಡಬೇಕು. ಇಲ್ಲದೆ ಹೋದರೆ ನಮ್ಮ ದೇಶಕ್ಕೆ ಬರತಕ್ಕಂಥ ಕೈಗಾರಿಕೆಗಳು ಬೇರೆ ಕಡೆಗೆ ಹೋಗುತ್ತವೆ. ಈ ದೃಷ್ಟಿಯಿಂದ ಸರ್ಕಾರದವರು ನಮ್ಮ ದೇಶದಲ್ಲಿ ಕೈಗಾರಿಕೆಗಳಿಗೆ ಹೆಚ್ಚು ಪ್ರೋತ್ಸಾಹವನ್ನು ಕೊಡಬೇಕು. ಮತ್ತು ಕೈಗಾರಿಕೆಗಳಿಗೆ ಬೇಕಾದ ವಿದ್ಯುಚ್ಛಕ್ತಿಯನ್ನು ಸಹ ಒದಗಿಸುವುದಕ್ಕೆ ಏರ್ಪಾಡು ಮಾಡಬೇಕು. ನಮ್ಮಲ್ಲಿ ಕೈಗಾರಿಕಾ ಇಲಾಖೆಯಲ್ಲಿ ಇರತಕ್ಕ ತಜ್ಞರು ಯೋಗ್ಯವಾದ ರೀತಿಯಲ್ಲಿ ನಮ್ಮ ದೇಶದ ಕೈಗಾರಿಕೆ ಬೆಳೆಯುವ ಹಾಗೆ ಮಾಡಬೇಕು. ನಮ್ಮ ದೇಶದ ಜನ ವಿದ್ಯಾವಂತರಾದ ಜನ ಹೆಚ್ಚು ಹೆಚ್ಚಾಗಿ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಹಾಗೆ ಮಾಡಿದರೆ ನಮ್ಮ ದೇಶದ ಜನತೆಯ ಜೀವನ ಉತ್ತಮವಾಗುತ್ತದೆ. ಈ ದೃಷ್ಟಿಯಿಂದ ನಮ್ಮ ಸರ್ಕಾರದವರು ನಮ್ಮ ದೇಶದಲ್ಲಿ ಈಗಿರತಕ್ಕ ಕೈಗಾರಿಕೆಗಳನ್ನು ಇಮ್ಮಡಿ ಮಾಡಿ ಅವು ಬೆಳೆಯುವುದಕ್ಕೆ ಅವಕಾಶವನ್ನು ಮಾಡಿ ಕೊಡಬೇಕು ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಅಧ್ಯಕ್ಷಿಣಿಯವರೇ, ಮೈಸೂರು ರಾಜ್ಯದ ಕೈಗಾರಿಕಾ ಪ್ರಪಂಚ ಕಾರ್ಗತ್ತಲೆಯಿಂದ ಕೂಡಿದೆ. 1956ನೇ ಇಸವಿ ಒಂದನೆ ತಾರೀಖು ನಾವು ಎಲ್ಲಿದ್ದೆವೋ, ಈ ಕೈಗಾರಿಕಾ ಪ್ರಪಂಚದಲ್ಲಿ, ಅಲ್ಲಿಯೇ ಇದ್ದೇವೆ. ಮೂರು ಪಂಚವಾರ್ಷಿಕ ಯೋಜನೆಗಳನ್ನು ಮಾಡಿ ಅದು ಮುಗಿಯುವ ಹೊತ್ತಿಗೂ ಕೂಡ ಯಾವ ರಾಜ್ಯ ಕೈಗಾರಿಕೆಗೆ ಹೆಸರುವಾಸಿ ಯಾಗಿತ್ತೋ ಆ ರಾಜ್ಯ ಕೈಗಾರಿಕಾ ಭೂಪಟದಿಂದ ಅಳಿಸಿ ಹೋಗುತ್ತದೆ. 1956ಕ್ಕೆ ಮುಂಚೆ ದಿವಾನರುಗಳು, ಮಹಾರಾಜರುಗಳು ಏನು ಕೈಗಾರಿಕೆಯನ್ನು ಈ ರಾಜ್ಯದಲ್ಲಿ ಸ್ಥಾಪನೆ ಮಾಡಿದ್ದರೋ ಅದನ್ನು ಬಿಟ್ಟರೆ ಇವತ್ತು ಹೊಸದಾಗಿ ಮಾಡಿರುವ ಎಲೆಕ್ಟ್ರಿಕ್ ಕಾರ್ಖಾನೆಯನ್ನು ಬಿಟ್ಟರೆ 17 ವರ್ಷಗಳ ಕಾಲ ರಾಜ್ಯಭಾರ ಮಾಡಿದಂಥ ಈ ಸರ್ಕಾರ ಯಾವುದೇ ಒಂದು ಹೊಸ ಕೈಗಾರಿಕೆಯನ್ನು ಮಾಡುವುದಕ್ಕೂ ಮನಸ್ಸು ಮಾಡಲಿಲ್ಲವಲ್ಲ ಎಂದು ವ್ಯಸನವಾಗುತ್ತದೆ. ಈ ಸರ್ಕಾರದವರು ಕೈಗಾರಿಕಾ ಕ್ಷೇತ್ರದಲ್ಲಿ ವಿಫಲರಾಗಿದ್ದಾರೆ ಎಂದು ಈ ಸಭೆಯಲ್ಲಿ ಹೇಳಬೇಕಾಗಿದೆ. ಶ್ರೀಮತಿ ನಾಗರತ್ನಮ್ಮನವರು ಮಾತನಾಡುತ್ತ ಹೇಳಿದರು, ಯಾವ ರಾಜ್ಯದಲ್ಲಿ ವ್ಯವಸಾಯ, ಕೈಗಾರಿಕೆ ಮತ್ತು ವಿದ್ಯಾಭ್ಯಾಸ ಇವು ಮೂರು ಹಿಂದುಳಿದಿವೆಯೋ ಆ ರಾಜ್ಯಗಳಿಗೆ ಮೋಕ್ಷವಿಲ್ಲ ಎಂದು. ಯಾವ ರಾಜ್ಯದಲ್ಲಿ ಇವು ಮೂರೂ ಚೆನ್ನಾಗಿ ಬೆಳೆದು ಬಂದಿವೆಯೋ ಅವು ಇವತ್ತಿನ ದಿವಸ ಸುಖವಾಗಿವೆ. ಅದಕ್ಕೋಸ್ಕರವಾಗಿ ಈ ಸಭೆಯು, ಈ ನಾಡಿನ ಜನತೆಯ ಮೆಚ್ಚುಗೆಗೆ ಪಾತ್ರವಾಗುವುದಕ್ಕೆ ಈ ಸರ್ಕಾರ ಅರ್ಹವಾಗಿಲ್ಲ ಎಂದು ನಾನು ಹೇಳಬೇಕಾದಂಥ ಸಂದರ್ಭ ಒದಗಿದೆ. ಇವತ್ತಿನ ದಿವಸ ನಮ್ಮಲ್ಲಿ ಸ್ಥಾಪನೆಯಾಗಿರತಕ್ಕ ಕೈಗಾರಿಕೆಗಳೆಷ್ಟು, ಕೈಗಾರಿಕೆಗಳಲ್ಲಿ ಎಷ್ಟು ಜನ ನಮ್ಮವರು ಕೆಲಸ ಮಾಡುತ್ತಿದ್ದಾರೆ, ಅದರಲ್ಲಿ ಹಾಕಿರತಕ್ಕ ಬಂಡವಾಳವೇನು, ಆ ಬಂಡವಾಳದಿಂದ ನಾವು ನಿರೀಕ್ಷಿಸುತ್ತಿರುವ ಫಲವೆಷ್ಟು, ಎಷ್ಟು ಪ್ರತಿಫಲ ಬಂದಿವೆ, ಈ ದೇಶದ ಕಲ್ಯಾಣಕ್ಕೋಸ್ಕರ, ಅಭಿವೃದ್ಧಿಗೋಸ್ಕರ ಖರ್ಚು ಮಾಡುವುದಕ್ಕೆ ಮೀಸಲಿಟ್ಟಿರುವ ಹಣ ಎಷ್ಟು ಎಂಬುದನ್ನೆಲ್ಲ ಕೊಟ್ಟಿದ್ದರೆ ಹಣಕಾಸಿನ ಚಿತ್ರವನ್ನು ಬಹಳ ಸರಿಯಾಗಿ ತುಲನೆ ಮಾಡುವುದಕ್ಕೆ, ಅವಕಾಶವಾಗುತ್ತಿತ್ತು. ನಮ್ಮ ಕೈಗಾರಿಕೆಗಳು ಪ್ರಪಂಚದಲ್ಲಿ ಬಹಳ ಮುಂದುವರಿದಿದ್ದೇವೆಯೇ ಎಂದು ನಮಗೆ ಕೊಟ್ಟಿರತಕ್ಕ ಈ ಬಡ್ಜೆಟ್ಟಿನ ಮೆಮೊರಾಂಡಂ ಮತ್ತು ಬಡ್ಜೆಟ್ ಎಸ್ಟಿಮೇಟುಗಳನ್ನು ನೋಡಿದರೆ ಯಾರಾದರೂ ಹಣಕಾಸಿನ ಸಚಿವರಿಗೆ ಶಾಪ ಹಾಕಿ ಕೈಗಾರಿಕಾ ಸಚಿವರು ಇಲ್ಲಿರುವುದಕ್ಕೆ ಲಾಯಖ್ ಇಲ್ಲ ಎಂದು ಹೇಳುವುದಕ್ಕೆ ಅವಕಾಶವಾಗುವಂತೆ ಇದೆ. ಇದನ್ನೆಲ್ಲ ಏಕೆ ಹೇಳುತ್ತಿದ್ದೇನೆಂದರೆ ಈ ರಾಜ್ಯದಲ್ಲಿ ಕೆರೆ ಕಟ್ಟಿದ್ದೇವೆ, ರಸ್ತೆ ಮಾಡಿದ್ದೇವೆ, ರೈಲು ಹಾಕಿದ್ದೇವೆ, ಏರೋಪ್ಲೇನ್ ಬರುತ್ತದೆ, ಡೈರೆಕ್ಟರುಗಳನ್ನು ನೇಮಕ ಮಾಡಿದ್ದೇವೆ, ಅಸಿಸ್ಟೆಂಟ್ ಡೈರೆಕ್ಟರ್, ಜಾಯಿಂಟ್ ಡೈರೆಕ್ಟರ್, ಹೀಗೆ ಕೈಗಾರಿಕಾ ಇಲಾಖೆಯಲ್ಲಿ ನೇಮಕಗಳನ್ನು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಮಾಡಿದ್ದೇವೆ ಎಂದು ಉದ್ದಕ್ಕೆ ಒಂದು ಪಟ್ಟಿಯನ್ನು ಕೊಡುತ್ತಾರೆ. ಈ ಇಲಾಖೆಗೆ ಕೊಡತಕ್ಕ ಹಣವೆಲ್ಲ ಬರೀ ಅಧಿಕಾರಿಗಳ ಸಂಬಳ ಸಾರಿಗೆಗಳಿಗೆ ಆಗುವುದಾದರೆ ನಾವು ಮಾಡುವ ಕಾರ್ಯ ಸಾಧನೆಯಾದರೂ ಏನು ಎಂದು ಸರ್ಕಾರವನ್ನು ಕೇಳುತ್ತೇನೆ. ಕೈಗಾರಿಕಾ ಪ್ರಪಂಚದಲ್ಲಿ ಅಭಿವೃದ್ಧಿ ಯಾಗುತ್ತಾ ಇಲ್ಲ. ಇಲ್ಲಿಯೂ ಕೂಡ ಇವತ್ತು ಜಾತೀಯ ಪೆಡಂಭೂತ ನಾಟ್ಯ ಮಾಡುವುದಕ್ಕೆ ಪ್ರಾರಂಭ ಮಾಡಿದೆ. ಒಬ್ಬ ಲಿಂಗಾಯುತ, ಒಬ್ಬ ಮುಸಲ್ಮಾನ್, ಒಬ್ಬ ಬ್ರಾಹ್ಮಣ ಹೀಗೆ ಹೇಳುತ್ತ ಜಾತೀಯತೆ ಬಂದಿದೆ. ಹೀಗಾದರೆ ಈ ದೇಶದಲ್ಲಿ ಕೈಗಾರಿಕೆಯಿಂದ ಉತ್ಪತ್ತಿ ಜಾಸ್ತಿ ಮಾಡಿ ದೇಶದ ಜನತೆಯ ಕಲ್ಯಾಣವನ್ನು ಸಾಧಿಸುವುದಕ್ಕೆ ಆಗುತ್ತದೆಯೇ ? ಯಾವುದರಿಂದ ಹಣವನ್ನು ನಿರೀಕ್ಷೆ ಮಾಡಬಹುದೋ ಅಂಥ ಕೈಗಾರಿಕೆಯಲ್ಲಿ ಇವತ್ತು ಈ ಮೂರು ಭೂತಗಳೂ ಕುಣಿದಾಡು ತ್ತಿವೆ. ಮೈಸೂರು ರಾಜ್ಯದಲ್ಲಿ ಎಲ್ಲೆಲ್ಲಿಯೂ ಇದು ಹೆಚ್ಚಾಗುತ್ತಿದೆ. ಹೀಗಾದರೆ ಯಾವ ರೀತಿ ಯಲ್ಲಿ ನಮ್ಮ ರಾಜ್ಯವನ್ನು ಕಲ್ಯಾಣ ರಾಜ್ಯವಾಗಿ ಮಾಡುತ್ತೀರಿ, ಸುಖೀ ರಾಜ್ಯವಾಗಿ ಮಾಡುತ್ತೀರಿ, ಡೆಮೊಕ್ರಾಟಿಕ್ ಸೋಷಿಯಲಿಸಂ ಎಂದು ಏನು ಹೇಳುತ್ತೀರಿ ಅದನ್ನು ಹೇಗೆ ಗಳಿಸುತ್ತೀರಿ ಎಂದು ಕೇಳುತ್ತೇನೆ. ನಮಗೆ ಕೊಟ್ಟಿರತಕ್ಕ ಬಡ್ಜೆಟ್ ಮೆಮೊರಾಂಡಂನಲ್ಲಿ ಮೈಸೂರು ರಾಜ್ಯದಲ್ಲಿ 15 ಕೈಗಾರಿಕೆಗಳಿವೆ ಎಂದು ಹೇಳಿದ್ದಾರೆ. ಇದರಲ್ಲಿ ಯಾವ ಯಾವ ಕೈಗಾರಿಕೆಯಲ್ಲಿ ಎಷ್ಟೆಷ್ಟು ಹಣವನ್ನು ಹಾಕಿದ್ದೀರಿ, ಆ ಹಣಕ್ಕೆ ಎಷ್ಟು ಪ್ರತಿಫಲ ಬಂದಿದೆ ಎನ್ನುವುದಕ್ಕೆ ಒಂದು ಬ್ಯಾಲೆನ್ಸ್ ಷೀಟ್ ಸಹ ನಮ್ಮ ಹತ್ತಿರ ಇಲ್ಲ. ಕ್ಯಾಪಿಟಲ್ ಔಟ್ ಲೇ ಎಷ್ಟು, ಲಾಭ ಎಷ್ಟು ಬಂದಿದೆ, ಎಷ್ಟು ಜನಗಳಿಗೆ ಕೆಲಸ ಸಿಕ್ಕಿದೆ ಇದನ್ನೆಲ್ಲ ಒದಗಿಸದೆ ಇರುವುದರಿಂದ, 'ಕುರಡ ಇಟ್ಟ, ಮೂಗ ಊಟ ಮಾಡಿದ' ಎನ್ನುವಂತಾಗಿದೆ.

(1) Government Sandal Oil Factory, (2) Central Industrial Workshop, (3) Government Soap Factory, (4) Government Porcelain-Factory, (5) Government Silk Weaving Factory, Mysore, (6) Government Electric Factory, (7) Mysore Implements Factory, Hassan, (8) Government Silk Filatures at Kanakapura, Mysore and Kollegal, (9) Board of Mineral Development, (10) Government Spun Silk Mills, Channapatna, (11) Government Central Workshop, Mercara, (12) Sri Chamarajendra Technical Institute Arts and Crafts Show Rooms, Mysore, (13) Arts and Craft Emporium, Bangalore, (14) New Government Electric Factory, (15) Handicrafts Emporium, Mangalore, ಈ 15 ಕೈಗಾರಿಕೆಗಳಲ್ಲಿ ತಾವು ಹಾಕಿರುವ ಬಂಡವಾಳ ಎಷ್ಟು, ಅದಕ್ಕೆ ಬಂದಂಥ ಪ್ರತಿಫಲವೇನು ಎಂಬ ವಿಚಾರಗಳನ್ನೊಳಗೊಂಡ ಸ್ಟೇಟ್‌ ಮೆಂಟ್‌ಗಳನ್ನು ನಮಗೆ ಕೊಟ್ಟಿದ್ದರೆ ಚೆನ್ನಾಗಿತ್ತು. ಆದರೆ ಸರ್ಕಾರ ಯಾವ ಮಾಹಿತಿಯನ್ನೂ ನಮಗೆ ಒದಗಿಸಿಲ್ಲ. ಬಡ್ಜೆಟ್‌ನಲ್ಲಿ ಸುಂಕ, ಸಾರಿಗೆ, ಭೂ ಕಂದಾಯ, ಬೆಟರ್‌ಮೆಂಟ್ ಲೆವಿ ಸ್ಪೆಷಲ್ ಬೆಟರ್‌ಮೆಂಟ್ ಲೆವಿ, ಮತ್ತೊಂದು ಲೆವಿ ಇವುಗಳನ್ನೆಲ್ಲ ತೋರಿಸಿದ್ದಾರೆ. ಆದರೆ ಕೈಗಾರಿಕಾ ಪ್ರಪಂಚವನ್ನು ತೆಗೆದುಕೊಂಡರೆ ಏನೇನು ಅಭಿವೃದ್ಧಿ ಮಾಡಿದ್ದಾರೆ, ಏನೇನು ಹೊಸ ಕೈಗಾರಿಕೆ ಗಳನ್ನು ಮಾಡಿದ್ದಾರೆ, ಹತ್ತಿಪ್ಪತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಯಾವುದಾದರೂ ಹೊಸ ಕೈಗಾರಿಕೆಗಳನ್ನು ಮಾಡಿದ್ದಾರೆಯೆ ಎಂದು ಎಲ್ಲಿಯಾದರೂ ಹೇಳಿದ್ದಾರೆಯೇ ? ಇದು ಒಂದು ಬೋಳು ಲೆಕ್ಕದ ಹಾಗೆ ಇದೆ. ಸಹಕಾರ ಸಂಘಗಳ ಜನರಲ್ ಬಾಡಿ ಮೀಟಿಂಗ್ ಇದ್ದ ಹಾಗೆ ಇದೆ. ಸಹಕಾರ ಸಂಘಗಳಲ್ಲಿ ಕೊಡುವ ವರದಿಯಂಥ ನಮಗೂ ಒಂದು ವರದಿಯನ್ನು ಕೊಟ್ಟಿದ್ದಾರೆ. ಅದಕ್ಕಿಂತ ಹೆಚ್ಚೇನೂ ಇದರಲ್ಲಿ ನಮಗೆ ಗೊತ್ತಾಗುವುದಿಲ್ಲ. ಕೈಗಾರಿಕೆಗಳ ಇಲಾಖೆಯಲ್ಲಿ ದೊಡ್ಡ ಆರ್ಮಿ ಆಫ್ ಆಫೀಸರ್ಸ್ ಇಟ್ಟುಕೊಂಡು ಸಾಧಿಸಿರುವುದಾದರೂ ಏನು ಎಂದು ಕೇಳುತ್ತೇನೆ ? ಅದರಲ್ಲಿನ ವ್ಯವಹಾರ ಸರಿಯಾಗಿ ನಡೆದಿಲ್ಲ. ಕೈಗಾರಿಕೆಯಲ್ಲಿ ಒಂದು ಹೆಜ್ಜೆ ಮುಂದಕ್ಕೆ ಏನಾದರೂ ಹೋಗಿದ್ದೀರಾ ಎಂದರೆ ಏಳು ಕೋಟಿ ರೂಪಾಯಿ ವೆಚ್ಚದಲ್ಲಿ ಹೊಸ ಎಲೆಕ್ಟ್ರಿಕ್ ಫ್ಯಾಕ್ಟರಿಯನ್ನು ಪ್ರಾರಂಭ ಮಾಡಿದ್ದೀರಿ, ಭದ್ರಾವತಿ ಕಬ್ಬಿಣದ ಕಾರ್ಖಾನೆಯನ್ನು ವಿಸ್ತರಿಸಿದ್ದೀರಿ. ಇವನ್ನು ಬಿಟ್ಟರೆ ಬೇರೆ ಏನನ್ನೂ ಮಾಡಿಲ್ಲ. ಗಂಧದ ಎಣ್ಣೆ ಕಾರ್ಖಾನೆಯಿಂದ ಲಾಭ ಬಂದಿದೆ, ಸ್ಯಾಂಡಲ್ ಸೋಪಿ ನಿಂದ ಲಾಭ ಬಂದಿದೆ. ಬಡ್ಜೆಟ್ ಮೆಮೊರಾಂಡಂನಲ್ಲಿ ಕೊಟ್ಟಿರುವ Revenue receipts and expenditure on these industries, ಒಂದು ನೋಡಿದರೆ ನನಗಂತೂ ನಾಚಿಕೆಯಾಗುತ್ತದೆ. ಏನಾದರೂ ಕಾನೂನುಗಳನ್ನು ಮಾಡಬೇಕಾದರೆ ನಮ್ಮ ಪಕ್ಕದ ರಾಜ್ಯವಾದ ಮದ್ರಾಸನ್ನು ತೋರಿಸುತ್ತೀರಿ ಇನ್ನೊಂದಕ್ಕೆ ಆಂಧ್ರವನ್ನು ತೋರಿಸುತ್ತೀರಿ, ಮತ್ತೊಂದಕ್ಕೆ ಮಹಾರಾಷ್ಟ್ರವನ್ನು ತೋರಿಸುತ್ತೀರಿ, ಇದೂ ಮಾಡಲಿಲ್ಲವೆಂದರೆ ಡೆಲ್ಲಿಯನ್ನು ತೋರಿಸುತ್ತೀರಿ. ನಮ್ಮ ರಾಜ್ಯದಲ್ಲಿ

ಯಾವುದಾದರೂ ಒಂದು ಹೆವಿ ಇಂಡಸ್ಟ್ರಿಯನ್ನು ಸ್ಥಾಪನೆ ಮಾಡಿದ್ದೀರಾ ಎಂದು ಕೇಳುತ್ತೇನೆ. ನೀವು ಬರೀ ಮಾತಿನ ಮಲ್ಲರಾಗಿದ್ದೀರಿ, ಬೇಕಾದಷ್ಟು ಮಾತನಾಡುತ್ತೀರಿ. ರಾಮಾಯಣ, ಮಹಾಭಾರತ ಗ್ರಂಥಗಳನ್ನು ಬರೆಯಬಹುದು ಅಷ್ಟು ಮಾತನಾಡುತ್ತೀರಿ. ಆದರೆ ಕಾರ್ಯದಲ್ಲಿ ಏನೂ ಮಾಡುತ್ತಿಲ್ಲ. ಇದನ್ನೆಲ್ಲ ನೋಡಿದರೆ ತಾವು ಇಲ್ಲಿ ಕುಳಿತಿರುವುದಕ್ಕೆ ಲಾಯಖ್ ಅಲ್ಲ ಎಂದು ನಾನು ಹೇಳುತ್ತೇನೆ.

ಅವರು ಬಡ್ಜೆಟ್‌ನಲ್ಲಿ ಖರ್ಚಿನ ಕಡೆ ಒಂದು ಐಟಂ ನ್ನು ಕೊಟ್ಟಿದ್ದಾರೆ; ಬೆಳ್ಳಾರಿ ಚಿನ್ನದ ಗಣಿಯಲ್ಲಿ ಇನ್‌ವೆಸ್ಟಿಗೇಷನ್‌ಗಾಗಿ 1962-63ರಲ್ಲಿ ಖರ್ಚು ಮಾಡಿದ್ದಾರೆ, 1963-64ರಲ್ಲಿ ರಿವೈಸ್ಡ್ ಅಂದಾಜಿನಲ್ಲಿ 67,0 0 ರೂಪಾಯಿ ತೋರಿಸಿದ್ದಾರೆ. ಈ ಹಣ ಏಕೆ ಖರ್ಚಾಗುತ್ತಿದೆ? ಇದರಲ್ಲಿ ಏನು ಇನ್‌ವೆಸ್ಟಿಗೇಷನ್ ನಡೆದಿದೆ? ಅಲ್ಲಿ ಕಟ್ಟಿದ್ದ ಕಟ್ಟಡಗಳು ಬಿದ್ದು ಹೋಗುತ್ತಿವೆ. ಚಿನ್ನದ ಗಣಿಯನ್ನು ಮುಚ್ಚಿ ಅಲ್ಲಿನ ಅಧಿಕಾರಿಗಳು ಹಣ ಸಂಪಾದನೆ ಮಾಡಿಕೊಂಡು ಹೋದಂತಾಯಿತು. ಹೀಗೆಲ್ಲ ಹಣವನ್ನು ನಷ್ಟ ಮಾಡಿ ಕಾಫಿ, ರಾಗಿ; ಮೆಣಸಿನಕಾಯಿ, ಕೊತ್ತಂಬರಿ ಬೀಜ, ಗರ್ಭಿಣಿಯರು, ಮಕ್ಕಳು ಇವರ ಮೇಲೆಲ್ಲ ಸರಕಾರ ಏಕೆ ತೆರಿಗೆ ಹಾಕುವುದು? ರಾಜ್ಯದಲ್ಲಿ ವ್ಯವಸಾಯ, ಕೈಗಾರಿಕೆ, ವಿದ್ಯಾಭ್ಯಾಸ ಇವುಗಳ ಮೇಲೆ ಎಷ್ಟು ಬೇಕಾದರೂ ಖರ್ಚು ಮಾಡಲಿ. ಎನ್. ಇ. ಎಸ್., ಸಿ. ಡಿ. ಬ್ಲಾಕ್ಸ್ ಇವುಗಳನ್ನು ತೆಗೆದುಬಿಡಲಿ. ಹೆಣ್ಣು ಮಕ್ಕಳಿಗೆ ಲಂಗ ಹಾಕುವುದಕ್ಕೆ, ಹೆಂಗಸರಿಗೆ ಜಡೆ ಹಾಕುವುದಕ್ಕೆ ಇಂಥವುಗಳಿಗೆಲ್ಲ ಅಧಿಕಾರಿಗಳೇಕೆ, ಹಣ ಖರ್ಚು ಮಾಡುವುದೇಕೆ? ಇದಕ್ಕೆ ಬದಲಾಗಿ ಕೈಗಾರಿಕೆಗಳನ್ನು ಬೆಳೆಸಲಿ, ಅದರಿಂದ ದೇಶಕ್ಕೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ದೇಶ ಮುಂದುವರಿಯುವುದಕ್ಕಾಗುವುದಿಲ್ಲ. 1963-64ರಲ್ಲಿ ಕೈಗಾರಿಕೆಗಳಿಗೆ 9,89,70,500 ರೂಪಾಯಿ ಬಡ್ಜೆಟ್ ಅಂದಾಜು, ರಿವೈಸ್ಡ್ ಮತ್ತು ಸಪ್ಲಿಮೆಂಟಲ್ ಎಲ್ಲವೂ ಸೇರಿ 10 ಕೋಟಿ 89 ಲಕ್ಷ ಕೇಳಿದ್ದರು, ಈ ವರ್ಷಕ್ಕೆ ಸುಮಾರು ಒಂದೂವರೆ ಕೋಟಿ ರೂಪಾಯಿ ಹೆಚ್ಚು ಕೇಳಿದ್ದಾರೆ. ಇಷ್ಟು ಹಣ ಖರ್ಚು ಮಾಡಿದರೆ ಪ್ರತಿಫಲ ಎಷ್ಟು ಬಂತು ಎಂಬುದಕ್ಕೆ ಏನಾದರೂ ಒಂದು ವಿವರಣೆ ಕೊಟ್ಟಿದ್ದಾರೆಯೇ? ಈ ಸಾರಿ ಏನೋ ಒಂದು ಚೀಟಿ ಕೊಟ್ಟಿದ್ದಾರೆ. ಹೋದ ವರ್ಷ ಮತ್ತು ಆಚೆ ವರ್ಷ ಏನೂ ಇಲ್ಲ. ನೆನ್ನೆ ಒಂದು ಬಣ್ಣದ ಪುಸ್ತಕ ಕೊಟ್ಟಿದ್ದಾರೆ, ಅದರಲ್ಲಿ ಆನೆ ಕುದುರೆಗಳ ಚಿತ್ರ ಇದೆ. ನಷ್ಟದಲ್ಲಿ ಕೆಲಸ ಮಾಡುತ್ತಿದ್ದು ಈಗ ಏನೋ ಜೀವ ಉಳಿದಿದೆ. ಇದರಿಂದೇನೂ ಪ್ರಯೋಜನವಿಲ್ಲ. ಯಾವ ಕಂಪೆನಿಗಳು ನಷ್ಟದಲ್ಲಿ ಕೆಲಸ ಮಾಡುತ್ತಿದ್ದವೋ ಅವನ್ನು ಆದಾಯ ಬರುವ ಹಾಗೆ ಮಾಡಿದ್ದೇವೆಂದು ಅಹಂಕಾರ ಪಡುವುದಾದರೆ ಅದರಿಂದ ದೇಶದ ಹಿತಸಾಧನೆ ಯಾಗುವುದಿಲ್ಲ; 1958ರಲ್ಲಿ ಶ್ರೀ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ ಆಡಳಿತದ ಬಗ್ಗೆ ವರದಿ ಮಾಡಲು ಗೋರ್‌ವಾಲ ಎಂಬುವರನ್ನು ನೇಮಕ ಮಾಡಿದರು. ಅವರು ಒಂದು ವರದಿಯನ್ನು ಕೊಟ್ಟಿರುವುದರಲ್ಲಿ ನಮ್ಮ ಕೈಗಾರಿಕೆಗಳ ಬಗ್ಗೆ ಹೇಳಿದ್ದಾರೆ. ಸರಕಾರದವರು 24 ಖಾಸಗಿ ಕೈಗಾರಿಕೆಗಳಲ್ಲಿ ಹಣವನ್ನು ಹಾಕಿದ್ದಾರೆ; ಇದು ಸುಮಾರು ಮೂರೂವರೆಯಿಂದ ನಾಲ್ಕು ಕೋಟಿ ರೂಪಾಯಿವರೆಗೆ ಹೋಗುತ್ತದೆ. ಅದರಲ್ಲಿ ಒಂದು ಕೈಗಾರಿಕೆ ಕಂಪನಿ ಕೂಡ ಒಂದಾಣೆ ಲಾಭವನ್ನೂ ಕೊಟ್ಟಿಲ್ಲ. ಉದಾಹರಣೆಗೆ ಹಿಂದೂಸ್ಥಾನ್ ಏರ್‌ಕ್ರಾಫ್ಟಿಗೆ 60 ಲಕ್ಷ ರೂಪಾಯಿ ಹಾಕಿರುವುದು, ಅದು ಏನು ಡಿವಿಡೆಂಡ್ ಕೊಟ್ಟಿದೆ? ಇದನ್ನು ಕೇಳಿದರೆ ಅದು ರಕ್ಷಣೆಗೆ ಸಂಬಂಧಪಟ್ಟದ್ದು ಎಂದು ಹೇಳುತ್ತಾರೆ.

The Minister for Communications, Government of India, has said in his letter No. 9 TP (2) 52 PTI dated 2nd February 1955 that 'if the Mysore Government so desires, I am prepared to consider paying back their investment in the Telephone Industry and H. A. L.''

ಟೆಲಿಫೋನ್ ಇಂಡಸ್ಟ್ರೀಸ್ ಮತ್ತು ಹಿಂದೂಸ್ಥಾನ್ ಏರ್‌ಕ್ರಾಫ್ಟ್, ಈ ಎರಡು ಕಂಪನಿಗಳಲ್ಲಿ ಹಾಕಿದ ಹಣವೆಷ್ಟು ಮತ್ತು ಅವುಗಳಿಂದ ಬಂದ ಫಲವೆಷ್ಟು ಎಂದು ಯೋಚನೆ ಮಾಡಬೇಕು. ಇಂಡಿಯಾ ಸರಕಾರಕ್ಕೂ ಲಾಭ ಬರುತ್ತಿಲ್ಲ ಎಂದು ಹೇಳಬಹುದು, ಆದರೆ ಅವರು ಅಮೆರಿಕ, ರಷ್ಯಾ ಮುಂತಾದ ದೇಶಗಳಿಂದ ಹಣ ತರುತ್ತಾರೆ ಆದರೆ ನಿಮಗೆ ಇದರಲ್ಲೇನು ಅಧಿಕಾರವನ್ನಿಟ್ಟುಕೊಂಡಿದ್ದೀರೆಂದು ನಮ್ಮ ಸರಕಾರದವರನ್ನು ಕೇಳುತ್ತೇನೆ. 60 ಲಕ್ಷ ರೂಪಾಯಿಗಳನ್ನು ಪೋಸ್ಟ್ ಆಫೀಸಿನಲ್ಲಿ ಸೇವಿಂಗ್ಸ್ ಡಿಪಾಜಿಟ್ ಇಟ್ಟ ಹಾಗೆ ಇಟ್ಟಿದ್ದಾರೆ, ಆದರೆ ಅದಕ್ಕೆ ಬಡ್ಡಿ ಬರುವುದಿಲ್ಲ; ಯಾವ ರೀತಿ ಖರ್ಚು ಮಾಡುತ್ತೀರಿ ಎಂದು ಕೇಳುವಹಾಗಿಲ್ಲ. ಅಲ್ಲಿಗೆ ಸಿಬ್ಬಂದಿ ನೇಮಕ ಮಾಡುವುದರಲ್ಲಿ ಇವರಿಗೇನೂ ಅಧಿಕಾರವಿಲ್ಲ. ಮೈಸೂರು ಸರಕಾರ ಎಲ್ಲಿ ಬೇಕಾದರೂ ಹಣ ತೆಗೆದುಕೊಂಡು ಹೇಗೆ ಬೇಕಾದರೂ ಉಪಯೋಗ ಮಾಡಬಹುದೆಂದು ಹೇಳುತ್ತಾರೆಯೇ? ಇದೇ ಒಂದು ಕೋಟಿ ರೂಪಾಯನ್ನು ಬೇರೆ ಕಡೆ ಬಂಡವಾಳ ಹಾಕಿಕೊಂಡು ಇನ್ನೊಂದು ಕೈಗಾರಿಕೆಯನ್ನು ಪ್ರಾರಂಭ ಮಾಡಬಹುದು. ಇದಾಗದಿದ್ದರೆ ಆಡಳಿತವನ್ನು ಬೇರೆಯವರ ಕೈಗೆ ಕೊಟ್ಟುಬಿಡಲಿ.

ಶ್ರೀ ಕೆ. ಮಲ್ಲಪ್ಪ.—ಎಚ್. ಎ. ಎಲ್. ಮತ್ತು ಐ. ಟಿ. ಐ.ನಲ್ಲಿ ಷೇರು ಹಣ ಹಾಕಿದ್ದೇವೆ, ಈಹೊತ್ತು ಇಂಡಿಯಾ ಸರಕಾರವನ್ನು ಕೇಳಿದರೆ ಅದನ್ನು ನಮಗೆ ಕೊಡುವುದಿಲ್ಲ, ಆ ಷೇರುಗಳನ್ನು ಮಾರಾಟ ಮಾಡಿದರೆ ಯಾರೂ ತೆಗೆದುಕೊಳ್ಳುವುದಿಲ್ಲ, ನಾವೇನು ಮಾಡಬೇಕು ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸರಕಾರದವರೇ ನಡೆಸುತ್ತಿರುವ 11 ಕೈಗಾರಿಕೆಗಳಲ್ಲಿ ಎರಡು ಮಾತ್ರ ಸರಿಯಾಗಿ ಲಾಭ ಕೊಡುತ್ತಿವೆ ಎಂದು 1958ರಲ್ಲಿ ಶ್ರೀ ಗೋರವಾಲಾ ಅವರು ಹೇಳಿದ್ದಾರೆ. ಶ್ರೀ ಮಲ್ಲಪ್ಪನವರ ಇಂಟೆಗ್ರಿಟಿ, ಆನೆಸ್ಟಿ, ಪೇಟ್ರಿಯಾಟಿಸಂ, ಇವುಗಳನ್ನು ನಾನು ಪ್ರಶ್ನೆ ಮಾಡುವುದಿಲ್ಲ; ಆದರೆ ನಿಮ್ಮ ಎಬಿಲಿಟಿ ವಿಚಾರವನ್ನು ಮಾತ್ರ ಹೇಳುತ್ತೇನೆ. ನಿಮ್ಮಂಥವರು ಮಂತ್ರಿಯಾಗಿ ಬಂದ ಮೇಲೆ ಒಂದು ಕೈಗಾರಿಕೆಯನ್ನೂ ಹೊಸದಾಗಿ ಪ್ರಾರಂಭ ಮಾಡಿಲ್ಲ.

ಶ್ರೀ ಕೆ. ಮಲ್ಲಪ್ಪ.—ಭದ್ರಾವತಿ ಕಾರ್ಖಾನೆಯನ್ನು ನೋಡಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಭದ್ರಾವತಿ ಕಾರ್ಖಾನೆಯನ್ನು ದೊಡ್ಡದು ಮಾಡಿದುದು ಒಂದು ದೊಡ್ಡ ಕೆಲಸ ಎಂದು ಹೇಳಬೇಡಿ.

ಶ್ರೀ ಕೆ. ಮಲ್ಲಪ್ಪ.—ಸ್ಪೆಷಲ್ ಸ್ಟೀಲ್ ಇಂಡಿಯಾ ದೇಶದಲ್ಲಿ ಎಲ್ಲಿಯೂ ತಯಾರಾಗದೇಯಿರುವುದನ್ನು ನಾವು ಮಾಡುತ್ತಿದ್ದೇವೆಂಬುದನ್ನು ನೋಡಿ ಹೆಮ್ಮೆ ಪಡಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಿಮಗೆ ಶಹಬಾಸ್‌ಗಿರಿ ಕೊಡುತ್ತಾರೆ, ಸಂತೋಷ ಪಡುತ್ತಾರೆ. ಪಕ್ಕದ ಮದರಾಸು ರಾಜ್ಯಕ್ಕೆ ಹೋಗಿನೋಡಿ.

ಶ್ರೀ ಕೆ. ಮಲ್ಲಪ್ಪ.—ದೂರಕ್ಕೆ ಬೆಟ್ಟ ನುಣ್ಣಗೆ ಎಂದು ಹೇಳುತ್ತಾರೆ. ನೆರೆ ಮನೆಯ ಹೆಂಗಸರು ಚೆನ್ನಾಗಿ ಕಾಣುತ್ತಾರೆ

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಂಡಿಯಾ ದೇಶದಲ್ಲಿ ಎಲ್ಲಿಯೂ ಇಲ್ಲದಿರುವ ಸ್ಪೆಷಲ್ ಸ್ಟೀಲ್ ನಾವು ತಯಾರು ಮಾಡುತ್ತೇವೆ ಎಂದು ಭುಜ ತಟ್ಟಿಕೊಂಡರೆ ಅದಕ್ಕೆ ಕಾರಣ ನೀವೂ ಅಲ್ಲ ನಾವೂ ಅಲ್ಲ. ನಿಮ್ಮ ಕಾಲದಲ್ಲಿ ಹೊಸದಾಗಿ ಹತ್ತಾರು ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದರೆ ನಿಮಗೆ ಕೀರ್ತಿ ಬರುತ್ತದೆ. ಹಾಗಿಲ್ಲದೆ ವಿರಾಟರಾಯನ ದನಗಳನ್ನು ಕೌರವರು ಹಿಡಿದಾಗ, ಅಂತಃಪುರದಲ್ಲಿ ಕುಳಿತುಕೊಂಡು ಉತ್ತರ ಕುಮಾರ ಹೇಳಿದಂತೆ, 'ನಾನು ಕಾಣದ ಭೀಷ್ಮನೆ, ನಾನು ಕಾಣದ ದುರ್ಯೋಧನನೆ, ನಾನು ಕಾಣದ ಕರ್ಣನೆ ಒಂದು ಕ್ಷಣದಲ್ಲಿ ಅವರನ್ನು ಗೆಲ್ಲುತ್ತೇನೆ' ಎಂದು ಹಾಗೆ ಹೇಳಿದವನು, ಕೌರವರನ್ನು ನೋಡಿ, ನನಗೆ ಯುದ್ಧ ಬೇಡ, ರಾಜ್ಯ ಬೇಡ, ದನ ಬೇಡ, ಪ್ರಾಣವೊಂದುಳಿಸಿದರೆ ಸಾಕು ಎಂದು ಹಿಂದಕ್ಕೆ ಓಡಿಬಂದಂತಾಗಬಾರದು. ರಾಜ್ಯದ ಸಂಪತ್ತನ್ನು ಬೆಳೆಸಿ, ದಕ್ಷತೆಯನ್ನು ಹೆಚ್ಚಿಸಿ ಮೈಸೂರು ರಾಜ್ಯ ಮೊದಲ ಸ್ಥಾನ ಪಡೆದಿದೆ ಎಂದು ಆಗ ಹೇಳಿಕೊಳ್ಳಿ. ಈ ಉದ್ದೇಶದಿಂದ ಹೇಳುತ್ತಿದ್ದೇನೆಯೇ ಹೊರತು ಸುಮ್ಮನೆ ಟೀಕೆ ಮಾಡುವುದಕ್ಕೆ ನನಗಿಷ್ಟವಿಲ್ಲ;

3-30 P. M.

ಸ್ವಾಮಿ ಇನ್ನು ಒಂದು ವಿಷಯ ಹೇಳುತ್ತೇನೆ. ನಮ್ಮ ಮೈಸೂರು ರಾಜ್ಯದಲ್ಲಿ ಇರತಕ್ಕಂಥ ರಾ ಮೆಟೀರಿಯಲ್-ಕಚ್ಚಾ ಮಾಲು ಏನೇನು ಇದೆ ಎಂಬುದಕ್ಕೆ ಸರ್ವೆ ಮಾಡಿಸಿದ್ದೀರಾ? ಮದ್ರಾಸ್ ರಾಜ್ಯದಲ್ಲಿ ಇದಕ್ಕಾಗಿ ಎರಡು ಕಮಿಟಿ ಮಾಡಿದ್ದಾರೆ. ದೇಶಾದ್ಯಂತ ಓಡಾಡಿ ಯಾವ ಯಾವ ಖನಿಜ ಸಂಪತ್ತು ಎಲ್ಲೆಲ್ಲಿ ಎಷ್ಟೆಷ್ಟು ಇದೆ, ಎಷ್ಟು ಸಿಕ್ಕುತ್ತದೆ, ಅದನ್ನು ಉಪಯೋಗಿಸಿ ಯಾವ ಯಾವ ಫ್ಯಾಕ್ಟರಿ ಪ್ರಾರಂಭ ಮಾಡಬಹುದು ಎಂಬುದಕ್ಕೆ ರಿಪೋರ್ಟ್ ತಯಾರುಮಾಡಿ ಹೇಗೆ ಮದ್ರಾಸು ರಾಜ್ಯದಲ್ಲಿ ಇಂಪ್ಲಿಮೆಂಟ ಮಾಡುತ್ತಾ ಇದ್ದಾರೆಯೋ ಹಾಗೆ ಏನಾದರೂ ನೀವು ಮಾಡಿದ್ದೀರಾ ?

ಶ್ರೀ ಕೆ. ಮಲ್ಲಪ್ಪ.—ನ್ಯಾಷನಲ್ ಕೌನ್ಸಿಲ್ ಫಾರ್ ಅಪ್ಲೈಡ್ ಎಕನಾಮಿಕ್ ರಿಸರ್ಚ ಅವರ ರಿಪೋರ್ಟು ಬಂದಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕಳೆದ 17 ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ ಯಾವದೊಂದು ಹೊಸ ಫ್ಯಾಕ್ಟರಿ, ಒಂದು ಹೊಸ ಕೈಗಾರಿಕೆ ಸ್ಥಾಪನೆ ಮಾಡಿಲ್ಲ. ಇದು ದೇಶಕ್ಕೆ ಅನ್ಯಾಯ, ದ್ರೋಹ ಮಾಡಿದ ಹಾಗೆ ಆಗಿದೆ. ಕೇಂದ್ರ ಸರಕಾರದ ಸಹಾಯ ಪಡೆದು ಕೈಗಾರಿಕೆಗಳನ್ನು ಪ್ರಾರಂಭಿಸಬೇಕು. ಸರ್ ವಿಶ್ವೇಶ್ವರಯ್ಯ ಅವರು ಹೇಳಿರುವ ಹಾಗೆ ಹೊಸ ಹೊಸ ಕೈಗಾರಿಕೆಗಳನ್ನು ರಾಜ್ಯದಲ್ಲಿ ಪ್ರಾರಂಭಿಸಿ ಸಫಲರಾಗಬೇಕೆಂದು ಸರಕಾರಕ್ಕೆ ಕೇಳಿಕೊಳ್ಳುತ್ತೇನೆ.

ಇನ್ನು ಸ್ಟೇನಲೆಸ್ ಸ್ಟೀಲ್ ಕಾರಖಾನೆ ವಿಚಾರದಲ್ಲಿ ಈ ಸಭೆಯಲ್ಲಿ ಬೇಕಾದಷ್ಟು ಪ್ರಶ್ನೋತ್ತರಗಳು ಆಗಿವೆ ಅದರ ಬಗ್ಗೆ ಹೆಚ್ಚು ಹೇಳುವ ಅಗತ್ಯವಿಲ್ಲ. ಇನ್ನು ರೂರಲ್ ಇಂಡಸ್ಟ್ರೀಜ್ ಬಗ್ಗೆ ಒಂದು ಮಾತು ಹೇಳಲು ಬಯಸುತ್ತೇನೆ. ಗ್ರಾಮಕೈಗಾರಿಕೆ ವಿಚಾರದಲ್ಲಿ ಏನಾಗಿದೆ ಎಂದರೆ

ಸಹಕಾರಿ ಸಂಘಗಳಲ್ಲಿ ಸೇರಿಕೊಂಡಿರುವ ಗೂಳಿಗಳ ಹಾಗೆ ಇಲ್ಲಿಯೂ ಕೂಡ ಹುಲ್ಲು ಮೇಯುವ ಗೂಳಿಗಳು ಸೇರಿಕೊಂಡಿವೆ. ಇವು ದನಾ ಮೇಯುವ ಮೈದಾನವಾಗಿವೆ. ದಿನದಿನಕ್ಕೆ ಈ ಗೂಳಿಗಳ ಹಾವಳಿ ಜಾಸ್ತಿಯಾಗಿದೆ. ಈ ಭೂತಗಳು ಹೆಚ್ಚಾಗಿವೆ. ಖಾದಿ ಬೋರ್ಡಿನಲ್ಲಿ ನಾಲ್ಕು ಲಕ್ಷ ರೂಪಾಯಿ ವ್ಯವಹಾರದ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಐದು ಕೋಟಿ ವ್ಯವಹಾರದಲ್ಲಿ ಅನೇಕ ಗೂಳಿಗಳು ಸೇರಿಕೊಂಡಿವೆ. ಹಣ ತಿಂದು ಬಿಟ್ಟಿದ್ದಾರೆ. ಕೈಗಾರಿಕೆ ಪ್ರಾರಂಭಿಸುತ್ತೇವೆಂದು ಎಕ್ಕಡ, ಬೂಟು, ಮಳೆ ಮುಂತಾದ ತಯಾರ್ರಾಮಾಡುವ ಕೈಗಾರಿಕೆ ಪ್ರಾರಂಭಿಸುವುದಕ್ಕೆ ಉತ್ತೇಜನ ಕೊಡುತ್ತಿದ್ದೀರಿ. ಮನಸ್ಸಿಗೆ ಬಂದ ಹಾಗೆ ವ್ಯವಹಾರ ನಡೆಯುತ್ತಿದೆ. ಇದರಿಂದ ದೇಶಕ್ಕೆ ಕಲ್ಯಾಣವಾಗುವುದಿಲ್ಲ. ಜನತೆಗೆ ಮಾನ ಬರುವುದಿಲ್ಲ. ಒಂದು ವಿಷಯ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಊರಿನಲ್ಲಿ ಒಂದು ಲಂಬಾಣಿ ಸಂಘಕ್ಕೆ ಚಾಪೆ ತಯಾರ್ರಾಮಾಡುವುದಕ್ಕೆ ಸರಕಾರ ಹಣ ಸಹಾಯ ಕೊಟ್ಟಿದ್ದಾರೆ. ಸರಕಾರದಿಂದ ಅಲ್ಲಿಯ ಕಂಟ್ರಾಕ್ಟರು ಹಣ ತೆಗೆದುಕೊಂಡು ಹೋಗಿದ್ದರೂ ಕೂಡ ಏನೇನೂ ಕೆಲಸ ಮಾಡಿಲ್ಲ. ಅದರ ಬಗ್ಗೆ ಎನ್‌ಕ್ವಾಯಿರಿ ಇಲ್ಲ. ಇನ್‌ವೆಸ್ಟಿಗೇಶನ್ ಇಲ್ಲ. ಇದು ನ್ಯಾಯವೇ? ಕೊಟ್ಟ ಹಣ ವಾಪಸ್ ಬರುತ್ತಾ ಇಲ್ಲ. ಕೈಗಾರಿಕೆ ಪ್ರಾರಂಭ ಮಾಡಿಲ್ಲ. ತುಮಕೂರು ಧಾರವಾಡ ಇಡಸ್ಟ್ರಿಯಲ್ ಪ್ರೊಜಿಕ್ಟಿಗೆ ಯಾವ ಸೆಕ್ಯೂರಿಟಿ ಮೇಲೆ ಹಣ ಕೊಟ್ಟಿದ್ದೀರಿ? ಸಾಲ ಕೊಟ್ಟ ಹಣಕ್ಕೆ ಬಡ್ಡಿ ಬರುತ್ತದೆಯೇ? ಎಲ್ಲಾ ಅಸ್ತವ್ಯಸ್ತವಾಗಿದೆ ಇದನ್ನು ತಡೆಗಟ್ಟಿದ್ದರೆ ರಾಜ್ಯದ ಹಣ ಕಾಸಿನ ಪರಿಸ್ಥಿತಿ ಇಷ್ಟು ಭಯಗ್ರಸ್ತವಾಗುತ್ತಿರಲಿಲ್ಲ. ನಾವು ಹೇಳುವುದು ಅರಣ್ಯರೋದನವಾಗಿದೆ. ಇದು ಇದೇ ರೀತಿ ನಡೆದರೆ ಸರಕಾರ ದಿವಾಳೀ ಆಗದೆ ಏನು ಆಗುತ್ತದೆ.? ಶ್ರೀಮಾನ್ ಮಲ್ಲಪ್ಪನವರೇ ಸ್ವಲ್ಪ ಭದ್ರವಾಗಿ ಇರಬೇಕು. ನೀವು ಮಂತ್ರಿ ಮಂಡಳದಲ್ಲಿ 1967ರ ವರೆಗೆ ಸ್ಥಿರವಾಗಿ ಇರುತ್ತೀರಿ. ನಿಮ್ಮನ್ನು ಯಾರು ಕೆಳಗೆ ಇಳಿಸುವುದಕ್ಕೆ ಹೋಗುವುದಿಲ್ಲ. ಚೆಂಕಿಪಟ್ಟಣ, ಚೇಪು ತಯಾರು ಮಾಡುವ ಕೈಗಾರಿಕೆಗಳನ್ನು ನಿಲ್ಲಿಸಿ. ಖಾದಿ ಬೋರ್ಡಿಗೆ ಕೇಂದ್ರ ಸರಕಾರದವರು ಖಾದಿ ಕಮಿಶನ್ ಅವರು ದುಡ್ಡು ಕೊಡುತ್ತಾರೆ. ಯಾವ ಸೊಸೈಟಿಯವರೂ ಕೂಡ ದುಡ್ಡು ತೆಗೆದುಕೊಂಡು ಹೋಗಿ ಭಜ ಗೋವಿಂದಂ ಭಜ ಗೋವಿಂದಂ ಎಂದು ಹೇಳುತ್ತಾ ಕುಳಿತುಕೊಳ್ಳುತ್ತಾರೆ. ಆದುದರಿಂದ ಈ ಕೈಗಾರಿಕೆಗಳಲ್ಲಿ ದುಡ್ಡು ತೆಗೆದುಕೊಂಡು ಹೋಗಿ ಏನು ಮಾಡುತ್ತಿದ್ದಾರೆ, ಏನು ನಡೆದಿವೆ ಎಂಬುದನ್ನು ಪರಿಶೀಲನೆ ಮಾಡಬೇಕು. ಗೂಳಿಗಳು ಸೇರಿದಂಥ ಬೋರ್ಡ್ ಅಬಾಲಿಶ್ ಮಾಡಬೇಕು. ಖಾದಿ ಬೋರ್ಡನ್ನು ಇಂಡಸ್ಟ್ರೀಜ್ ಡಿಪಾರ್ಟಮೆಂಟು ತೆಗೆದುಕೊಳ್ಳಲಿ. ಅದಕ್ಕೆ ಇನ್ನೊಬ್ಬ ಡೈರೆಕ್ಟರ್ ಅವರನ್ನು ಅಪಾಯಿಂಟ ಮಾಡಿ. ಸರಿಯಾದ ಹತೋಟಿ ಬರುವ ಹಾಗೆ ಮಾಡಬೇಕಾದುದು ಅಗತ್ಯ. ಇದನ್ನು ಸರಕಾರಕ್ಕೆ ಬಹಳ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸರಕಾರಕ್ಕೆ ಹೊಸ ಟ್ಯಾಕ್ಸ್ ಹಾಕತಕ್ಕಂಥ ಬುದ್ಧಿವಂತಿಕೆ ಇದೆ. ಆದರೆ ದೇಶದ ಕಲ್ಯಾಣ ಮಾಡತಕ್ಕದ್ದು ಹೇಗೆ ಎಂಬುದನ್ನು ತಿಳಿದುಕೊಂಡಿಲ್ಲ. ಯಾವುದೇ ಸುಂಕ ತೆರಿಗೆ ಹಾಕುವುದಕ್ಕೆ ಮನಸ್ಸು ಮಾಡಬೇಡಿ ಪ್ರಯತ್ನ ಮಾಡಬೇಡಿ ಎಂದು ಹೇಳುತ್ತೇನೆ.

ಶ್ರೀ ಕೆ. ಮಲ್ಲಪ್ಪ.—ನಮ್ಮ ಕೈಯಿಂದ ಏನು ಅನ್ಯಾಯ ನಡೆಯುತ್ತಿದೆ ತಿಳಿಯಲಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—1957ರಲ್ಲಿ ಇಂಡಸ್ಟ್ರಿಯಲ್ ಎಕ್ಸಟೆನ್‌ಷನ್ ಆಫೀಸರ್ ಎಂದು ಐದು ಭಾಗಗಳಿಗೆ ನೇಮಕ ಮಾಡಿದ್ದೀರಿ. ಕೇಡರಿನಲ್ಲಿ ಮೊದಲು ಜೂನಿಯರ್ ಎಕ್ಸಟೆನ್‌ಶನ್ ಆಫೀಸರ್ ಆಗಿದ್ದವರು ಈಗ ಸೀನಿಯರ್ ಆಗಿದ್ದಾರೆ. ಹಳೇ ಮೈಸೂರಿನ 11 ಜನ ಆಫೀಸರಿಗೆ ಅವರು ಜ್ಯೂನಿಯರ್ಸ ಎಂದು ಪ್ರಮೋಷನ್ ಕೊಟ್ಟಿಲ್ಲ ಹಳೇ ಮೈಸೂರಿನ ಸೀನಿಯರ್ ಆಫೀಸರುಗಳನ್ನು ಜ್ಯೂನಿಯರ್ ಮಾಡುವುದಕ್ಕೆ ಪಟ್ಟಿ ಬದಲಾವಣೆ ಮಾಡಿದ್ದೀರಿ. ಇದಲ್ಲದೆ ಇವರೆಲ್ಲರನ್ನೂ ಕೋ-ಆಪರೇಟಿವ್ ಡಿಪಾರ್ಟಮೆಂಟಿನಲ್ಲಿ ಡಂಪ್ ಮಾಡಲು ಹೊರಟಿದ್ದೀರಿ. ಇದು ನ್ಯಾಯವಲ್ಲ. ದೇವರು ಅವರಿಗೆ ಒಳ್ಳೆಯದನ್ನು ಮಾಡಲಿ. 1957ರಲ್ಲಿ ಪಟ್ಟಿ ತಯಾರ್ರಾಮಾಡುವಾಗ್ಗೆ ಪ್ಲಾನಿಂಗ್ ಕಮಿಷನ್ ಅವರು ಈ ರೀತಿ ಹೇಳಿದ್ದಾರೆ.

> "In the staffing pattern of the NES Block as prescribed by the Ministry of Community Development, there is a provision for the appointment of village extension block. The Minister of Community Development have stated that the Extension Officer of the village and small scale industries will form part of the Industries Department of the State."

The Minister for Co-operation and Development has said that the Extension Officers for village and small industries will form part of the

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ

Industries Department of the State. A Degree-holder or Diploma-holder of any Branch of Engineering, a Degree-holder in Pure Applied Physics, a Degree-holder in Chemistry, a Degree-holder in Biology, a Bachelor of Commerce ಇವತ್ತು ಪಟ್ಟಿಯನ್ನು ತಲೆಕೆಳಕು ಮಾಡಿಬಿಟ್ಟಿದ್ದಾರೆ. ಇವತ್ತು ಹಳೆ ಮೈಸೂರಿನ 11 ಜನಕ್ಕೆ ಸಹಾಯಮಾಡಿ, ಅವರಿಗೆ ಪ್ರಮೋಶನ್ ಕೊಡಬೇಕು. ಅವರನ್ನು ಕೋಆಪರೇಟಿವ್ ಡಿಪಾರ್ಟ್‌ಮೆಂಟಿಗೆ ತಳ್ಳಬೇಕೆಂದಿದ್ದಾರೆ. They have to be promoted as Assistant Directors fo Industries. ತಮಗೆ ಗೊತ್ತಿಲ್ಲದೆ ಹೋದರೆ ನನ್ನ ಹತ್ತಿರ ವಿಚಾರ ವಿನಿಮಯ ಮಾಡಿ. ಈ ವಿಚಾರದಲ್ಲಿ ತೀರ್ಮಾನ ತಗೆದುಕೊಳ್ಳುವುದಕ್ಕೆ ಮುಂಚೆ ನಮ್ಮನ್ನೂ ಒಂದು ಮಾತು ಕೇಳಿ.

ತಾವು ಈ ಕೈಗಾರಿಕೆ ಪ್ರಪಂಚದಲ್ಲಿ ಏನು ಸಾಧನೆ ಮಾಡಿದ್ದೀರ ಅದು ಅಷ್ಟು ತೃಪ್ತಿಕರವಾಗಿಲ್ಲ ಇನ್ನು ಎರಡು ವರ್ಷದಲ್ಲಿಯಾದರೂ ನಮಗೆ ತೃಪ್ತಿಯಾಗುವ ರೀತಿಯಲ್ಲಿ ಏನಾದರೂ ಮಾಡಿದರೆ, ದೇಶದ ಅಭ್ಯುದಯವನ್ನೂ, ಸಂಪತ್ತನ್ನೂ ಸಾಧಿಸಿದಹಾಗೆ ಆಗುತ್ತದೆ.

ನನ್ನ ಇಷ್ಟು ಹೇಳಲು ಅವಕಾಶಕೊಟ್ಟ ಅಧ್ಯಕ್ಷಣಿಯರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† Sri GANJI VEERAPPA (Harihar).—When we discuss this Demand on Industry, we as Mysoreans will be failing in our duty if we do not remember the great old man of Mysore who is no more to-day, when he said 'Industrialise or Perish'. This talk of industry and more so the importance of the rural folk and the encouragement to the village industries, this talk was when Sir M. Visvesvaraya was in charge of the affairs of Mysore. I hope my friends will agree with me when I say that in Mysore we do not see, in spite of the fact that we are already at the fag end of the Third Plan, our economic resources having improved appreciably. For a country's progress on the economic side, two things we must remember. Why our neighbouring States like Madras and Andhra are a bit better than us, is because their agriculture is better, they have got more of irrigation and they have got more of industries. This is the occasion when we should talk of industries and though Mysore was a pioneer and the first State in India to give encouragement to industries and the State itself came forward to start several industries. To-day we must remember that and see that more and more of industries come into existence. I am glad no doubt some progress has been made. As the Minister for Industries has just now said we must be proud of Bhadravathi Iron and Steel Works expansion because we will be having a plant to produce special steel; we must be proud of cement industry. The Porcelain factory has increased production; it is paying well we have got spun silk factory. To-day every industry is paying. Even the Implements Factory at Hassan which is much talked of is not incurring any loss, thanks to the efforts of the Government.

In this connection, I must say a word about the Central industries that are here. No doubt some of the very important industries are located in Bangalore. Not that we are content with that. We want several industries to come to Bangalore, because Bangalore is most ideally suited for the starting of industries. There is salubrious climate; we have ample electricity and more than all, a good Government that gives all encouragement to big industries that the Centre is starting.

